ಬ್ಯಾಂಕಿಂಗ ಪ್ರಪಂಚ

ಸಂಪಾದಕರು

ಎಚ್ಚೆಸ್ಕೆ

ಸಣ್ಣ ಕೈಗಾರಿಕೆಗಳ ವಿಶೇಷ ಸಂಚಿಕೆ

ಡಿಸೆಂಬರ್

೪

೧೯೮೧

ಸಮನ್ವಯ ಸಮಿತಿ (ರಿ.)
(ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)
ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ನಗರ ಶಾಖೆ
ಬೆಂಗಳೂರು 560 002

ಹಣ ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ಅರ್ಧವಾರ್ಷಿಕ

ಭೂ ಬ್ಯಾಂಕ್

ನಿಮಗೆ

ಪ್ರಗತಿ ಮತ್ತು ಸಮೃದ್ಧಿಗಳನ್ನು ತರುತ್ತದೆ

* ಒಟ್ಟು ಸಾಲ ಮಂಜೂರಾತಿ	ರೂ.	246	ಕೋಟಿ
* ಲಾಭ ಪಡೆದ ರೈತ ಕುಟುಂಬಗಳು		5.16	ಲಕ್ಷ
* ನಮ್ಮ ನೆರವಿನಿಂದಾದ ನೀರಾವರಿ ಬಾವಿಗಳು		1.48	ಲಕ್ಷ
* ನೀರಾವರಿ ಪಂಪು ಸೆಟ್ಟುಗಳು		0.60	ಲಕ್ಷ
* ಸಣ್ಣ ನೀರಾವರಿ ಯೋಜನೆಯಲ್ಲಿ ಕೊಟ್ಟ ಹಣ	ರೂ.	102	ಕೋಟಿ
* ಸಣ್ಣ ನೀರಾವರಿ ಯೋಜನೆಗೆ ಒಳಪಡಿಸಿದ ಹೆಚ್ಚುವರಿ ಪ್ರದೇಶ		5.10	ಲಕ್ಷ ಎಕರೆ
* ದೊಡ್ಡ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶಗಲ್ಲಿ ಭೂ ಪರಿವರ್ತನೆ		3.32	ಲಕ್ಷ ಎಕರೆ
* ತೋಟಗಾರಿಕೆ ಯೋಜನೆಯಲ್ಲಿ ಅಭಿವೃದ್ಧಿಯಾದ ಪ್ರದೇಶ		89,600	ಎಕರೆ
* ಟ್ರ್ಯಾಕ್ಟರುಗಳು		3,664	
* ಪವರ್ ಟಿಲ್ಲರುಗಳು		769	
* ಲಾಭ ಪಡೆದ ಸಣ್ಣ ರೈತರ ಕುಟುಂಬಗಳು		2.41	ಲಕ್ಷ
* ಸಣ್ಣ ರೈತರಿಗೆ ಕೊಟ್ಟ ಸಾಲ	ರೂ.	82.13	ಕೋಟಿ
* ಸಂಯುಕ್ತ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ದುರ್ಬಲ ವರ್ಗದ ರೈತರಿಗೆ ಕೊಟ್ಟ ಸಾಲ	ರೂ.	99.80	ಲಕ್ಷ
* ಭೂ ಸುಧಾರಣಾ ಯೋಜನೆಯಲ್ಲಿ ಸಾಲ ತೆಗೆದುಕೊಂಡ ಗೇಣಿದಾರರು		60,020	
* ಭೂ ಸುಧಾರಣಾ ಯೋಜನೆಯಲ್ಲಿ ಕೊಟ್ಟ ಸಾಲ	ರೂ.	12.20	ಕೋಟಿ
* 1980–81ರಲ್ಲಿ ಕೊಟ್ಟ ಒಟ್ಟು ಸಾಲ	ರೂ.	19.17	ಕೋಟಿ

ಎಸ್. ಬಿ. ಶಂಕರ್	ಬಿ. ಹೊನ್ನಲಗೇಗೌಡ	ಬಿ. ಕೆ. ಪಾಟೀಲ್
ಅಧ್ಯಕ್ಷರು	ಕಾರ್ಯದರ್ಶಿ	ಮ್ಯಾನೇಜಿಂಗ್ ಡೈರೆಕ್ಟರ್

ಕರ್ನಾಟಕ ರಾಜ್ಯ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕ್ ನಿಯಮಿತ

ಬೆಂಗಳೂರು-18

ಬ್ಯಾಂಕಿಂಗ್ ಪ್ರಪಂಚ

ಹಣ ಬ್ಯಾಂಕಿಂಗ್ ವಿಚಾರಗಳಿಗೆ
ಮೀಸಲಾದ ಅರ್ಧವಾರ್ಷಿಕ

ಸಂಪುಟ ೨ ಸಂಚಿಕೆ ೨

ಡಿಸೆಂಬರ್ ೧೯೮೧

ಸಂಪಾದಕ

ಎಚ್ಚೆಸ್ಕೆ

ಶೀರ್ಷಿಕೆ ವಿನ್ಯಾಸ—ಗಿರಿಧರ ಖಾಸನೀಸ

ಸಮನ್ವಯ ಸಮಿತಿ (ರಿ.)
(ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)
ಭಾರತೀಯ ಸ್ಟೇಟ್ ಬ್ಯಾಂಕ್
ಬೆಂಗಳೂರು ನಗರ ಶಾಖೆ
ಬೆಂಗಳೂರು 560 002

ವಾರ್ಷಿಕ ಚಂದಾ ರೂ. ೫
ಆಜೀವ ಚಂದಾ ರೂ. ೧೦೦
ಬಿಡಿ ಪ್ರತಿ ರೂ. ೩

ಬ್ಯಾಂಕಿಂಗ್ ಪ್ರಪಂಚ

ಪರಿವಿಡಿ

ಬ್ಯಾಂಕಿಂಗ್ ಪ್ರಪಂಚದ ಆಜೀವ ಸದಸ್ಯರು

1 (ಅ) ನ ಪ್ರ. ಕುಮಾರ್
(ಆ) ಶ್ರೀ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಪುತ್ತೂರು-574201
2 ಭಾರತೀಯ ಕೈಗಾರಿಕಾಭಿವೃದ್ಧಿ ಬ್ಯಾಂಕ್, ಬೆಂಗಳೂರು-560001
3 ಡಿ. ಬನುಮಯ್ಯ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು-570001
4 ಹೊಸ್ಮಾರು ಸುರೇಶ್ ಶೆಣೈ
5 ರ. ನ. ಗುರ್ಜಾರ್
6 ಮು. ಮಲ್ಲಿಕಾರ್ಜುನ
7 ಚಿ. ರಾ. ವೇಣುಗೋಪಾಲ್
8 ಎಲ್. ಉಮಾಶಂಕರ್
9 ಬೆಂ. ಶ್ರೀ. ರವೀಂದ್ರ
10 ನಾ. ಗಜಾನನ
11 ತಿ. ಶ್ರೀ. ನಾಗರಾಜರಾವ್
12 ಕೆ, ಎನ್. ಜಯರಾಮು
13 ಮೈಸೂರ್ ಸಿಲ್ಕ್ ಕ್ಲಾತ್ ಮರ್ಚೆಂಟ್ಸ್ ಕೊ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು-570002
14 ಬಿ: ಎಸ್. ಚಂದ್ರಶೇಖರ
15 ಡಿ. ವೀರೇಂದ್ರ ಹೆಗ್ಗಡೆ
16 ಭಾರತ್ ಕೋ-ಆಪರೇಟಿವ್ ಬ್ಯಾಂಕ್, ಬೆಂಗಳೂರು-560011
17 ಬೆಂಗಳೂರು ಸಿಟ್ ಕೋ-ಆ. ಬ್ಯಾಂಕ್, ಬೆಂಗಳೂರು-560018
18 ಮುರಲೀಧರ
19 ಅನಂತಗಣೇಶ ಭಟ್ಟ
20 ಮುನಿಅಂಜನಪ್ಪ
21 ಬಿ. ಎಸ್ ಪ್ರಭುಸ್ವಾಮಿ
22 ಎನ್ ಎಸ್ ಶ್ರೀಧರರಾಮ್
23 ಎಸ್. ಶ್ರೀಧರ
24 ವೈ, ವಿಜಯಾನಂದ್
25 ಸರ್ ಎಂ. ವಿಶ್ವೇಶ್ವರಯ್ಯ ಕೋ-ಆ. ಬ್ಯಾಂಕ್ ಲಿಮಿಟೆಡ್, ಬೆಂಗಳೂರು-20
26 ಶ್ರೀಮತಿ ಕಮಲ
27 ಜಿ. ಎನ್. ನರಸಿಂಹಮೂರ್ತಿ
28 ಡಿ. ಎಸ್ ರಾಧಾಕೃಷ್ಣ
29 ಎಂ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
30 ದಿ ರಾಜಾಜಿನಗರ ಕೊ-ಆ. ಬ್ಯಾಂಕ್ ನಿಯಮಿತ, ಬೆಂಗಳೂರು-560010
31 ಚ. ನಂಜುಂಡಯ್ಯ
32 ಆ. ಚ. ಅಶೋಕಕುಮಾರ್
33 ದಿ. ಗೋಣಿಕೊಪ್ಪಲು ರೂರಲ್ ಕೋ-ಆ. ಬ್ಯಾಂಕ್ ಲಿಮಿಟೆಡ್ ಗೋಣಿಕೊಪ್ಪಲು 571213
34 ರಾ. ಶ್ರೀನಿವಾಸರಾವ್
35 ಆರ್ಯವೈಶ್ಯ ಶ್ರೀರಾಮ ಕೋ-ಆ. ಸೊಸೈಟಿ ಲಿಮಿಟೆಡ್, ಶಿವಮೊಗ್ಗ-577202
36 ಬಿ. ಜಿ. ಚಂದ್ರಶೇಖರ್
37 ಪಿ. ಎಸ್. ಸುಬ್ರಹ್ಮಣ್ಯಂ

ನಮ್ಮ ಓದುಗರು ಹೆಚ್ಚು ಸಂಖ್ಯೆಯಲ್ಲಿ ಆಜೀವ ಸದಸ್ಯರಾಗುವ ಮೂಲಕ ಬ್ಯಾಂಕಿಂಗ್ ಪ್ರಪಂಚವನ್ನು ಬಲಪಡಿಸಬೇಕೆಂದು ಕೋರುತ್ತೇವೆ.

ಆಜೀವ ಸದಸ್ಯತ್ವದ ಚಂದಾ ರೂ. 100ನ್ನು **"ಸಮನ್ವಯ ಸಮಿತಿಯ"** ಹೆಸರಿಗೆ ಬರೆದ ಚೆಕ್ ಅಥವಾ ಡ್ರಾಫ್ಟ್ ಮೂಲಕ ಕಳುಹಿಸಿ.

ಸಮನ್ವಯ ಸಮಿತಿ (ರಿ.)
ದ್ವಾರಾ: ಭಾರತೀಯ ಸ್ಟೇಟ್ ಬ್ಯಾಂಕ್
ಬೆಂಗಳೂರು ನಗರ ಶಾಖೆ
೨೨, ಜಯಚಾಮರಾಜ ಒಡೆಯರ್ ರಸ್ತೆ, ಬೆಂಗಳೂರು-೫೬೦ ೦೦೨

ಬ್ಯಾಂಕಿಂಗ್ ಪ್ರಪಂಚ

ಈ ಸಂಚಿಕೆಯ ಲೇಖನದಾರರು

ಎನ್. ಜಿ. ಚಂದ್ರಶೇಖರಯ್ಯ, 1138, 18ನೆಯ ಅಡ್ಡ ರಸ್ತೆ, ಬನಶಂಕರಿ 2ನೆಯ ಹಂತ, ಬೆಂಗಳೂರು-560 070

ನವರತ್ನ ವಿ. ಮಧುಕರ್, ಉದ್ಯೋಗಿ, ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು-560 002

ಎಸ್. ಎನ್. ಸಿಂಹನ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯ, ನೌಕರರ ತರಬೇತಿ ಕೇಂದ್ರ, ಬೆಂಗಳೂರು-560 025

ಆರ್. ಲಕ್ಷ್ಮೀನರಸಿಂಹಯ್ಯ, ನಿರ್ದೇಶಕರು, ಸಣ್ಣ ಕೈಗಾರಿಕೆಗಳ ಸೇವಾ ಸಂಘ, ಭಾರತ ಸರಕಾರ, ಬೆಂಗಳೂರು-560 044

ಎಸ್. ಬಿ. ಮುದ್ದಪ್ಪ, ಐ.ಎ.ಎಸ್., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಬೆಂಗಳೂರು-560 001

ಬಿ. ಎಸ್. ಚಂದ್ರಶೇಖರ, ಅಧಿಕಾರಿ, ಭಾಷಾ ವಿಭಾಗ, ಭಾರತೀಯ ಸ್ಟೇಟ್ ಬ್ಯಾಂಕ್, ಪ್ರಾದೇಶಿಕ ಕಛೇರಿ, ಬೆಂಗಳೂರು-560 001

ವೈ. ವಿಜಯಾನಂದ್, ವ್ಯವಸ್ಥಾಪಕ, ಸಣ್ಣ ಕೈಗಾರಿಕೆ ಮತ್ತು ವ್ಯಾಪಾರ ವಿಭಾಗ, ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ನಗರ ಶಾಖೆ, ಬೆಂಗಳೂರು-560 002

ಗೋ. ದೇ. ನಿರ್ಮಲಕುಮಾರ, ಅಧಿಕಾರಿ, ಸಣ್ಣ ಕೈಗಾರಿಕೆ ವಿಭಾಗ, ಮೈಸೂರು ಬ್ಯಾಂಕ್, ಪ್ರಧಾನ ಕಛೇರಿ, ಬೆಂಗಳೂರು-560 009

ಎಚ್. ಎಸ್. ಕೃಷ್ಣ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ, ಮೈಸೂರು ಶಾಖೆ-570 001

ಕೆ. ಎನ್. ಮಹಾಬಲ, ಉದ್ಯೋಗಿ, ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ಶಾಖೆ-560 001

ಸಾ. ಅ. ಮಂಜುನಾಥ, 45-5/1, 'ಶಂಕರ ಕೃಪ' ಹಿಂಭಾಗ, 16ನೆಯ ಅಡ್ಡ ರಸ್ತೆ, 3ನೆಯ ವಿಭಾಗ, ಜಯನಗರ, ಬೆಂಗಳೂರು-560 011

ಬಿ. ಜೆ. ಶ್ರೀಧರ, ಅಧ್ಯಕ್ಷರು, ಕರ್ನಾಟಕ ಸಣ್ಣ ಕೈಗಾರಿಕಾ ಸಂಘ, ಬೆಂಗಳೂರು-560 002

ಹಾ. ಗು. ಬಾಲಗೋಪಾಲ್, ಸಹಾಯಕ ಪ್ರಧಾನ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು; ಅಧ್ಯಕ್ಷರು, ಬ್ಯಾಂಕಿನ ಕನ್ನಡ ಬಳಗ, ಬೆಂಗಳೂರು-560 009

ಹ.ಶಿ.ಪ್ರ., ಹ. ಶಿ. ಪ್ರದ್ಯುಮ್ನ, ಎ–1, ರಿಸರ್ವ್ ಬ್ಯಾಂಕ್ ಸಿಬ್ಬಂದಿ ನಿವಾಸ, ಬೆಂಗಳೂರು–560 042

ಎ. ವಿ. ಎಂ. ಪ್ರಸಾದ್, ತರಬೇತಿಯಲ್ಲಿರುವ ಅಧಿಕಾರಿ, ಭಾರತೀಯ ಸ್ಟೇಟ್ ಬ್ಯಾಂಕ್, ಗುಲ್ಬರ್ಗ ಶಾಖೆ–585 101

ಸಂಪಾದಕೀಯ

ಈ ಸಂಚಿಕೆಯೊಂದಿಗೆ 'ಬ್ಯಾಂಕಿಂಗ್ ಪ್ರಪಂಚ' ಎರಡು ವರ್ಷಗಳನ್ನು ಪೂರೈಸುತ್ತಿದೆ. ಈ ಎರಡು ವರ್ಷಗಳಲ್ಲಿ ಪತ್ರಿಕೆಯ ಸಾಧನೆ ನಾಚಿಕೊಳ್ಳುವಂಥದೇನೂ ಅಲ್ಲ ಎಂಬುದು ನಮ್ಮ ನಂಬಿಕೆ. ಹಣ ಬ್ಯಾಂಕಿಂಗ್ ವಿಚಾರಗಳಿಗಾಗಿಯೇ ಮೀಸಲಾದ ಪತ್ರಿಕೆಯೊಂದು ಭಾರತದ ಬೇರಾವ ಭಾಷೆಯಲ್ಲೂ ಇಲ್ಲವೆಂಬುದು ನಮ್ಮ ತಿಳಿವಳಿಕೆ. ಇದಕ್ಕಾಗಿ ಕನ್ನಡಿಗರು ಹೆಮ್ಮೆಪಟ್ಟುಕೊಂಡಾರೆಂಬುದು ನಮ್ಮ ಆಸೆ.

ಆದರೆ ಇತರ ಭಾಷೆಗಳವರಲ್ಲಿರುವಂಥ ಅಭಿಮಾನ ಕನ್ನಡಿಗರಲ್ಲಿ ಇಲ್ಲವೆಂಬುದು ಅನುಭವದಿಂದ ನಮಗೆ ಮತ್ತೊಮ್ಮೆ ಮನವರಿಕೆಯಾಗುತ್ತಿದೆ. ಅಭಿಮಾನಪಡಬೇಕಾದ ಸಂದರ್ಭದಲ್ಲಿ ಅದೆಲ್ಲಿ ದುರಭಿಮಾನವಾದೀತೋ ಎಂದು ಅಳುಕಿ ಅದನ್ನು ದೂರೀಕರಿಸುವುದು ಕನ್ನಡಿಗರ ಹುಟ್ಟುಗುಣ. ಇದು ಶ್ರೇಯಸ್ಕರವಲ್ಲ. ನಾವು ಯಾವುದನ್ನು ಧಾರಾಳತೆಯೆಂದು ಭಾವಿಸುತ್ತೇವೋ ಅದರ ದುರ್ಲಾಭ ಪಡೆದು ಇತರರು ನಮ್ಮನ್ನು ತುಳಿಯುತ್ತಾರೆ. ಜ್ಞಾನಪ್ರಸಾರಕ್ಕೆಂದೇ ಮೀಸಲಾದ ಈ ಪತ್ರಿಕೆಯನ್ನು ಸಂಶಯದ ಕಣ್ಣುಗಳಿಂದಲೇ ನೋಡುವವರೂ ಇದ್ದಾರೆ. ಪಟ್ಟಭದ್ರ ಹಿತಾಸಕ್ತಿಗಳಿಗೆ ಇಂಥ ಪ್ರಯತ್ನವೂ ಸಹನೀಯವೆನಿಸುವುದಿಲ್ಲ. ಇಂದು ರಾಜ್ಯದ ಇತರ ಎಲ್ಲ ಕ್ಷೇತ್ರಗಳಂತೆ ಬ್ಯಾಂಕಿಂಗ್ ಕ್ಷೇತ್ರದಲ್ಲೂ ಇತರ ಭಾಷೆಗಳವರದೇ, ಇತರ ರಾಜ್ಯಗಳವರದೇ ಮೇಲುಗೈ ಆಗಿದೆ. ವ್ಯವಹಾರದಲ್ಲಿ, ಉದ್ಯೋಗದಲ್ಲಿ, ನೀತಿನಿರ್ದೇಶನದಲ್ಲಿ—ಹೀಗೆ ಎಲ್ಲ ವಿಚಾರಗಳಲ್ಲೂ—ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ. ಇದು ಭಾಷೆಯ ಪ್ರಶ್ನೆ ಮಾತ್ರವೇ ಅಲ್ಲ. ನಮ್ಮವರ ಜೀವನ ಸಂಪಾದನೆಯ ಪ್ರಶ್ನೆ, ಅಳಿವು–ಉಳಿವಿನ ಪ್ರಶ್ನೆ. ಇದನ್ನು ಅರಿತು ಕನ್ನಡಿಗರು ತಮ್ಮ ಪರಂಪರಾಗತ ಜಡತ್ವವನ್ನು ಕೊಡವಿ ತಮ್ಮ ಹಿತರಕ್ಷಣೆಗಾಗಿ ಜಾಗೃತರಾಗದಿದ್ದರೆ ಕರ್ನಾಟಕವೆಂಬುದು ರಾಜ್ಯದ ಹೆಸರಾಗಿ ಮಾತ್ರ ಉಳಿಯುವ ಕಾಲ ದೂರವಿಲ್ಲ. ಅಂಥ ಕಾಲ ಬಾರದಂತೆ ನಾವು ಕಾರ್ಯಪ್ರವೃತ್ತರಾಗಬೇಕಾಗಿದೆ.

ಈ ಎರಡು ವರ್ಷಗಳಲ್ಲಿ 'ಬ್ಯಾಂಕಿಂಗ್ ಪ್ರಪಂಚ' ಅನೇಕ ಹೊಸ ಲೇಖಕರನ್ನು ಸೃಷ್ಟಿಸಿದೆಯೆಂದು ಹೆಮ್ಮೆಪಟ್ಟುಕೊಳ್ಳಬಹುದಾಗಿದೆ. ಬ್ಯಾಂಕುಗಳಿದ್ದಲ್ಲಿಗೆ ಜನ ಹೋಗುತ್ತಿದ್ದ ಕಾಲ ದೂರವಾಗಿ, ಜನತೆ ಇದ್ದಲ್ಲಿಗೆ ಬ್ಯಾಂಕುಗಳು ಬರುತ್ತಿರುವ ಈ ಕಾಲದಲ್ಲಿ 'ಬ್ಯಾಂಕಿಂಗ್ ಪ್ರಪಂಚ'ದಂಥ ಪತ್ರಿಕೆಯ ಪಾತ್ರ ಎಷ್ಟು ಮಹತ್ವದ್ದು ಎಂಬುದನ್ನು ಹೇಳಬೇಕಾದ್ದಿಲ್ಲ. ಬ್ಯಾಂಕಿಂಗ್ ಇಂದು ಕೇವಲ ಲಾಭಗಳಿಕೆಯ ಉದ್ಯಮವಾಗಿಲ್ಲ. ಜನಸಾಮಾನ್ಯರ ಸರ್ವತೋಮುಖ ಏಳಿಗೆಯ ಸಾಧನೆಯೇ ಬ್ಯಾಂಕುಗಳ ಕರ್ತವ್ಯವಾಗಿದೆ. ಅವು ಇಂದು ಕೇವಲ 'ವಾಣಿಜ್ಯ' ಬ್ಯಾಂಕುಗಳಾಗಿ ಉಳಿದಿಲ್ಲ. ಅವುಗಳ ಕಾರ್ಯಭಾರಗಳ ಗಡಿರೇಖೆ ದೂರ ದೂರ ಸರಿಯುತ್ತಿದೆ, ದಿಗಂತ ವಿಸ್ತರಿಸುತ್ತಿದೆ. ಈ ಸಂದರ್ಭದಲ್ಲಿ ಬ್ಯಾಂಕುಗಳು ತಮ್ಮ ಎಲ್ಲ ವ್ಯವಹಾರಗಳನ್ನೂ ಜನರ ಭಾಷೆಯಲ್ಲೇ ನಡಸುವುದು ಅತ್ಯವಶ್ಯವಾಗಿದೆ. ಇದು ಕೇವಲ ಭಾಷಾಭಿಮಾನದ ಪ್ರಶ್ನೆಯಲ್ಲ, ಬ್ಯಾಂಕುಗಳ ಸೇವೆಯನ್ನು ಸಾರ್ಥಕಗೊಳಿಸುವ ಪ್ರಶ್ನೆ, ಬ್ಯಾಂಕಿಂಗ್ ಸಂದೇಶವನ್ನು ಜನಕ್ಕೆ ತಲಪಿಸುವ ಪ್ರಶ್ನೆ. ಬ್ಯಾಂಕುಗಳಲ್ಲಿ ಕೆಲಸಮಾಡುವವರು ಜನರ ಭಾಷೆ ಆಡುವವರಾಗಬೇಕು, ಜನರಿಗೆ ತಿಳಿಯುವ ಭಾಷೆಯಲ್ಲಿ ಎಲ್ಲ ದಾಖಲೆಗಳನ್ನೂ ರಚಿಸಬಲ್ಲವರಾಗಬೇಕು. ಹೀಗೆ ಆದಾಗ ಮಾತ್ರ ಬ್ಯಾಂಕುಗಳು ಜನತೆಯವಾಗುತ್ತವೆ. ಜನಕ್ಕೆ ಗೊತ್ತಿಲ್ಲದ

ಭಾಷೆಯಲ್ಲಿ ಉದ್ದುದ್ದನೆಯ ಆದರ್ಶಗಳನ್ನು ಸಾರುವುದರಿಂದ, ಯೋಜನೆಗಳನ್ನು ಹಾಕುವುದರಿಂದ ಜನಕ್ಕೆ ಅವುಗಳಿಂದ ಏನೂ ಪ್ರಯೋಜನವಾಗುವುದಿಲ್ಲವೆಂಬುದು ನಮ್ಮ ಧುರೀಣರಿಗೆ ಇನ್ನೂ ಅರ್ಥವಾಗದಿರುವುದು ತುಂಬ ವಿಷಾದದ ಸಂಗತಿ. ನಮ್ಮ ರಾಜ್ಯದ ಬಹುತೇಕ ಬ್ಯಾಂಕುಗಳಲ್ಲಿ ಅನ್ಯಭಾಷೆಗಳವರೇ ತುಂಬಿದ್ದಾರೆ. ಕನ್ನಡದಲ್ಲಿ ಬ್ಯಾಂಕಿಂಗ್ ಕುರಿತ ಜ್ಞಾನ ಪ್ರಸಾರಕಾರ್ಯದಲ್ಲಿ ತೊಡಗಿರುವ 'ಬ್ಯಾಂಕಿಂಗ್ ಪ್ರಪಂಚ'ದಂಥ ಪತ್ರಿಕೆಯ ಪ್ರಕಟನೆಗೆ ಉತ್ತೇಜನ ನೀಡುವ ಮಾತು ಹಾಗಿರಲಿ, ಇದಕ್ಕೆ ತಡೆಯೊಡ್ಡುವವರಿದ್ದಾರೆ. ಇಲ್ಲಿಯ ಉಪ್ಪು ತಿಂದು ಈ ರಾಜ್ಯಕ್ಕೇ ದ್ರೋಹ ಬಗೆಯುವ ಜನರನ್ನು ಬೆಳೆಸುತ್ತಿರುವುದಕ್ಕೆ ಕನ್ನಡಿಗರ ಅಭಿಮಾನರಾಹಿತ್ಯವೇ ಮುಖ್ಯ ಕಾರಣ.

ನಮ್ಮ 'ಬುದ್ಧಿವಂತ'ರೆನಿಸಿಕೊಂಡವರಿಗೆ ಈ ಬಗೆಗೆ ತಿಳಿವಳಿಕೆ ನೀಡುವ ಕಾರ್ಯದಲ್ಲಿ 'ಬ್ಯಾಂಕಿಂಗ್ ಪ್ರಪಂಚ' ಉದ್ಯುಕ್ತವಾಗಿದೆ: ಹಿರಿತನದ ಹಮ್ಮಿನಿಂದಲ್ಲ; ಸಹಯೋಗದಲ್ಲಿ ನಂಬಿಕೆಯಿಟ್ಟು ಈ ನಿಟ್ಟಿನಲ್ಲಿ ನಡೆಯುತ್ತಿದೆ. ಕನ್ನಡದಲ್ಲಿ ಲೇಖನ ಬರೆಯುವವರಿಲ್ಲ, ಬರೆಯುವುದು ಸುಲಭವಲ್ಲ—ಎಂಬುದು ತಪ್ಪು ಎನ್ನುವುದಕ್ಕೆ 'ಬ್ಯಾಂಕಿಂಗ್ ಪ್ರಪಂಚ'ದಲ್ಲಿ ಬಂದಿರುವ ಲೇಖನಗಳು ಸಾಕ್ಷಿ, ಬ್ಯಾಂಕಿಂಗ್ ಉದ್ಯಮದಲ್ಲಿ ನಿರತರಾದವರಿಗೆ, ಬ್ಯಾಂಕುಗಳೊಂದಿಗೆ ವ್ಯವಹಾರ ನಡಸುವವರಿಗೆ, ಬ್ಯಾಂಕಿಂಗ್ ವಿಷಯ ಕಲಿಯುವವರಿಗೆ, ಬೋಧಿಸುವವರಿಗೆ, ಸಂಶೋಧಕರಿಗೆ—ಎಲ್ಲರಿಗೂ 'ಬ್ಯಾಂಕಿಂಗ್ ಪ್ರಪಂಚ'ದಂಥ ಪತ್ರಿಕೆ ಅತ್ಯವಶ್ಯ. ಈ ಎಲ್ಲರನ್ನೂ ದೃಷ್ಟಿಯಲ್ಲಿಟ್ಟುಕೊಂಡು ಇಲ್ಲಿ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ.

ಭಾರತೀಯ ಸ್ಟೇಟ್ ಬ್ಯಾಂಕಿನ ಕನ್ನಡ ಸಂಘಗಳ ಸಮನ್ವಯ ಸಮಿತಿಯಿಂದ 'ಬ್ಯಾಂಕಿಂಗ್ ಪ್ರಪಂಚ' ಪ್ರಕಟವಾಗುತ್ತಿರುವುದರಿಂದ ಇದು ಆ ಬ್ಯಾಂಕಿನ ಪತ್ರಿಕೆ, ಅದರ ಚಟುವಟಿಕೆಗಳ ಪ್ರಕಟನೆಗೆ ಮೀಸಲಾದ ಪತ್ರಿಕೆ, ಅದರ ಗೃಹಪತ್ರಿಕೆ ಎಂಬ ಭಾವನೆ ಹಲವರಲ್ಲಿದ್ದಂತಿದೆ. 'ಇದು ಆ ಬ್ಯಾಂಕಿನ ಪತ್ರಿಕೆಯಲ್ಲವೆ? ನಾವೇಕೆ ಇದನ್ನು ಪಡೆದು ಓದಬೇಕು?' ಎಂದು ಕೇಳುವವರಿದ್ದಾರೆ. ಈ ಭಾವನೆ ಸರಿಯಲ್ಲ. ಹಣ ಬ್ಯಾಂಕಿಂಗ್ ಕುರಿತು ಕನ್ನಡದಲ್ಲಿ ವಿವೇಚನೆ ನಡಸುವುದೂ ಬೆಳೆಸುವುದೂ ಈ ಪತ್ರಿಕೆಯ ಉದ್ದೇಶ. ಕನ್ನಡಕ್ಕಾಗಿ, ಬ್ಯಾಂಕಿಂಗಿನಲ್ಲಿ ಆಸಕ್ತಿ ಉಳ್ಳ 'ಎಲ್ಲರಿಗಾಗಿ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿ ಈ ಪತ್ರಿಕೆಯ ಪ್ರಕಟನೆಯ ಹೊರೆಹೊತ್ತಿದೆ. ಎಲ್ಲ ಕನ್ನಡಿಗರ ಬೆಂಬಲವನ್ನು ಇದು ಕೋರುತ್ತದೆ. ಈ ಪತ್ರಿಕೆಯ ಓದುಗರು ಈ ವಿಷಯವನ್ನು ತಮ್ಮ ಮಿತ್ರರಿಗೆಲ್ಲ ತಿಳಿಸಬೇಕು. ಹೆಚ್ಚು ಹೆಚ್ಚು ಮಂದಿ ಇದರ ಚಂದಾದಾರರಾಗಿ ಇದನ್ನು ಓದಿದರೆ, ಇದರೊಂದಿಗೆ ಸಂವಾದ ಬೆಳೆಸಿದರೆ, ಸಲಹೆ ಸೂಚನೆ ಬೆಂಬಲ ನೀಡಿದರೆ ಆಗ ಪತ್ರಿಕೆ ಸಾರ್ಥಕವಾಗುತ್ತದೆ. ಹಣ-ಬ್ಯಾಂಕಿಂಗ್ ವಿಚಾರಗಳಲ್ಲಿ ಆಸಕ್ತರಾದ ಯಾರಾದರೂ ಇದಕ್ಕೆ ಲೇಖನ ಬರೆಯಬಹುದು. ಅವರಿಗೆ ಸದಾ ಸ್ವಾಗತ.

•

ಸಂಚಿಕೆಯಿಂದ ಸಂಚಿಕೆಗೆ ಪತ್ರಿಕೆ ಹೆಚ್ಚು ಹೆಚ್ಚು ಉಪಯುಕ್ತವಾಗಲು ಪ್ರಯತ್ನಿಸುತ್ತಿದೆ. ಈ ಸಂಚಿಕೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಕುರಿತ ಲೇಖನಗಳೇ ಅಧಿಕ ಸಂಖ್ಯೆಯಲ್ಲಿವೆ. ಸಣ್ಣ ಕೈಗಾರಿಕೆಗಳ ಸ್ವರೂಪ, ಸ್ಥಾನಮಾನ, ಸಮಸ್ಯೆಗಳು, ಸಣ್ಣ ಕೈಗಾರಿಕೆಗಳಿಗೆ ಸಾಂಸ್ಥಿಕ ನೆರವು ಇವನ್ನು ಕುರಿತಂತೆ ಸರಕಾರದ ನೀತಿ, ನೆರವು ಸಂಸ್ಥೆಗಳ ಸಮನ್ವಯ ಸಾಧನೆ ಮುಂತಾದ ಅನೇಕ ವಿಚಾರಗಳ ವಿವೇಚನೆ ಇಲ್ಲಿದೆ. ಹೀಗೆ ಪ್ರತಿ ಸಂಚಿಕೆಯಲ್ಲೂ ಸಾಧ್ಯವಾದ ಮಟ್ಟಿಗೆ ಯಾವುದಾದರೊಂದು ಪ್ರಮುಖ ವಿಷಯದ ನಾನಾ ಮುಖಗಳನ್ನು ಕುರಿತ ಲೇಖನಗಳನ್ನು

ಪ್ರಕಟಿಸುವ ಉದ್ದೇಶವಿದೆ. ಅಂತೆಯೇ ಸಾಧ್ಯವಾದರೆ ಪ್ರತಿಯೊಂದು ಸಂಚಿಕೆಯಲ್ಲೂ ಒಂದು ಪ್ರಮುಖ ಬ್ಯಾಂಕಿಂಗ್ ಸಂಸ್ಥೆಯ ಪರಿಚಯ ನೀಡಬೇಕೆಂದೂ ಯೋಚಿಸಲಾಗಿದೆ. ಹಳೆಯ ಮೈಸೂರು ಸಂಸ್ಥಾನದಲ್ಲಿ ಡಾ॥ ಎಂ. ವಿಶ್ವೇಶ್ವರಯ್ಯನವರಿಂದ ಸ್ಥಾಪಿತವಾಗಿ, ಬೆಳೆದು ಹೆಮ್ಮರವಾಗಿ, ರಾಜ್ಯದಲ್ಲಿ ಹೆಮ್ಮೆಯ ಸ್ಥಾನ ಗಳಿಸಿ, ಈಗ ಭಾರತೀಯ ಸ್ಟೇಟ್ ಬ್ಯಾಂಕಿನ ಸಹ ಸಂಸ್ಥೆಯಾಗಿ ಇನ್ನೂ ವಿಸ್ತರಿಸುತ್ತಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಪರಿಚಯ ಲೇಖನ ಈ ಸಂಚಿಕೆಯಲ್ಲಿ ಪ್ರಕಟವಾಗಿದೆ. 'ಮೈಸೂರು ಬ್ಯಾಂಕ್' ಎಂದೇ ಇಂದಿಗೂ ಜನರ ಬಾಯಲ್ಲಿ ಉಳಿದಿರುವ ಈ ಬ್ಯಾಂಕಿನ ಸಾಧನೆ ಅಲ್ಪವೇನಲ್ಲ. ಅಚ್ಚಕನ್ನಡಿಗರ ಸಂಸ್ಥೆಯಾಗಿ ಆರಂಭವಾದ ಈ ಸಂಸ್ಥೆ ತನ್ನ ಕನ್ನಡತನವನ್ನು ಉಳಿಸಿಕೊಳ್ಳುವಂತೆ ಹೆಣಗುವುದು ಎಲ್ಲ ಕನ್ನಡಿಗರ ಕರ್ತವ್ಯವೆಂದರೆ ತಪ್ಪಲ್ಲ.

ಮುಂದಿನ ವರ್ಷದಿಂದ 'ಬ್ಯಾಂಕಿಂಗ್ ಪ್ರಪಂಚ' ಜೂನ್ ಮತ್ತು ಡಿಸೆಂಬರ್ ಬದಲು ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಪ್ರಕಟವಾಗುತ್ತದೆ. ಇದುವರೆಗೆ ಪತ್ರಿಕೆಯನ್ನು ತಮ್ಮದೆಂದು ಭಾವಿಸಿ ಇದಕ್ಕೆ ಎಲ್ಲ ಬಗೆಯ ಪ್ರೋತ್ಸಾಹ ನೀಡಿದ ಲೇಖಕರು, ಚಂದಾದಾರರು ಮತ್ತು ಜಾಹೀರಾತುದಾರರಿಗೆ ಪತ್ರಿಕೆ ಧನ್ಯವಾದ ಹೇಳುತ್ತದೆಯಲ್ಲದೆ, ಮುಂದಿನ ವರ್ಷಗಳಲ್ಲೂ ಇದನ್ನು ಬೆಳಸುತ್ತ ಹೋಗಬೇಕೆಂದು ಪ್ರಾರ್ಥಿಸುತ್ತದೆ. ಪತ್ರಿಕೆಯನ್ನು ಅತ್ಯಂತ ಆಕರ್ಷಕವಾಗಿ ಸಕಾಲದಲ್ಲಿ ಮುದ್ರಿಸಿಕೊಡುತ್ತಿರುವ ಈಸ್ಟರ್ನ್ ಪ್ರೆಸ್ಸಿನ ಒಡೆಯರಾದ ಶ್ರೀ ಚಿಂತಾಮಣಿ ಅವರಿಗೂ ಅವರ ದಕ್ಷ ಸಿಬ್ಬಂದಿವರ್ಗಕ್ಕೂ ಪತ್ರಿಕೆ ತುಂಬ ಆಭಾರಿಯಾಗಿದೆ.

ಸಂಪಾದಕ

ಭಾರತದಲ್ಲಿ ಸಣ್ಣ ಕೈಗಾರಿಕೆಗಳು

ಎನ್. ಜಿ. ಚಂದ್ರಶೇಖರಯ್ಯ

ಜನಜೀವನ ವ್ಯಾಪಕವಾದಂತೆಲ್ಲ ವಿವಿಧ ಸರಕುಗಳ ಬೇಡಿಕೆಯೂ ವಿಸ್ತಾರವಾಗುತ್ತ ಹೋಗುತ್ತದೆ. ಇದಕ್ಕೆ ಮುಖ್ಯವಾಗಿ ತಲಾ ವರಮಾನದ ಹೆಚ್ಚಳ ಕಾರಣ. ಸರಕುಗಳ ಉತ್ಪಾದನೆಯ ಸಂದರ್ಭ ಬಹುರೂಪದ್ದಾಗಿರುತ್ತದೆ. ತಂತ್ರಜ್ಞಾನ, ಬಂಡವಾಳ, ಉದ್ಯಮಸಾಹಸ, ಸಂಘಟನೆ, ನೈಸರ್ಗಿಕ ಸೌಲಭ್ಯಗಳ ಪೂರೈಕೆ, ಪೂರಕ ವ್ಯವಸ್ಥೆಗಳು, ಮಾರುಕಟ್ಟೆ ಮುಂತಾದವು ಉತ್ಪಾದನೆಯ ಗಾತ್ರವನ್ನು ನಿರ್ಧರಿಸುತ್ತವೆ. ಕೈಗಾರಿಕಾ ಸರಕುಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು: 1 ಬಂಡವಾಳ ವಸ್ತುಗಳು: ಯಂತ್ರೋಪಕರಣಗಳು, ಉತ್ಪಾದನ ಸರಕುಗಳು; 2 ಉಪಭೋಗ ವಸ್ತುಗಳು. ಉಪಭೋಗ ವಸ್ತುಗಳ ಉತ್ಪಾದನೆಗೆ ಯಂತ್ರೋಪಕರಣಗಳ ತಯಾರಿಕೆ ಅಗತ್ಯ. ಬಂಡವಾಳ ವಸ್ತುಗಳ ಉತ್ಪಾದನೆಗೆ ಬೇಕಾಗುವ ಬಂಡವಾಳದ ಗಾತ್ರ ದೊಡ್ಡದು. ಅವಕ್ಕೆ ಬೇಕಾಗುವ ಪರಿಕರಗಳೂ ಅಷ್ಟೇ ದೊಡ್ಡ ಪ್ರಮಾಣದಲ್ಲಿರಬೇಕು. ಬಂಡವಾಳ ಹೂಡಿಕೆಯ ಗಾತ್ರ ಸಿದ್ಧಪಡಿಸಿದ ತಂತ್ರಜ್ಞಾನವನ್ನು ಅವಲಂಬಿಸುತ್ತದೆ. ಬಂಡವಾಳ ಸರಕುಗಳನ್ನು ತಯಾರಿಸುವುದು ಉಪಭೋಗ ವಸ್ತುಗಳ ತಯಾರಿಕೆಗಾಗಿಯೇ. ಉಪಭೋಗ ವಸ್ತುಗಳ ತಯಾರಿಕೆಯನ್ನು ಕೂಡ ಬೃಹದ್ಗಾತ್ರದಲ್ಲಿ ಮಾಡಬೇಕಾದರೆ ಬಂಡವಾಳವೂ ಸಂಘಟನೆಯೂ ಅಷ್ಟೇ ಬೃಹದ್ಗಾತ್ರದಲ್ಲಿ ಇರಬೇಕಾಗುತ್ತದೆ.

ಬಂಡವಾಳ ಸರಕುಗಳನ್ನು ಉತ್ಪಾದಿಸುವುದಕ್ಕಾಗಿ ಭಾರತದಲ್ಲಿ ಬೃಹದ್ಗಾತ್ರದಲ್ಲಿ ಬಂಡವಾಳವನ್ನು ಹೂಡಿ ಉದ್ಯಮಗಳನ್ನು ಬೃಹದ್ಗಾತ್ರದಲ್ಲೇ ಸ್ಥಾಪಿಸಲು ಏರ್ಪಾಡು ಮಾಡಿದುದು ಯೋಜನಾಯುಗದಲ್ಲಿ. ಕೆಲವು ಸರಕುಗಳನ್ನು ಉತ್ಪಾದಿಸಲು ತೊಡಗಿದಾಗ ಗಾತ್ರದ ಬಗ್ಗೆ ವಿಶೇಷವಾಗಿ ಆಲೋಚಿಸಬೇಕಾಗುತ್ತದೆ. ಪ್ರಾರಂಭದಲ್ಲಿ ಉದ್ಯಮದ ಉತ್ಪಾದನೆಯ ಗಾತ್ರ ಪರಿಮಿತವಾಗಿರುತ್ತದೆ. ಆದರೆ ಬೇಡಿಕೆ ಹೆಚ್ಚಿದಂತೆ ಸರಕಿನ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಉದ್ಯಮದ ವಿಸ್ತರಣೆಗೆ ಅವಕಾಶ ಮಾಡಿಕೊಡಲಾಗುತ್ತದೆ. ಕೆಲವೊಂದು ಸರಕುಗಳ ಉತ್ಪಾದನೆಯನ್ನು ಬೃಹದ್ಗಾತ್ರದಲ್ಲಿ ಮಾಡಿದರೆ ಅದರಿಂದ ಅನೇಕ ಅನುಕೂಲಗಳನ್ನು ಪಡೆಯಬಹುದು. ಬಾಹ್ಯ ಮತ್ತು ಆಂತರಿಕ ಮಿತವ್ಯಯಗಳನ್ನು ಸಾಧಿಸಿ ಉತ್ಪಾದನೆಯ ವೆಚ್ಚವನ್ನು ತಗ್ಗಿಸಬಹುದು. ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆ, ಮೋಟಾರುಗಳ ಉತ್ಪಾದನೆ, ಯಂತ್ರಗಳ ಉತ್ಪಾದನೆ ಇವು ಕೆಲವು ಉದಾಹರಣೆಗಳು. ಈ ಸರಕುಗಳನ್ನು ಬೃಹದ್ಗಾತ್ರದಲ್ಲಿ ಉತ್ಪಾದಿಸಿದರೆ ಅನೇಕ ಮಿತವ್ಯಯಗಳನ್ನು ಸಾಧಿಸಿ, ಉತ್ಪಾದನ ವೆಚ್ಚವನ್ನು ಮಿತಿಗೊಳಿಸಿ, ಸಾಧಾರಣವಾಗಿ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಬಹುದು. ಎಲ್ಲ ಉದ್ಯಮಕ್ಕೂ ಒಂದು ಉತ್ಪಾದನ ಗಾತ್ರದ ಮಿತಿ ಇರುತ್ತದೆ. ಈ ಮಿತಿ ಮೀರಿದಲ್ಲಿ ಮಿತವ್ಯಯಗಳು ಸಂಭವಿಸದೆ ಪ್ರತಿಕೂಲಗಳು ತಲೆದೋರಿ, ಉತ್ಪಾದನೆಯ ವೆಚ್ಚ ಹೆಚ್ಚುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಎಲ್ಲ ಸರಕುಗಳನ್ನೂ ಒಂದೇ ಗಾತ್ರದಲ್ಲಿ ಉತ್ಪಾದಿಸುವುದು ಆರ್ಥಿಕ ತತ್ವಗಳಿಗೆ ವಿರೋಧವಾಗುತ್ತದೆ. ಉತ್ಪಾದನೆಯ ಗಾತ್ರವನ್ನು ಸಂದರ್ಭಕ್ಕನುಸಾರವಾಗಿ ನಿರ್ಧರಿಸುವುದು ಆರ್ಥಿಕ ವ್ಯವಸ್ಥೆಯ ದೃಷ್ಟಿಯಿಂದ ಸಮಂಜಸವಾಗುತ್ತದೆ.

ವಿಂಗಡಣೆ

ಬಂಡವಾಳ ಹೂಡಿಕೆ, ತಂತ್ರಜ್ಞಾನದ ಅನ್ವಯ, ಸೌಲಭ್ಯಗಳ ಪೂರೈಕೆ, ಆರ್ಥಿಕ ಪರಿಸ್ಥಿತಿ, ಸರ್ಕಾರದ ಆರ್ಥಿಕ ನೀತಿ, ಉತ್ಪಾದನೆಯ ಗಾತ್ರ ಮುಂತಾದ ಮುಖ್ಯ ವಿಷಯಗಳ ಆಧಾರದ ಮೇಲೆ ಕೈಗಾರಿಕೆಗಳನ್ನು ದೊಡ್ಡ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳೆಂದು ವಿಂಗಡಿಸಬಹುದು.

ಯಾವ ದೇಶದ ಕೈಗಾರಿಕಾ ವ್ಯವಸ್ಥೆಯನ್ನು ಪರಿಶೀಲಿಸಿದರೂ ಅದರಲ್ಲಿ ಈ ಮೂರೂ ತೆರನಾದ ಕೈಗಾರಿಕಾ ವಿಭಾಗಗಳು ಕಂಡು ಬರುತ್ತವೆ. ಪ್ರಾರಂಭದಲ್ಲಿ ಉತ್ಪಾದನೆ ಸಣ್ಣ ಪ್ರಮಾಣದಲ್ಲೇ ನಡೆಯುತ್ತದೆ. ಸಣ್ಣದಾಗಿ ಸ್ಥಾಪನೆ ಮಾಡಿದ ಉದ್ಯಮ ಸಣ್ಣದಾಗಿಯೇ ಇರಬೇಕಾಗಿಲ್ಲ. ಹಾಗೆ ಸಣ್ಣದಾಗಿಯೇ ಮುಂದುವರಿದರೆ ಅದರಿಂದ ಹೆಚ್ಚಿನ ಆರ್ಥಿಕ ಪ್ರಯೋಜನಗಳು ದೊರಕಲಾರವು. ಆರ್ಥಿಕ ಪ್ರಯೋಜನಗಳ ದೃಷ್ಟಿಯಿಂದ ಸಣ್ಣದು ಮಧ್ಯಮ ಉದ್ಯಮವಾಗಿ ಬೆಳೆದು ಅನಂತರ ದೊಡ್ಡದಾಗುತ್ತದೆ.

ಇತಿಹಾಸ

ಭಾರತದ ಅರ್ಥವ್ಯವಸ್ಥೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಯಾವ ಸ್ಥಾನವಿರಬೇಕೆಂಬುದನ್ನು ಸ್ವಾತಂತ್ರ್ಯಕ್ಕಿಂತ ಪೂರ್ವದಲ್ಲೇ ನಿರ್ಧರಿಸಲಾಗಿತ್ತು. ಗಾಂಧೀಜಿಯವರ ಗ್ರಾಮ ಕೈಗಾರಿಕಾ ಪರಿಕಲ್ಪನೆ ಸಣ್ಣ ಕೈಗಾರಿಕೆಯ ಸ್ವರೂಪವನ್ನು ನಿರ್ಧರಿಸುವುದಕ್ಕೆ ಕಾರಣವಾಗಿತ್ತು. ಆದರೆ ಯೋಜನಾ ಯುಗ ಪ್ರಾರಂಭವಾದಂತೆ, ಹಲವು ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ನೀತಿಗಳನ್ನು ಸರ್ಕಾರ ರೂಪಿಸಿತು. 1948ರ ಕೈಗಾರಿಕಾ ನೀತಿ, ಅನಂತರ ಜಾರಿಗೆ ತಂದ ಕೈಗಾರಿಕಾಭಿವೃದ್ಧಿ ಮತ್ತು ಹತೋಟಿ ಕಾಯಿದೆ ಇವು ದೊಡ್ಡ ಉದ್ಯಮಗಳ ಅಭಿವೃದ್ಧಿಗೆ ಸೀಮಿತವಾಗಿದ್ದುವು. ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಯಾವ ಪ್ರತಿಬಂಧಕವೂ ಇರಲಿಲ್ಲ. ದೇಶಾದ್ಯಂತ ವಿಕೇಂದ್ರೀಕೃತ ಕೈಗಾರಿಕಾ ಬಂಡವಾಳ ಸಂಸ್ಥೆಗಳನ್ನು ಸ್ಥಾಪಿಸುವ ಉದ್ದೇಶದಿಂದ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಅನುಮತಿಯ ಅಗತ್ಯವೂ ಇರಲಿಲ್ಲ. ಗೃಹ ಕೈಗಾರಿಕೆಗಳಿಗೆ ಪ್ರತ್ಯೇಕವಾದ ಉತ್ತೇಜನಕಾರಿ ಸಲಹಾ ಮಂಡಲಿಗಳನ್ನು ಸರ್ಕಾರ ಸ್ಥಾಪಿಸಿದ್ದರೆ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರ 1954ರಲ್ಲಿ ಸಣ್ಣ ಕೈಗಾರಿಕೆಗಳ ಮಂಡಲಿಯನ್ನು ಸ್ಥಾಪಿಸಿತು. ಈ ಮಂಡಲಿಯ ಸ್ಥಾಪನೆಗೆ ಬಹುತೇಕ ಕೆಲವು ನಿರ್ದಿಷ್ಟ ಕಾರಣಗಳಿದ್ದುವು. ಸಣ್ಣ ನಗರ ಮತ್ತು ಪಟ್ಟಣಗಳ ಪ್ರದೇಶದಲ್ಲಿ ಕಂಡು ಬರುತ್ತಿದ್ದ ಸುಶಿಕ್ಷಿತರ ನಿರುದ್ಯೋಗಕ್ಕೆ ಪರಿಹಾರವನ್ನು ಒದಗಿಸಲು ಮತ್ತು ಸ್ಥಳೀಯ ಬಂಡವಾಳಸ್ಥರು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ತೇಜನ ಮತ್ತು ಸಲಹೆ ಕೊಡುವುದು ಈ ಮಂಡಲಿಯ ಉದ್ದೇಶವಾಗಿತ್ತು. ಅರ್ಥವ್ಯವಸ್ಥೆಯಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾನ ಯಾವುದಿರಬೇಕೆಂಬುದಕ್ಕೆ ಅಮೆರಿಕದ ಫೋರ್ಡ್ ಸಂಸ್ಥಾಪನದ ಅಧ್ಯಯನ ತಂಡ ಉತ್ತಮವಾದ ಸಲಹೆ ನೀಡಿತು. ಸಣ್ಣ ಉದ್ಯಮಗಳು ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸಬೇಕಾದರೆ ಆಧುನಿಕ ತಂತ್ರಜ್ಞಾನದ ಅನ್ವಯ ಅಗತ್ಯ ಎಂಬುದನ್ನು ಈ ತಂಡ ಸ್ಪಷ್ಟಪಡಿಸಿತು.

ಆದರೆ ಎರಡನೆಯ ಯೋಜನೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ದೊಡ್ಡ ಜವಾಬ್ದಾರಿಯನ್ನು ಹೊರಿಸಲಾಯಿತು. ದೊಡ್ಡ ಕೈಗಾರಿಕೆಗಳಿಗೆ ಬಂಡವಾಳ ಸರಕುಗಳ ಮತ್ತು ಮೂಲಭೂತ ಸರಕುಗಳ ಉತ್ಪಾದನೆಯ ಜವಾಬ್ದಾರಿಯನ್ನು ಹೊರಿಸಿದ ಮೇಲೆ ಸಣ್ಣ ಕೈಗಾರಿಕೆಗಳು ಉಪಭೋಗ ವಸ್ತುಗಳನ್ನು ಉತ್ಪಾದಿಸಬೇಕೆಂಬ ಉದ್ದೇಶವನ್ನು ನಿಗದಿಪಡಿಸಲಾಯಿತು. ಎರಡನೆಯ ಯೋಜನೆಯಲ್ಲಿ ತಲೆದೋರಿದ ಹಣದುಬ್ಬರದ ಪರಿಸ್ಥಿತಿಯನ್ನು ತಡೆಗಟ್ಟಲು ಉತ್ಪಾದನೆಯನ್ನು ತೀವ್ರಗೊಳಿಸಬೇಕಾಗಿತ್ತು. ದೊಡ್ಡ ಕೈಗಾರಿಕೆಗಳ ಫಲಪ್ರಾಪ್ತಿಯ ಅವಧಿ ದೀರ್ಘವಾಗಿರುವುದರಿಂದ ಅಲ್ಪ ಕಾಲದಲ್ಲಿ ಉತ್ಪಾದನೆಯನ್ನು ಕೈಗೊಳ್ಳಲು ಅವು ಅಸಮರ್ಥವಾಗಿದ್ದುದರಿಂದ, ಸಣ್ಣ ಕೈಗಾರಿಕೆಗಳೇ ಈ ಕಾರ್ಯವನ್ನು ನಿರ್ವಹಿಸಬಲ್ಲುವೆಂಬ ನಂಬಿಕೆಯೇ ಸಣ್ಣ ಕೈಗಾರಿಕೆಗಳಿಗೆ ಈ ಜವಾಬ್ದಾರಿಯನ್ನು ಹೊರಿಸುವುದಕ್ಕೆ ಕಾರಣವಾಗಿತ್ತು. ಅಷ್ಟೇ ಅಲ್ಲದೆ ಕೆಲವು ರಾಷ್ಟ್ರೀಯ ಸಮಸ್ಯೆಗಳಿಗೆ ಸಣ್ಣ ಕೈಗಾರಿಕೆಗಳು ಪರಿಹಾರ ನೀಡಬಲ್ಲುವು ಎಂದು ಯೋಜನಾ ಕರ್ತೃಗಳು ಭಾವಿಸಿದ್ದರು. ಇವು ದೊಡ್ಡ ಪ್ರಮಾಣದಲ್ಲಿ ಉದ್ಯೋಗವನ್ನು ಸೃಷ್ಟಿ ಮಾಡಿ ನಿರುದ್ಯೋಗವನ್ನು ತಡೆಗಟ್ಟುತ್ತವೆ, ಸಂಪತ್ತಿನ ವಿಕೇಂದ್ರೀಕರಣಕ್ಕೆ ಸಹಾಯ ಮಾಡುತ್ತವೆ ಮತ್ತು ನಗರ ಪ್ರದೇಶದಲ್ಲಿ ಸುಪ್ತವಾಗಿರುವ ಕೌಶಲವನ್ನು ಉಪಯೋಗಿಸಿ ಸಂಪತ್ತಿನ ಉತ್ಪಾದನೆಯನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ ನಿರ್ವಹಿಸಬಲ್ಲವು. ರಾಷ್ಟ್ರೀಯ ವರಮಾನದ ಸಮಾನ ಹಂಚಿಕೆಗೆ ನೆರವಾಗುತ್ತವೆ, ಹೊಸ ತಂತ್ರಜ್ಞಾನವನ್ನು ಅಳವಡಿಸುವುದರಿಂದ ಕೌಶಲದ ವೃದ್ಧಿಗೆ ಅವಕಾಶವಾಗುತ್ತದೆ, ಉದ್ಯಮ ಸಾಹಸಕ್ಕೆ ಸಣ್ಣ ಕೈಗಾರಿಕೆಗಳು ಪ್ರೋತ್ಸಾಹಕಾರಿಯಾಗುತ್ತವೆ ಮತ್ತು ನಗರದ ಜನಸಂದಣಿಯನ್ನು ತಪ್ಪಿಸುತ್ತವೆ ಎಂಬ ಅನೇಕ ಕಾರಣಗಳನ್ನು ಒಡ್ಡಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಪ್ರೋತ್ಸಾಹ ಕೊಡಲಾಯಿತು. ಸರ್ಕಾರದ ನೆರವಿನಿಂದ ಭಾರತದಲ್ಲಿ ಎರಡನೆಯ ಯೋಜನೆಯ ಕಾಲದಲ್ಲಿ ಸಣ್ಣ ಕೈಗಾರಿಕೆಗಳು ತಳವೂರಲು ಪ್ರಾರಂಭಿಸಿದುವು.

ಕೈಗಾರಿಕಾ ಎಸ್ಟೇಟುಗಳು

ಗಾಂಧೀಜಿಯವರ ಸಣ್ಣ ಕೈಗಾರಿಕೆಗಳ ಪರಿಕಲ್ಪನೆಗೂ ಯೋಜನಾ ಕಾಲದಲ್ಲಿ ರೂಪುಗೊಂಡ ಸಣ್ಣ ಕೈಗಾರಿಕೆಗಳಿಗೂ ಅಜಗಜಾಂತರವಿದೆ. ಗಾಂಧೀಜಿಯ ಕೈಗಾರಿಕೀಕರಣವೆಂದರೆ ಗ್ರಾಮ ಕೈಗಾರಿಕೆಗಳ ಅಭಿವೃದ್ಧಿ. ಆಯಾ ಗ್ರಾಮಗಳಲ್ಲಿ ದೊರೆಯುವ ಸಾಮಗ್ರಿಗಳನ್ನು ಉಪಯೋಗಿಸಿ ಗ್ರಾಮಸ್ಥರ ಬೇಡಿಕೆಯನ್ನು ಈಡೇರಿಸುವಂಥ ವಸ್ತುಗಳ ಉತ್ಪಾದನೆ ಈ ಕೈಗಾರಿಕೆಗಳಿಂದಾಗಬೇಕೆಂದು ಗಾಂಧೀಜಿ ಕಲ್ಪಿಸಿದ್ದರು. ಗಾಂಧೀಜಿಯ ಗ್ರಾಮ ಕೈಗಾರಿಕೆಗಳಿಗೆ ಗ್ರಾಮವೇ ಕೇಂದ್ರ ಬಿಂದು. ಆದರೆ ಯೋಜನಾ ಯುಗ ಪ್ರಾರಂಭವಾದಂತೆ, ಸಣ್ಣ ಕೈಗಾರಿಕೆಗಳಿಗೆ ಒಂದು ನಿರ್ದಿಷ್ಟವಾದ ಸ್ವರೂಪವನ್ನು ಕೊಡುವುದಕ್ಕಾಗಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲಾಯಿತು.

ಭಾರತದಲ್ಲಿ ಕೈಗಾರಿಕಾ ಎಸ್ಟೇಟುಗಳ ಪರಿಕಲ್ಪನೆ ಹೊರದೇಶದಿಂದ ಆಮದಾದದ್ದು. ಇಂಗ್ಲೆಂಡಿನಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಿದುದರ ಉದ್ದೇಶ ಕೈಗಾರಿಕಾ ನಗರಗಳಲ್ಲಿ ಜನಸಂದಣಿಯನ್ನು ತಪ್ಪಿಸುವುದೇ ಆಗಿತ್ತು. ಈ ಕೈಗಾರಿಕಾ ಎಸ್ಟೇಟುಗಳನ್ನು ದೊಡ್ಡ ಕೈಗಾರಿಕಾ ನಗರಗಳ ಸಮೀಪದ ನಗರಗಳಲ್ಲಿ ಸ್ಥಾಪಿಸಲಾಗಿತ್ತು. ಇದಕ್ಕೆ ಕಾರಣ ಎರಡು ಕ್ಷೇತ್ರಗಳಿಗೂ ಪರಸ್ಪರ ಸಂಬಂಧವಿದ್ದುದು. ಭಾರತದಲ್ಲಿ ಕೈಗಾರಿಕಾ ಎಸ್ಟೇಟುಗಳ ಸ್ಥಾಪನೆಗೆ ನಗರದ ಜನಸಂದಣಿಯನ್ನು ತಡೆಗಟ್ಟುವ ಉದ್ದೇಶ

ವಿತ್ತಾದರೂ, ಸಣ್ಣ ಕೈಗಾರಿಕೆಗಳನ್ನು ವಿಕೇಂದ್ರೀಕರಿಸಿ ಅಭಿವೃದ್ಧಿಪಡಿಸುವುದೇ ಮುಖ್ಯವಾದ ಕಾರಣವಾಗಿತ್ತು. ಈ ಕೈಗಾರಿಕಾ ಎಸ್ಟೇಟುಗಳಲ್ಲಿ ವಿವಿಧ ರೀತಿಯ ಉಪಭೋಗ ವಸ್ತುಗಳ ಉತ್ಪಾದನೆಗೆ ಅವಕಾಶ ಮಾಡಿಕೊಡಲಾಗಿದೆ.

ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯ ಕೊನೆಯ ಹಂತವೆಂದರೆ ಅಧೀನ ಕೈಗಾರಿಕೆಗಳ ಬೆಳವಣಿಗೆ. ಪಾಶ್ಚಾತ್ಯ ದೇಶಗಳಂತೆಯೇ ದೊಡ್ಡ ಕೈಗಾರಿಕೆಗಳ ಸಮೀಪದಲ್ಲೇ ಅಧೀನ ಕೈಗಾರಿಕಾ ಎಸ್ಟೇಟುಗಳನ್ನು ಭಾರತದಲ್ಲೂ ಸ್ಥಾಪಿಸಲಾಗಿದೆ. ಈ ಎಸ್ಟೇಟುಗಳಲ್ಲಿ ಅನೇಕ ಉದ್ಯಮಗಳು ಅತ್ಯಾಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ದೊಡ್ಡ ಕೈಗಾರಿಕೆಗಳಿಗೆ ಬೇಕಾಗುವ ಬಿಡಿ ಭಾಗಗಳನ್ನು ತಯಾರಿಸುತ್ತಿವೆ. ದೊಡ್ಡ ಕೈಗಾರಿಕೆಗಳೊಂದಿಗೆ ಸಣ್ಣ ಕೈಗಾರಿಕೆಗಳು ಸಂಬಂಧವನ್ನು ಹೊಂದಿರುವುದರಿಂದ ಸಣ್ಣ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳು, ತಂತ್ರಜ್ಞಾನ ಮುಂತಾದವನ್ನು ದೊಡ್ಡ ಕೈಗಾರಿಕೆಗಳು ಒದಗಿಸುತ್ತವೆ. ಈ ಅಧೀನ ಕೈಗಾರಿಕೆಗಳು ಸಣ್ಣ ಕೈಗಾರಿಕಾವಲಯದಲ್ಲಿ ವಿಶಿಷ್ಟವಾದ ಸ್ಥಾನ ಹೊಂದಿವೆ.

ಸಮಸ್ಯೆಗಳು

ಭಾರತದ ಕೈಗಾರಿಕೀಕರಣದಲ್ಲಿ ಸಣ್ಣ ಕೈಗಾರಿಕೆಗಳಿಗೆ ಜವಾಬ್ದಾರಿಯುತವಾದ ಸ್ಥಾನ ಕೊಡಲಾಗಿದೆ. ಇದಕ್ಕೆ ಕಾರಣ, ಈ ಕೈಗಾರಿಕೆಗಳ ಅಭಿವೃದ್ಧಿಯಿಂದ ದೊರೆಯುವ ಅನುಕೂಲತೆಗಳು. ಉದ್ದೇಶಗಳು ಎಷ್ಟರಮಟ್ಟಿಗೆ ಸಫಲವಾಗಿವೆ ಎಂಬ ವಿಚಾರವನ್ನು ಪರಿಶೀಲಿಸಬೇಕು. ಇಂದು ಸಣ್ಣ ಕೈಗಾರಿಕೆಗಳ ಪ್ರಗತಿಯನ್ನು ನೋಡಿದಾಗ ಕಂಡುಬರುವ ಅಂಶವೆಂದರೆ, ಸಣ್ಣ ಕೈಗಾರಿಕೆಗಳು ಸಾಂಪ್ರದಾಯಿಕ ಸರಕುಗಳನ್ನು ಉತ್ಪಾದಿಸುತ್ತಿರುವುದರ ಜೊತೆಗೆ ಅನೇಕ ಹೊಸ ಸರಕುಗಳನ್ನೂ ಉತ್ಪಾದಿಸುತ್ತಿವೆ. ವಿದ್ಯುತ್ ಮೋಟಾರುಗಳು, ಎಲೆಕ್ಟ್ರಾನಿಕ್ ಸರಕುಗಳು, ಪ್ಲಾಸ್ಟಿಕ್ ಸರಕುಗಳು, ಮೋಟಾರುಗಳ ಭಾಗಗಳು, ರಾಸಾಯನಿಕಗಳು ಇತ್ಯಾದಿಯಾಗಿ ಅನೇಕ ಸರಕುಗಳು ಉತ್ಪಾದನೆಯಾಗುತ್ತಿವೆ.

ಸಣ್ಣ ಕೈಗಾರಿಕೆಗಳು ಭಾರತದ ಕೈಗಾರಿಕಾ ವ್ಯವಸ್ಥೆಯ ಅವಿಭಾಜ್ಯ ಅಂಗ. ಈ ಕ್ಷೇತ್ರ ಹಲವಾರು ಸಮಸ್ಯೆಗಳಿಂದಾಗಿ ಅಷ್ಟು ದೃಢವಾಗಿ ಬೆಳೆಯಲು ಸಾಧ್ಯವಾಗಿಲ್ಲ. ಹಣಕಾಸಿನ ಸಮಸ್ಯೆ, ಕಚ್ಚಾ ಸಾಮಗ್ರಿಗಳ ಸಮಸ್ಯೆ, ಮಾರಾಟ ಸಮಸ್ಯೆ ಮುಂತಾದವು ಈ ಕ್ಷೇತ್ರವನ್ನು ಕಾಡುತ್ತಿವೆ. ಕೆಲವು ಸಣ್ಣ ಉದ್ಯಮಗಳು ದೊಡ್ಡ ಉದ್ಯಮಗಳೊಡನೆ ಪೈಪೋಟಿ ಮಾಡಬೇಕಾಗಿದೆ. ಸಣ್ಣ ಕೈಗಾರಿಕೆಗಳ ತಯಾರಿಕೆಯ ವಿಧಾನವನ್ನು ನೋಡಿದಾಗ, ಅವು ತಾಂತ್ರಿಕ ವಿಷಯವನ್ನು ಅಲಕ್ಷಿಸಿರುವುದು ಕಾಣುತ್ತದೆ. ಪರಿಣಾಮವಾಗಿ ಅವುಗಳ ವೆಚ್ಚ ದುಬಾರಿ. ಇಂಥ ಅನೇಕ ಉದ್ಯಮಗಳು ದುರ್ಬಲವಾಗಿಯೇ ಮುಂದುವರಿಯುತ್ತಿವೆ. ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ಆರ್ಥಿಕ ರಕ್ಷಣೆಯನ್ನು ಒದಗಿಸಿದೆ. ಸುಮಾರು 600 ಸರುಕುಗಳ ಉತ್ಪಾದನೆಯನ್ನು ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ಮೀಸಲಾಗಿಡಲಾಗಿದೆ. ಈ ರಕ್ಷಣೆಯನ್ನು ನೀಡಿರುವುದು ಸರ್ಕಾರದ ಕೈಗಾರಿಕಾ ನೀತಿಗೆ ಅನುಗುಣವಾಗಿದೆ. ಈ ರಕ್ಷಣೆಯಿಂದ ಸಣ್ಣ ಕೈಗಾರಿಕೆಗಳಿಗೆ ಎಷ್ಟು ಪ್ರಯೋಜನವಾಗಿದೆ ಎಂಬುದನ್ನು ವಿಚಾರ ಮಾಡಬೇಕು. ಲೋಕನಾಥನ್ ಮಿತಿಯ ವರದಿಯ ಪ್ರಕಾರ ಇಂಥ ರಕ್ಷಣೆಯಿಂದ ಸಣ್ಣ ಕೈಗಾರಿಕೆಗಳಿಗೆ ಅನುಕೂಲವಾಗುವುದರ ಬದಲು ಪರೋಕ್ಷವಾಗಿ ಪ್ರತಿಕೂಲವಾಗಿದೆಯೆಂದೇ ತಿಳಿಯುತ್ತದೆ.

ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಅನೇಕ ರೀತಿಯಲ್ಲಿ ಸೌಲಭ್ಯಗಳನ್ನೇನೋ ಒದಗಿಸಿದೆ. ಈ ಸೌಲಭ್ಯಗಳನ್ನು ಕೊಡುವುದರಿಂದ ಅವುಗಳ ಅಭಿವೃದ್ಧಿ ತನಗೆ ತಾನೇ ಆಗುತ್ತದೆಂದು ಭಾವಿಸುವುದು ಸಾಧುವಾದುದಲ್ಲ. ಅವು ದಕ್ಷತೆಯಿಂದ ಉತ್ಪಾದನೆ ಮಾಡಬಹುದೇ ಹೊರತು, ಉತ್ಪಾದಿಸಿದ ಸರಕನ್ನು ಮಾರಾಟ ಮಾಡುವುದು ಸಾಧ್ಯವಾಗಿಲ್ಲ. ಸ್ಣಣ ಕೈಗಾರಿಕೆಗಳಿಗೆ ಮಾರಾಟ ಕ್ರಿಯೆ ಕರತಲಾಮಲಕವಾಗಿಲ್ಲ. ಆದ್ದರಿಂದ ಅನೇಕ ಸಣ್ಣ ಕೈಗಾರಿಕೆಗಳು ರೋಗಗ್ರಸ್ತ ಉದ್ಯಮಗಳ ಪಟ್ಟಿಗೆ ಸೇರುತ್ತಿವೆ. ದೊಡ್ಡ ಕೈಗಾರಿಕೆಗಳೊಂದಿಗೆ ಸಹಭಾಗಿಯಾಗಿ ಸಣ್ಣ ಕೈಗಾರಿಕೆಗಳು ನಿರ್ವಹಿಸಿದರೆ ಅವು ಊರ್ಜಿತಗೊಳ್ಳಬಲ್ಲವು. ಫ್ರಾನ್ಸ್ ಮತ್ತು ಜಪಾನ್ ದೇಶಗಳಲ್ಲಿ ಸಬ್ ಕಾಂಟ್ರ್ಯಾಕ್ಟಿಂಗ್ ಎಂಬ ಪದ್ಧತಿ ಇದೆ. ಎಲ್ಲ ಕಾರ್ಯಗಳನ್ನು ಒಂದೇ ಉದ್ಯಮ ನಿರ್ವಹಿಸುವುದಕ್ಕಿಂತ, ಹಲವು ಕೆಲಸಗಳನ್ನು ಸಣ್ಣ ಕೈಗಾರಿಕೆಗಳು ನಿರ್ವಹಿಸಬಲ್ಲವು. ಇಂಥ ಪದ್ಧತಿ ಭಾರತದಲ್ಲಿ ವ್ಯಾಪಕವಾದರೆ, ಸಣ್ಣ ಕೈಗಾರಿಕೆಗಳ ಪಾತ್ರ ವಿಸ್ತೃತವಾಗುತ್ತದೆ. ಅವುಗಳ ಸ್ಥಾನ ಸದೃಢವಾಗುತ್ತದೆ.

ಸಣ್ಣ ಕೈಗಾರಿಕೆಗಳಿಂದ ವಿಕೇಂದ್ರೀಕರಣವಾಗಿ ಪ್ರಾದೇಶಿಕ ಅಸಮಾನತೆ ತಪ್ಪುತ್ತದೆ ಎಂದು ಆಶಿಸಲಾಗಿತ್ತು. ಆದರೆ ಕೈಗಾರಿಕಾ ನಗರಗಳಲ್ಲೇ ಸಣ್ಣ ಕೈಗಾರಿಕೆಗಳೂ ಬೇರು ಬಿಟ್ಟಿವೆ. ಇದರಿಂದಾಗಿ ನಗರಗಳ ಜನಸಂದಣಿ ಭಾರತದಲ್ಲಿ ಹೆಚ್ಚುತ್ತಿದೆ. ಗ್ರಾಮಾಂತರ ಪ್ರದೇಶಗಳಿಗೆ ಈ ಕೈಗಾರಿಕೆಗಳ ವರ್ಗಾವಣೆಯಾಗುವುದಾದರೆ, ಅಭಿವೃದ್ಧಿ ಸಮಾನವಾಗಿ ಆಗಲು ಸಾಧ್ಯವಾಗುತ್ತದೆ.

ಸಣ್ಣ ಕೈಗಾರಿಕೆಗಳು ಭಾರತದ ಅರ್ಥವ್ಯವಸ್ಥೆಯಲ್ಲಿ ವಿಶಿಷ್ಟವಾದ ಸ್ಥಾನ ಹೊಂದಿರುವುದರಿಂದ, ಅವು ಎಲ್ಲ ಕಾಲದಲ್ಲೂ ಸಣ್ಣವಾಗಿಯೇ ಇರಬೇಕಾದ ಕಾರಣವಿಲ್ಲ. ಆಧುನಿಕ ತಂತ್ರಜ್ಞಾನವನ್ನು ಬಳಸಿದ ಮೇಲೆ ಸಣ್ಣ ಕೈಗಾರಿಕೆಗಳು ಉತ್ತಮವಾದ ಗುಣಮಟ್ಟದಲ್ಲಿ ವಸ್ತು

ಗಳನ್ನು ಉತ್ಪಾದಿಸುವ ಸಾಮರ್ಥ್ಯ ಪಡೆಯುತ್ತವೆ. ಅಂಥ ಸಂದರ್ಭದಲ್ಲಿ ಅನೇಕ ಆರ್ಥಿಕ ಅನುಕೂಲತೆಗಳನ್ನು ಪಡೆಯುವುದಕ್ಕಾಗಿ ಉದ್ಯಮಗಳು ವೈವಿಧ್ಯಗೊಳ್ಳಬೇಕಾಗುತ್ತದೆ. ಆಗ ಅವು ವಿಸ್ತಾರಗೊಳ್ಳಬೇಕಾಗುತ್ತದೆ. ಅಂದರೆ ಸಣ್ಣ ಕೈಗಾರಿಕೆ ಮಧ್ಯಮ ಗಾತ್ರದ ಕೈಗಾರಿಕೆಯಾಗಿ ಮಾರ್ಪಾಡಾಗುತ್ತದೆ. ಇಂದಿನ ಕೈಗಾರಿಕಾ ಎಸ್ಟೇಟುಗಳಲ್ಲಿ ಮಧ್ಯಮ ಗಾತ್ರದ ಕೈಗಾರಿಕೆಗಳಿಗೆ ಸೌಲಭ್ಯ ಸಾಲದು. ಸಣ್ಣ ಕೈಗಾರಿಕೆ ವಿಸ್ತಾರಗೊಂಡಾಗ ಹೊಸ ಕೈಗಾರಿಕಾ ವಲಯಕ್ಕೆ ವರ್ಗಗೊಳ್ಳುವುದು ಸಾಧುವಾದ ಮಾರ್ಗ.

ಸಣ್ಣ ಕೈಗಾರಿಕೆಗಳು ಬಹುತೇಕ ಏಕ ವ್ಯಕ್ತಿ ಸಂಸ್ಥೆಗಳು ಮತ್ತು ಪಾಲುದಾರಿಕೆ ಸಂಸ್ಥೆಗಳು. ಈ ಸಂಸ್ಥೆಗಳಲ್ಲಿ ಕುಟುಂಬದ ಸದಸ್ಯರೇ ಮಾರ್ಗದರ್ಶಿಗಳು. ಇವರಿಂದ ವೈಜ್ಞಾನಿಕ ಮಾರ್ಗದರ್ಶನ ಲಭ್ಯವಾಗುವುದಿಲ್ಲ. ಆದರೆ ಆಧುನಿಕ ನಿರ್ವಹಣೆಯ ವಿಜ್ಞಾನದ ಆವಶ್ಯಕತೆ ಸಣ್ಣ ಉದ್ಯಮಗಳಿಗೆ ಅವಶ್ಯ. ಆಧುನಿಕ ನಿರ್ವಹಣೆ, ಮಾರಾಟ ವ್ಯವಸ್ಥೆ ಮತ್ತು ಉದ್ಯಮದ ಯಾಂತ್ರೀಕರಣದಿಂದ ಸಣ್ಣ ಕೈಗಾರಿಕೆಗಳು ಭಾರತದ ಅರ್ಥವ್ಯವಸ್ಥೆಯಲ್ಲಿ ಪ್ರಗತಿಪೂರ್ಣ ಪಾತ್ರ ವಹಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.

ದೇಶದ ಅರ್ಥವ್ಯವಸ್ಥೆಯಲ್ಲಿ ಸಣ್ಣ ಕೈಗಾರಿಕೆಗಳ ಪ್ರಾಮುಖ್ಯ

ಲೇ: ಹೋಮಿ ಜೆ. ಎಚ್. ತಲ್ಯಾರ್ ಖಾನ್
ಅನು: ನವರತ್ನ ಮಧುಕರ್

ಸಣ್ಣ ಕೈಗಾರಿಕೆಗಳಿಗೆ ದೇಶದ ಅರ್ಥವ್ಯವಸ್ಥೆಯಲ್ಲಿ ಪ್ರಧಾನ ಸ್ಥಾನವುಂಟು. ನಮ್ಮ ಅನೇಕ ಸಮಸ್ಯೆಗಳಿಗೆ ಇವುಗಳಲ್ಲಿದೆ–ಸಂಜೀವಿನಿ.

ರಾಷ್ಟ್ರದ ಒಟ್ಟು ಕೈಗಾರಿಕೋತ್ಪನ್ನದ ಸೇ. 40 ರಷ್ಟನ್ನು ಪೂರೈಸುವ, ಒಟ್ಟು ಉದ್ಯೋಗಾವಕಾಶಗಳಲ್ಲಿ ಸಮಾರು ಸೇ. 40ನ್ನು ಒದಗಿಸುವ, ಒಟ್ಟು ರಫ್ತಿನ ಕಾಲು ಭಾಗವನ್ನು ತುಂಬುವ ಸಣ್ಣ ಕೈಗಾರಿಕೆಗಳು ಬಡತನ, ನಿರುದ್ಯೋಗ ಮುಂತಾದ ನಮ್ಮ ದೇಶದ ಸಾಮಾಜಿಕ ಪಿಡುಗುಗಳಿಗೆ ಸಂಜೀವಿನಿಯಾಗಿವೆ. ನಿರುದ್ಯೋಗ ಸಮಸ್ಯೆಯನ್ನಂತೂ ಇವು ಯಶಸ್ವಿಯಾಗಿ ನಿವಾರಿಸಬಲ್ಲವಾಗಿವೆ. ಇಂಥ ಕೈಗಾರಿಕೆಗಳಿಗೆ ಸಹಾಯ ನೀಡಿ ಬೆಳವಣಿಗೆ ಸಾಧಿಸಲು ಹಣಕಾಸು ಸಂಸ್ಥೆಗಳು ಹಾಗೂ ವಾಣಿಜ್ಯ ಬ್ಯಾಂಕುಗಳು ಕೆಲಸ ಮಾಡುತ್ತಿವೆ. ಸುಮಾರು ಎಂಟು ನೂರು ಕೈಗಾರಿಕೆಗಳನ್ನು ಸಣ್ಣ ಕೈಗಾರಿಕೆಗಳೆಂದು ಗುರುತಿಸಿ ಅವಕ್ಕೆ ವಿವಿಧ ರೀತಿಯ ಸೌಲಭ್ಯಗಳನ್ನು ನೀಡಿ ನಮ್ಮ ಉದ್ಯಮಿಗಳನ್ನು ಉತ್ತೇಜಿಸಿ ಅವರು ಈ ಸೌಲಭ್ಯಗಳ ಸದುಪಯೋಗ ಪಡೆಯುವಂತೆ ಮಾಡಬೇಕಾಗಿದೆ. ಈ ದಿಸೆಯಲ್ಲಿ ಕೇವಲ ಸರ್ಕಾರವಷ್ಟೇ ಅಲ್ಲದೆ ಸಾರ್ವಜನಿಕ ಸಂಸ್ಥೆಗಳೂ ಉದ್ಯಮಶೀಲರ ಗಮನವನ್ನು ಸೆಳೆದು, ದೊರೆಯುವ ಸೌಲಭ್ಯಗಳ ಉಪಯೋಗವಾಗುವಂತೆ ಮಾಡಬೇಕಾಗಿದೆ.

1965ರಲ್ಲಿ ಒಂದು ಲಕ್ಷದಷ್ಟಿದ್ದ ಸಣ್ಣ ಕೈಗಾರಿಕೆಗಳ ಸಂಖ್ಯೆ ಇಂದು ಸಮಾರು 5 ಲಕ್ಷಕ್ಕಿಂತ ಅಧಿಕವಾಗಿದೆ. ಇವುಗಳ ಈಗಿನ ಉತ್ಪಾದನೆಯ ಮೌಲ್ಯ ಸುಮಾರು 10,000 ಕೋಟಿ ರೂಪಾಯಿಗಳು. ಆರನೆಯ ಯೋಜನೆಯ ಕೊನೆಯ ವೇಳೆಗೆ ಇದು 26,700 ಕೋಟಿ ರೂಪಾಯಿಗಳಿಗೆ ಹೆಚ್ಚಬಹುದೆಂದು ಅಂದಾಜು ಮಾಡಲಾಗಿದೆ. ಕೇಂದ್ರ ಅಂಕಿ ಅಂಶಗಳ ಸಂಸ್ಥೆಯ ವರದಿಯ ಪ್ರಕಾರ ದೇಶದ ಒಟ್ಟು ಕೈಗಾರಿಕಾ ಬಂಡವಾಳ ಹಾಗೂ ಉತ್ಪನ್ನದ ಸೇ. 75ರಷ್ಟು ಸಣ್ಣ ಕೈಗಾರಿಕೆಗಳದಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ನಿಗದಿ ಮಾಡಲಾದ್ದು 5.2 ಕೋಟಿ ರೂಪಾಯಿಗಳು. ಐದನೆಯ ಯೋಜನೆಯಲ್ಲಿ ಇದು 221 ಕೋಟಿ ರೂಪಾಯಿಗಳು. ಪ್ರಚಲಿತ ಆರನೆಯ ಯೋಜನೆಯಲ್ಲಿ 3,400 ಕೋಟಿ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದೆ.

ಆರು ಉಪಯೋಗಗಳು

ಸಣ್ಣ ಕೈಗಾರಿಕೆಗಳಿಂದ ಮುಖ್ಯವಾಗಿ ಆರು ಉಪಯೋಗಗಳಿವೆ:

1 ಅವು ಉದ್ಯೋಗಾವಕಾಶಗಳನ್ನು ಬೇರೆಲ್ಲ ಮೂಲಗಳಿಗಿಂತ ಹೆಚ್ಚಾಗಿ ನಿರ್ಮಿಸುತ್ತವೆ. ಈಗಾಗಲೇ ಅವು ಸಾಂಪ್ರದಾಯಿಕ ಹಾಗೂ ಆಧುನಿಕ ಸಣ್ಣ ಕೈಗಾರಿಕೆಗಳಲ್ಲಿ 168 ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಿವೆ. ಈ ಪ್ರಮಾಣ 1982–83ರ ಸುಮಾರಿಗೆ ಬಹುವಾಗಿ ಹೆಚ್ಚುವುದೆಂದು ನಿರೀಕ್ಷಿಸಲಾಗಿದೆ. ಸಣ್ಣ ಕೈಗಾರಿಕೆಗಳಲ್ಲಿ ಹೂಡಿದ ರೂ. 1,00,000 ಬಂಡವಾಳ ಇಪ್ಪತ್ತೆರಡು ಜನರಿಗೆ ಉದ್ಯೋಗವನ್ನೊದಗಿಸಿದರೆ, ಬೃಹತ್ಕೈಗಾರಿಕೆಗಳಲ್ಲಿ ತೊಡಗಿಸಿರುವ ರೂ. 10 ಲಕ್ಷ ಹಾಗೂ ರೂ. 25 ಲಕ್ಷ ಬಂಡವಾಳ ಅನುಕ್ರಮವಾಗಿ ಕೇವಲ ಆರು ಹಾಗೂ ಮೂರು ಜನರಿಗೆ ಉದ್ಯೋಗವನ್ನೊದಗಿಸಿರುವ ಅಂಶವನ್ನು ಇತ್ತೀಚಿನ ಸಮೀಕ್ಷೆಯೊಂದು ಹೊರಗೆಡವಿದೆ. ಇಂದು ಸಣ್ಣ ಕೈಗಾರಿಕೆಗಳು ಒಟ್ಟು ಕೈಗಾರಿಗಾ ಉದ್ಯೋಗದ ಸೇ. 38 ರಷ್ಟನ್ನು ಒದಗಿಸುತ್ತಿವೆ.

2 ಸಣ್ಣ ಕೈಗಾರಿಕೆಗಳು ಆಡಳಿತ ವ್ಯವಸ್ಥೆಯನ್ನು ವಿಕೇಂದ್ರೀಕೃತಗೊಳಿಸುತ್ತವೆ. ಇದು ದೊಡ್ಡ ಕೈಗಾರಿಕೆಗಳಲ್ಲಿ ಸಾಧ್ಯವಿಲ್ಲ. ಇಂಥ ವಿಕೇಂದ್ರೀಕರಣದಿಂದ ಶೀಘ್ರವಾಗಿ ನಿರ್ಧಾರಗಳನ್ನು ತಳೆಯುವುದೂ ಅವುಗಳ ಶೀಘ್ರ ಅನುಷ್ಠಾನವೂ ಸಾಧ್ಯವಾಗುತ್ತದೆ.

3 ಪ್ರಾರಂಭಿಸಲು ಬೇಕಾದ ಕಡಿಮೆ ವೆಚ್ಚದಿಂದ ಸಣ್ಣ ಕೈಗಾರಿಕೆಗಳು ಸುಲಭವಾಗಿ ಸಣ್ಣ ಸ್ಥಳಗಳಲ್ಲೂ ಸ್ಥಾಪಿಸಬಹುದಾಗಿದ್ದು, ಪ್ರಾದೇಶಿಕ ಬೆಳವಣಿಗೆಯ ಅಸಮಾನತೆಯನ್ನು ಕಡಿಮೆ ಮಾಡುವಲ್ಲಿ ಸಹಾಯಕವಾಗುತ್ತವೆ.

4 ಸಣ್ಣ ಮತ್ತು ಅಭಿವೃದ್ಧಿ ಹೊಂದದ ಕ್ಷೇತ್ರಗಳು ಸಣ್ಣ ಕೈಗಾರಿಕೆಗಳ ಮೂಲಕ ಅಭಿವೃದ್ಧಿ ಹೊಂದಲು ಹೆಚ್ಚು ಅವಕಾಶವಿದೆ. ಇವುಗಳಿಂದ ಗ್ರಾಮೀಣ ಜನರ ವರಮಾನ ಗಣನೀಯವಾಗಿ ಹೆಚ್ಚುತ್ತದೆ.

5 ಸಣ್ಣ ಕೈಗಾರಿಕೆಗಳು ಗ್ರಾಮೀಣ ಜನರು ವಿವಿಧ ಉದ್ಯಮಗಳಲ್ಲಿ ಕುಶಲತೆಯನ್ನು ಬೆಳೆಸಿಕೊಳ್ಳುವಂತೆ ಮಾಡಿ ಹೊಸ ಉದ್ಯಮಶೀಲರನ್ನು ಸೃಷ್ಟಿಸುತ್ತವೆ. ಇತ್ತೀಚೆಗೆ ಸ್ಥಾಪಿತವಾದ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಈ ನಿಟ್ಟಿನಲ್ಲಿ ಹೆಚ್ಚು ಸಹಾಯ ಮಾಡಬಲ್ಲವು. ಕೊನೆಗೊಮ್ಮೆ ಎಲ್ಲ 584 ಜಿಲ್ಲೆಗಳಿಗೂ ವ್ಯಾಪಿಸುವ ಈ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಸಣ್ಣ ಹಾಗೂ ಗೃಹ ಕೈಗಾರಿಕೆಗಳಿಗೆ ಎಲ್ಲ ರೀತಿಯ ನೆರವು ನೀಡುವುವೆಂದು ಯೋಜಿಸಲಾಗಿದೆ: i ಜಿಲ್ಲೆಯ ಕಚ್ಚಾ ಸಾಮಗ್ರಿಗಳ ಮತ್ತು ಇತರ ಸಂಪನ್ಮೂಲಗಳ ಆರ್ಥಿಕ ಶೋಧನೆ, ii ಯಂತ್ರ ಸಾಮಗ್ರಿಗಳ ಪೂರೈಕೆ, iii ಕಚ್ಚಾ ಸಾಮಗ್ರಿಗಳ ಪೂರೈಕೆ, iv ಸಾಲ ಸೌಲಭ್ಯಗಳು, v ಪರಿಣಾಮಕಾರಿಯಾದ ಮಾರುಕಟ್ಟೆ ವ್ಯವಸ್ಥೆ, vi ಗುಣನಿಯಂತ್ರಣ ವಿಭಾಗದ ಸ್ಥಾಪನೆ ಮತ್ತು vii ಸಂಶೋಧನೆ ಮತ್ತು ವಿಸ್ತರಣೆ—ಈ ರೀತಿಯಲ್ಲಿ ನೆರವು ಒದಗುತ್ತದೆ.

ಬ್ಯಾಂಕುಗಳು ಮೂಲ ಬಂಡವಾಳವನ್ನೂ ಇತರ ಹಣಕಾಸು ಸಂಸ್ಥೆಗಳು ಸಾವಧಿ ಸಾಲಗಳನ್ನೂ ವಿವಿಧ ಸಣ್ಣ ಕೈಗಾರಿಕೆಗಳಿಗೆ ಒದಗಿಸುತ್ತಿವೆ. ಈ ಸಂಸ್ಥೆಗಳು ನೀಡಿದ ಸಾಲಗಳು 1969ರಲ್ಲಿ ರೂ. 286 ಕೋಟಿ ಇದ್ದದ್ದು ಇಂದು ರೂ. 1,421 ಕೋಟಿಗೆ ಏರಿದೆ. 1977–78ರಲ್ಲಿ ಎಲ್ಲ ರಾಜ್ಯ ಹಣಕಾಸು ನಿಗಮಗಳು ಒಟ್ಟು ರೂ. 100 ಕೋಟಿಯಷ್ಟು ಹಣವನ್ನು ಸಣ್ಣ ಕೈಗಾರಿಕೆಗಳಿಗೆ ಸಾಲವಾಗಿ ನೀಡಿವೆ.

6 ಸಣ್ಣ ಕೈಗಾರಿಕೆಗಳು ರಫ್ತು ಗಳಿಕೆಯ ಘಟಕಗಳಾಗಿ ಮಾರ್ಪಟ್ಟಿವೆ. ಕಳೆದ ವರ್ಷ ಸಣ್ಣ ಕೈಗಾರಿಕೆಗಳು ರಫ್ತು ಮಾಡಿದ ಉತ್ಪನ್ನ ರೂ. 1,000 ಕೋಟಿಗೂ ಹೆಚ್ಚಿದ್ದು ದೇಶದ ಒಟ್ಟು ರಫ್ತಿನ ಕಾಲು ಭಾಗದಷ್ಟಿತ್ತು.

ಅಸ್ವಸ್ಥತೆ

ಬೃಹತ್ ಕೈಗಾರಿಕೆಗಳು ಹಿಂದುಳಿದ ಪ್ರದೇಶಗಳಲ್ಲಿ ಸ್ಥಾಪಿತವಾಗಬೇಕು. ಇದು ಆ ಪ್ರದೇಶದಲ್ಲಿ ಪೂರಕ ಘಟಕಗಳ ಸ್ಥಾಪನೆಗೆ ಅನುವು ಮಾಡಿಕೊಡುತ್ತದೆ. ಈ ಬೃಹದುದ್ಯಮಗಳ ಪೂರಕ ಘಟಕಗಳಿಗೆ ಸಕಾಲದಲ್ಲಿ ಹಣ ಪಾವತಿ ಮಾಡಬೇಕಾದುದು ಅತಿ ಮುಖ್ಯವಾಗಿರುತ್ತದೆ. ಅನೇಕ ಸಣ್ಣ ಕೈಗಾರಿಕೆಗಳ ಕುಂಠಿತ ಪ್ರಗತಿಗೆ ಬೃಹದುದ್ಯಮಗಳಿಂದ ಸಕಾಲದಲ್ಲಿ ಹಣ ಪಾವತಿಯಾಗದಿರುವುದು ಕಾರಣವಾಗುತ್ತದೆ ಹಾಗೂ ಈ ಘಟಕಗಳು ರೋಗಗ್ರಸ್ತವಾಗುವಂತೆ ಮಾಡುತ್ತದೆ.

ಈ ಬಗ್ಗೆ ನಾವು ಎಚ್ಚರಿಕೆ ವಹಿಸಲೇಬೇಕಾಗುತ್ತದೆ. ಸಾಮಾನ್ಯವಾಗಿ ಗೋಣಿ ನಾರು, ಸಕ್ಕರೆ ಮತ್ತು ಕೆಲವು ತಾಂತ್ರಿಕ ಕೈಗಾರಿಕೆಗಳೂ ದನದ ಮೇವು, ಶೈತ್ಯಾಗಾರ ಮುಂತಾದ ಕೈಗಾರಿಕೆಗಳೂ ಹೆಚ್ಚಾಗಿ ಅಸ್ವಸ್ಥವಾಗುತ್ತವೆ. ಇದಕ್ಕೆ ಅನೇಕ ಕಾರಣಗಳುಂಟು. ಅಸಮರ್ಪಕ ನಿರ್ವಹಣೆ, ಮಾರುಕಟ್ಟೆಯ ಅಧ್ಯಯನ ಸರಿಯಾಗಿಲ್ಲದಿರುವಿಕೆ, ಹಣಕಾಸಿನ ಸ್ಥಿತಿ, ತಾಂತ್ರಿಕ ವಿವರಗಳ ಪರಿಣತಿ ಇಲ್ಲದಿರುವಿಕೆ, ಕಡಿಮೆಯಾದ ಮೂಲ ಬಂಡವಾಳ ಹಾಗೂ ಪ್ರವರ್ತಕರ ಪಾಲು, ಕಾರ್ಮಿಕ ಸಮಸ್ಯೆಗಳು, ಸರಕಾರ ಮತ್ತು ಬೃಹದುದ್ಯಮಗಳಿಂದ ತಡವಾದ ಪಾವತಿ, ಏರುವ ದರಗಳು, ಬೇಡಿಕೆಯ ಇಳಿತ, ಗುಣಮಟ್ಟದ ಕೊರತೆ, ಕ್ಷುಲ್ಲಕ ಕಾರಣಗಳಿಗಾಗಿ ಬೃಹದುದ್ಯಮದವರಿಂದ ಸರಕಿನ ಸಾಮಗ್ರಿಯ ನಿರಾಕರಣೆ ಮುಂತಾದುವು ಅವುಗಳಲ್ಲಿ ಕೆಲವು. ಅಂದಾಜಿನ ಪ್ರಕಾರ ಸಮಾರು 8,000 ಅಸ್ವಸ್ಥ ಸಣ್ಣ ಕೈಗಾರಿಕೆಗಳಲ್ಲಿ ರೂ. 200 ಕೋಟಿಯಷ್ಟು ಹಣ ಯಾವ ಉತ್ಪಾದಕತೆಯೂ ಇಲ್ಲದೆ ಅನುಪಯುಕ್ತವಾಗಿ ಕೊಳೆಯುತ್ತಿದೆ. ಇವುಗಳ ಪುನರುತ್ಥಾನಕ್ಕಾಗಿ ಅನೇಕ ಪರಿಹಾರ ಸೂಚನೆಗಳು ಬಂದಿವೆ. ಅವು ಕಾರ್ಯಗತವಾಗಬೇಕಾಗಿದೆ.

ಕಚ್ಚಾ ಸಾಮಗ್ರಿಯ ಕೊರತೆ, ಭೂಮಿಯ ಮಿತಿಮೀರಿದ ಬೆಲೆ, ಏರುತ್ತಿರುವ ಕಾರ್ಮಿಕರ ವೇತನ ಹಾಗೂ ಇತರ ಸಾಮಗ್ರಿಗಳ ಬೆಲೆ. ಶಕ್ತಿಮೂಲಗಳ ಹಾಗೂ ನೀರಿನ ಕೊರತೆ, ರೈಲು ರಸ್ತೆ, ದೂರವಾಣಿ, ಆಸ್ಪತ್ರೆ ಸೌಲಭ್ಯ, ವಸತಿ, ವಿದ್ಯಾಭ್ಯಾಸಗಳ (ಅದೂ ಹಿಂದುಳಿದ ಪ್ರದೇಶಗಳಲ್ಲಿ) ಅಸಮರ್ಪಕತೆ—ಇವು ನಿವಾರಿಸಲೇಬೇಕಾದ ಕೆಲವು ಸಮಸ್ಯೆಗಳು.

ಕಾರ್ಯವಿಧಾನಗಳಲ್ಲಿ ನಿಧಾನ, ಅಸಮರ್ಪಕ ಯೋಜನೆಗಳು, ವಿವರಗಳ ಅಲಭ್ಯತೆ, ಮಾರುಕಟ್ಟೆಯ ಬಗ್ಗೆ ಮಾಹಿತಿಗಳ ಅಭಾವ, ಭಾವೀ ಉದ್ಯಮಿಗಳಿಗೆ ಮಾರ್ಗದರ್ಶನದ ಕೊರತೆ (ಸರಿಯಾದ ಕೈಗಾರಿಕೆಯ ಆಯ್ಕೆ, ಅನೇಕ ಫಾರಮ್‌ಗಳ ಭರ್ತಿ ಮಾಡುವಿಕೆ) ಮುಂತಾದವುಗಳಿಗೆ ಸಂಬಂಧಿಸಿದಂತೆ ಧನ ಪೋಷಣೆಯ ಮೂಲಗಳಿಂದ ಸಹಾಯಕ್ಕಿಂತ ಅಧಿಕವಾಗಿ ತೊಂದರೆಗಳು ಇವು ಇಂದು ಸಣ್ಣ ಕೈಗಾರಿಕೆಗಳು ಎದುರಿಸಬೇಕಾದ ಅತ್ಯಂತ ಜ್ವಲಂತ ಸಮಸ್ಯೆಗಳಾಗಿವೆ.

ಸಣ್ಣ ಕೈಗಾರಿಕೆಗಳು—ಒಂದು ವಿಶ್ಲೇಷಣೆ

ಎಸ್. ಎನ್. ಸಿಂಹನ್

ಸಣ್ಣ ಕೈಗಾರಿಕೆಗಳ ವಿಷಯದಲ್ಲಿ ಸರಕಾರದ ಧೋರಣೆಗಳು, ದೇಶದ ಪ್ರಗತಿಯಲ್ಲಿ ಅವುಗಳ ಸ್ಥಾನ, ಅವುಗಳ ಬೆಳೆವಣಿಗೆಯಲ್ಲಿ ಬ್ಯಾಂಕುಗಳ ಪಾತ್ರ

ಸ್ವತಂತ್ರ ಭಾರತದ ಕೈಗಾರಿಕಾ ನೀತಿಯಲ್ಲಿ ಸಣ್ಣ ಕೈಗಾರಿಕೆಗಳ ಬೆಳೆವಣಿಗೆಗೆ ಯಾವಾಗಲೂ ಆದ್ಯತೆ ದೊರೆತಿದೆ. 1955ರಿಂದಲೇ ಇವುಗಳ ಬೆಳೆವಣಿಗೆಗಾಗಿ ಸರ್ಕಾರ ತನ್ನ ಧೋರಣೆಯನ್ನು ರೂಪಿಸುತ್ತ ಹಾಗೂ ಅದನ್ನು ಸೂಕ್ತವಾಗಿ ಮಾರ್ಪಡಿಸುತ್ತ ಬಂದಿದೆ.

ಬಂಡವಾಳದ ಕೊರತೆ ಹಾಗೂ ಆರ್ಥಿಕ ಮುನ್ನಡೆಯಲ್ಲಿ ದೇಶದ ಅಗಾಧ ಜನಶಕ್ತಿಯ ಸದುಪಯೋಗ ಪಡೆಯುವುದೇ ಸರ್ಕಾರದ ಈ ನೀತಿಗೆ ಮುಖ್ಯ ಕಾರಣ.

ಅಲ್ಲದೆ ಕಡಿಮೆ ಬಂಡವಾಳ ಹೂಡಿಕೆಯಿಂದ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವ ಸಾಮರ್ಥ್ಯ ಹೊಂದಿರುವ ಈ ರಂಗ ನಿರುದ್ಯೋಗ ಸಮಸ್ಯೆಯ ಶೀಘ್ರ ಪರಿಹಾರಕ್ಕೆ ಒಂದು ಉತ್ತಮ ಸಾಧನ.

ಇದರಿಂದಾಗಿ ಕೇಂದ್ರ ಸರ್ಕಾರ ಸಣ್ಣ ಕೈಗಾರಿಕೆಗಳ ಬೆಳೆವಣಿಗೆಗಾಗಿ ವಿವಿಧ ಯೋಜನೆಗಳನ್ನು ರೂಪಿಸುತ್ತ ಹಾಗೂ ವಿವಿಧ ಸಂಸ್ಥೆಗಳನ್ನು ರಚಿಸುತ್ತ ಬಂದಿದೆ. ರಾಜ್ಯ ಸರಕಾರಗಳೂ ಇವುಗಳ ಬೆಳೆವಣಿಗೆಯಲ್ಲಿ ತಮ್ಮದೇ ಆದ ರೀತಿಯಲ್ಲಿ ಸಹಕರಿಸುತ್ತಿವೆ.

ಇದೆಲ್ಲದರ ಫಲವಾಗಿ ಇಂದು ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ ಆರು ಲಕ್ಷವನ್ನೂ ಮೀರಿದೆ.

ಸಣ್ಣ ಕೈಗಾರಿಕೆಗಳ ವಿಷಯದಲ್ಲಿ ಸರಕಾರದ ಧೋರಣೆಗಳು, ದೇಶದ ಪ್ರಗತಿಯಲ್ಲಿ ಅವುಗಳ ಪಾತ್ರ, ಹಾಗೂ ಸಣ್ಣ ಕೈಗಾರಿಕೆಗಳ ಬೆಳವಣಿಗೆಯಲ್ಲಿ ಬ್ಯಾಂಕುಗಳು ವಹಿಸುತ್ತಿರುವ ಪಾತ್ರಗಳ ನಿಷ್ಪಕ್ಷಪಾತ ವಿಶ್ಲೇಷಣೆಗೆ ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

ಮೊದಲನೆಯ ಬಾರಿಗೆ ಸರಕಾರ 1955 ರಲ್ಲಿ ಸಣ್ಣ ಕೈಗಾರಿಕೆಯ ಪ್ರೋತ್ಸಾಹಕ್ಕೆ ಕಾರ್ಯಕ್ರಮವನ್ನು ರೂಪಿಸಿ ಇದರ ಸಹಾಯ ಪಡೆಯಲು ಅರ್ಹವಾಗಲು ಕೈಗಾರಿಕಾ ಘಟಕಗಳ ವಿಷಯದಲ್ಲಿ ಕೆಳಕಂಡ ಮಿತಿಗಳನ್ನು ವಿಧಿಸಿತು:

1 5 ಲಕ್ಷ ರೂ.ಗಳಿಗೆ ಮೀರದ ಬಂಡವಾಳ ಹಾಗೂ 50 ಜನಕ್ಕೆ ಮೀರದ ನೌಕರರ ಸಂಖ್ಯೆಯುಳ್ಳ ಹಾಗೂ ವಿದ್ಯುಚ್ಛಕ್ತಿಯ ಸಹಾಯ ಪಡೆದ ಘಟಕಗಳು

ಅಥವಾ

2 5 ಲಕ್ಷ ರೂ.ಗಳಿಗೆ ಮೀರದ ಬಂಡವಾಳ ಹಾಗೂ 100 ಜನಕ್ಕೆ ಮೀರದ ನೌಕರರ ಸಂಖ್ಯೆಯುಳ್ಳ ಹಾಗೂ ವಿದ್ಯುಚ್ಛಕ್ತಿಯ ಸಹಾಯ ಪಡೆಯದ ಘಟಕಗಳು.

ಸಣ್ಣ ಕೈಗಾರಿಕೆಗಳ ಬೆಳವಣಿಗೆಯ ಜೊತೆಗೇ ಈ ವ್ಯಾಖ್ಯೆ ಬದಲಾಗುತ್ತ ಬಂದಿದೆ. ಹೆಚ್ಚು ಹೆಚ್ಚು ಘಟಕಗಳಿಗೆ ವಿಶೇಷ ಸೌಲಭ್ಯ ಹಾಗೂ ಸವಲತ್ತುಗಳ ನೀಡಿಕೆ ಹಾಗೂ ಯಂತ್ರೋಪಕರಣಗಳ ಬೆಲೆ ಏರಿಕೆ ಇವು ಈ ಬದಲಾವಣೆಗೆ ಕಾರಣ.

ಇತ್ತೀಚಿನ (ಆಗಸ್ಟ್ 1, 1980ರಿಂದ ಜಾರಿಯಲ್ಲಿರುವ) ವಿಮರ್ಶೆಯ ಅನಂತರದ ವ್ಯಾಖ್ಯೆ ಈ ಕೆಳಕಂಡಂತಿದೆ:

1 ಗ್ರಾಮೀಣ ಕೈಗಾರಿಕೆಗಳ ವಿಷಯದಲ್ಲಿ 2 ಲಕ್ಷ ರೂ. ಗಳಿಗೆ ಮೀರದ ಯಂತ್ರೋಪಕರಣಗಳಲ್ಲಿ ಬಂಡವಾಳ ಹೂಡಿಕೆ.

2 ಸಣ್ಣ ಕೈಗಾರಿಕೆಗಳ ವಿಷಯದಲ್ಲಿ 20 ಲಕ್ಷ ರೂ. ಗಳಿಗೆ ಮೀರದ ಯಂತ್ರೋಪಕರಣಗಳಲ್ಲಿ ಬಂಡವಾಳ ಹೂಡಿಕೆ.

3 ಬೃಹತ್ ಕೈಗಾರಿಕೆಗಳ ಅಧೀನ ಘಟಕಗಳಲ್ಲಿ 25 ಲಕ್ಷ ರೂ.ಗಳಿಗೆ ಮೀರದ ಯಂತ್ರೋಪಕರಣಗಳಲ್ಲಿ ಬಂಡವಾಳ ಹೂಡಿಕೆ.

ಈ ಎಲ್ಲ ಮಿತಿಗಳು ಯಂತ್ರೋಪಕರಣದ ಆರಂಭದ ಬೆಲೆಗೆ ಅನ್ವಯಿಸುತ್ತವೆ. ಅಲ್ಲದೆ ಈ ವ್ಯಾಖ್ಯೆ ಈಗ ಕೇವಲ ಉತ್ಪಾದನ ಘಟಕಗಳಿಗೆ ಮಾತ್ರವಲ್ಲದೆ ಹಲವಾರು ತಾಂತ್ರಿಕ ಸೇವಾ ಘಟಕಗಳಿಗೂ ಅನ್ವಯಿಸುತ್ತದೆ.

ಪ್ರಗತಿಯಲ್ಲಿ ಪಾತ್ರ

ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗಾರಿಕಾ ಉತ್ಪಾದನೆಯ ಹೆಚ್ಚಳಕ್ಕೆ ಪ್ರಾಮುಖ್ಯ ದೊರೆತಂತೆಲ್ಲ ಸಣ್ಣ ಕೈಗಾರಿಕೆಗಳ ಪಾತ್ರವೂ ಹೆಚ್ಚುತ್ತ ಬಂದಿದೆ. ಹಿಂದೆ ತಿಳಿಸಿದಂತೆ ಕಡಿಮೆ ಹೂಡಿಕೆಯಿಂದ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವ ಈ ರಂಗ ಪ್ರಗತಿಪರ ದೇಶವಾದ ಭಾರತಕ್ಕೆ ಸೂಕ್ತವಾಗಿದೆ.

ಅಲ್ಲದೆ ಇದು ಉತ್ಸಾಹೀ ತಂತ್ರಜ್ಞರು ದೊಡ್ಡ ಉದ್ಯಮಿಗಳ ಮೊರೆ ಹೋಗದೆ ಸ್ಥಳೀಯವಾಗಿ ದೊರೆಯುವ ಕಚ್ಚಾ ಸಾಮಗ್ರಿ ಹಾಗೂ ಇತರ ಸೌಲಭ್ಯಗಳನ್ನು ಫಲಪ್ರದವಾಗಿ ಬಳಸಿ ತಮ್ಮವೇ ಆದ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಅವರಿಗೆ ಪ್ರೇರೇಪಣೆ ನೀಡುತ್ತದೆ.

ಇದರಿಂದ ಕೈಗಾರಿಕೆಗಳು ಹಿಂದುಳಿದ ಪ್ರದೇಶಗಳಿಗೂ ವಿಸ್ತರಿಸಿ, ಅವುಗಳ ಅಭಿವೃದ್ಧಿಗೂ ಸಹಾಯವಾಗುತ್ತದೆ- ಹಳ್ಳಿಗಳಿಂದ ಉದ್ಯೋಗಕ್ಕಾಗಿ ಪಟ್ಟಣಗಳಿಗೆ ವಲಸೆ ಬರುವುದು ಕಡಿಮೆಯಾಗುತ್ತದೆ.

ಸಣ್ಣ ಕೈಗಾರಿಕಾ ರಂಗ ತನ್ನ ಬೆಳವಣಿಗೆಯ ಮೊದಲ ಹಂತಗಳಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಇವುಗಳಲ್ಲಿ ಮುಖ್ಯವಾದವೆಂದರೆ: 1 ಸಣ್ಣ ಕೈಗಾರಿಕಾ ರಂಗದ ಉತ್ಪನ್ನಗಳ ಮಾರಾಟದ ವ್ಯವಸ್ಥೆ, 2 ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಲದ ವ್ಯವಸ್ಥೆ, 3 ನಿವೇಶನಗಳ ಕೊರತೆ, 4 ಸಣ್ಣ ಕೈಗಾರಿಕೋದ್ಯಮಿಗಳಿಗೆ ಸೂಕ್ತ ತರಬೇತಿಯ ಅಗತ್ಯ ಹಾಗೂ 5 ಆಧುನೀಕರಣಕ್ಕೆ ಸಹಾಯ.

ಇವುಗಳಲ್ಲಿ ಮೊದಲನೆಯದು ಬಹಳ ಜಟಿಲವಾದ ಸಮಸ್ಯೆ. ಬೃಹತ್ ಕೈಗಾರಿಕಾಸಂಸ್ಥೆಗಳ ಪ್ರಬಲ ಪ್ರತಿಸ್ಪರ್ಧಿಯನ್ನೂ ಸಣ್ಣ ಘಟಕಗಳ ಉತ್ಪನ್ನಗಳೆಂಬ ಕಾರಣದಿಂದ ಅವುಗಳ ಬಗ್ಗೆ ಗ್ರಾಹಕರ ಉದಾಸೀನವನ್ನೂ ಅವು ಎದುರಿಸಬೇಕಾಗಿತ್ತು.

ಸ್ಟೇಟ್ ಬ್ಯಾಂಕನ್ನು ಬಿಟ್ಟರೆ, ಇತರ ಭಾರತೀಯ ಬ್ಯಾಂಕುಗಳು ರಾಷ್ಟ್ರೀಕರಣಗೊಳ್ಳುವ ವರೆಗೂ ಸಣ್ಣಕೈಗಾರಿಕೆಗಳಿಗೆ ಸಾಲ ಕೊಡುವ ವಿಷಯದಲ್ಲಿ ಹೆಚ್ಚು ಉತ್ಸಾಹ ತೋರಿಸುತ್ತಿರಲಿಲ್ಲ. ಇದಕ್ಕೆ ಸಣ್ಣ ಕೈಗಾರಿಕೆಗಳ ಯಶಸ್ಸಿನ ಬಗ್ಗೆ ಇದ್ದ ಅನಿಶ್ಚಿತತೆಯೂ ಬ್ಯಾಂಕುಗಳು ಸಾಲ ನೀಡಿಕೆಗೆ ಆಸ್ತಿಯಯನ್ನೇ ಆಧಾರವಾಗಿ ಪರಿಗಣಿಸುವ ನೀತಿಯೂ ಕಾರಣ.

ಆದರೂ ಸಣ್ಣ ಕೈಗಾರಿಕೆಗಳಿಂದ ಆಗುವ ಸಾಮಾಜಿಕ ಲಾಭಗಳನ್ನು ಮನಗಂಡ ಈ ರಂಗದ ಸರ್ವತೋಮುಖ ಬೆಳವಣಿಗೆಗಾಗಿ ಅನೇಕ ಕ್ರಮಗಳನ್ನು ಕೈಗೊಂಡಿದೆ. ಅಲ್ಲದೆ ರಾಷ್ಟ್ರೀಕರಣದ ಅನಂತರ ಬ್ಯಾಂಕುಗಳ ಸಾಲ ನೀಡಿಕೆ ನೀತಿಯೂ ಬದಲಾಗಿ ಸಣ್ಣ ಕೈಗಾರಿಕೆಗಳು ಶೀಘ್ರ ಬೆಳವಣಿಗೆ ಸಾಧಿಸಿವೆ.

ನೆರವುಗಳು

ಸರಕಾರ ಕೈಗೊಂಡಿರುವ ಕ್ರಮಗಳಲ್ಲಿ ಮುಖ್ಯವಾದವುಗಳೆಂದರೆ: 1 1955 ರಲ್ಲಿ ಪ್ರಾರಂಭವಾದ ಕೈಗಾರಿಕಾ ಕ್ಷೇತ್ರಗಳ (ಎಸ್ಟೇಟ್) ಯೋಜನೆ ಹಾಗೂ ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮದ ಸ್ಥಾಪನೆ; 2 ಸಣ್ಣ ಕೈಗಾರಿಕಾ ಘಟಕಗಳಿಗೆ ಆದ್ಯತೆಯ ಮೇಲೆ ಕಚ್ಚಾ ಸಾಮಗ್ರಿಗಳ ಸರಬರಾಜು ಹಾಗೂ ಆದ್ಯತೆಯ ಮೇಲೆ ಉತ್ಪನ್ನಗಳ ಕೊಳ್ಳಿಕೆ; 3 1960ರಲ್ಲಿ ಪ್ರಾರಂಭಿಸಲಾದ ಸಣ್ಣ ಕೈಗಾರಿಕೆಗಳ ಸಾಲ ಖಾತರಿ ಯೋಜನೆ; 4 1962ರಿಂದ ಜಾರಿಯಲ್ಲಿರುವ ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ ಯೋಜನೆ; 5 ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನ ಸ್ಥಾಪನೆ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳು ಜಾರಿಗೆ ತಂದಿರುವ ವಿಶೇಷ ಯೋಜನೆಗಳು; 6 ರಾಜ್ಯ ಸರಕಾರಗಳು ಸ್ಥಾಪಿಸಿರುವ ಹಣಕಾಸು ನಿಗಮಗಳು ಹಾಗೂ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳು ಜಾರಿಗೆ ತಂದಿರುವ ವಿವಿಧ ಯೋಜನೆಗಳು; 7 ಸಣ್ಣ ಕೈಗಾರಿಕೋದ್ಯಮಿಗಳಿಗೆ ತಾಂತ್ರಿಕ ತರಬೇತಿ; 8 ಹಲವಾರು ವಸ್ತುಗಳ ತಯಾರಿಕೆಯನ್ನು ಸಣ್ಣ ಕೈಗಾರಿಕೆಗಳಿಗೆ ಕಾದಿರಿಸುವಿಕೆ.

ಕೈಗಾರಿಕೆಗಳ ಸ್ಥಾಪನೆಗೆ ಅವಶ್ಯವಾದ ನೀರು, ವಿದ್ಯುಚ್ಛಕ್ತಿ, ಕಚ್ಚಾ ಸಾಮಗ್ರಿಗಳ ಪೂರೈಕೆ, ಸಾಗಾಣಿಕೆ ಮುಂತಾದ ಅನುಕೂಲಗಳಿರುವಂಥ ಸ್ಥಳಗಳಲ್ಲಿ ಸ್ಥಾಪಿಸಲಾದ ಕೈಗಾರಿಕಾ ಎಸ್ಟೇಟುಗಳು ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ಬಹಳ ಸಹಾಯಕವಾಗಿವೆ. ಈ ಕ್ಷೇತ್ರಗಳಲ್ಲಿ ಈಚೆಗೆ ಬ್ಯಾಂಕುಗಳು, ಅಂಚೆ ಕಛೇರಿಗಳು, ಮಾರಾಟದ ವ್ಯವಸ್ಥೆಗಳು ಮುಂತಾದ ಇತರ ಸೌಲಭ್ಯಗಳೂ ದೊರೆಯುತ್ತವೆ.

ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮವೂ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಅದು ಸಣ್ಣ ಕೈಗಾರಿಕಾ ಘಟಕಗಳ ಉತ್ಪನ್ನಗಳನ್ನು ಸರಕಾರಕ್ಕೆ ಸರಬರಾಜು ಮಾಡಿಸುವ ವ್ಯವಸ್ಥೆಯನ್ನು ಮಾಡುತ್ತಿದೆ. ಸಣ್ಣ ಕೈಗಾರಿಕಾ ಘಟಕಗಳ ಉತ್ಪನ್ನಗಳ ಮಾರಾಟಕ್ಕಾಗಿ ಅನೇಕ ಮಳಿಗೆಗಳನ್ನೂ ಕೇಂದ್ರಗಳನ್ನೂ ಅದು ಸ್ಥಾಪಿಸಿದೆ.

ಕಂತುಗಳಲ್ಲಿ ಮರುಪಾವತಿ ಮಾಡುವ ಒಪ್ಪಂದದ ಮೇರೆಗೆ ಸಣ್ಣ ಕೈಗಾರಿಕಾ ಘಟಕಗಳಿಗೆ ಯಂತ್ರೋಪಕರಣಗಳನ್ನು ನೀಡುವುದು ಈ ನಿಗಮದ ಮುಖ್ಯ ಚಟುವಟಿಕೆಗಳಲ್ಲೊಂದು.

ಇವೆಲ್ಲದರ ಜೊತೆಗೆ ಅದು ತಾಂತ್ರಿಕ ತರಬೇತಿ ಹಾಗೂ ಮಾದರಿ ಯಂತ್ರ ನಿರ್ಮಾಣ ಕೇಂದ್ರಗಳನ್ನೂ ಸ್ಥಾಪಿಸಿ

ತಂತ್ರಜ್ಞರಿಗೆ ಹಾಗೂ ಸಣ್ಣ ಕೈಗಾರಿಕೋದ್ಯಮಿಗಳಿಗೆ ಅವಶ್ಯಕವಾದ ತಾಂತ್ರಿಕ ತರಬೇತಿಯನ್ನು ನೀಡುತ್ತಿದೆ.

ಪ್ರಮುಖ ಭಾರತೀಯ ಬ್ಯಾಂಕುಗಳ ರಾಷ್ಟ್ರೀಕರಣದ ಅನಂತರ ಸಣ್ಣ ಕೈಗಾರಿಕಾ ರಂಗದ ಸಾಲದ ಅವಶ್ಯಕತೆಯನ್ನು ರಾಷ್ಟ್ರೀಕೃತ ಬ್ಯಾಂಕುಗಳು ಬಹುಮಟ್ಟಿಗೆ ಪೂರೈಸುತ್ತಿವೆ. ಕಳೆದ ದಶಕದಿಂದೀಚೆಗೆ ಬ್ಯಾಂಕುಗಳು ತಮ್ಮ ಉದರಿ ನೀಡಿಕೆಯ ನೀತಿಯಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡಿಕೊಂಡಿವೆ.

ಇದರಿಂದಾಗಿ ಸಣ್ಣ ಕೈಗಾರಿಕಾ ಘಟಕಗಳ ದಿನನಿತ್ಯದ ಹಣಕಾಸಿನ ಅವಶ್ಯಕತೆಗಳು ಅಲ್ಪಾವಧಿ ಸಾಲ, ಹುಂಡಿ ವಟಾವಣೆ ಮುಂತಾದ ರೂಪಗಳಲ್ಲಿ ಈಗ ದೊರೆಯುತ್ತಿವೆ. ಸಣ್ಣ ಕೈಗಾರಿಕಾ ಘಟಕಗಳಿಗೆ ಹೆಚ್ಚು ಸಹಾಯ ನೀಡಲು ಬ್ಯಾಂಕುಗಳನ್ನು ಪ್ರೋತ್ಸಾಹಿಸಲು ಹಾಗೂ ಸಾಲಗಳ ಮರುಪಾವತಿಯಾಗದೆ ಸಂಭವಿಸಬಹುದಾದ ನಷ್ಟವನ್ನು ತುಂಬಿಕೊಡಲು ಸರಕಾರ ಸಣ್ಣ ಕೈಗಾರಿಕೆಗಳ ಸಾಲ ಖಾತರಿ ಯೋಜನೆಯನ್ನು ಜಾರಿಗೆ ತಂದಿದೆ. ಇದು ಬ್ಯಾಂಕುಗಳಿಗೆ ಆಗುವ ನಷ್ಟದ ಸೇ. 75 ರಷ್ಟನ್ನು, ಕೆಲವು ವಿಶೇಷ ಸಂದರ್ಭಗಳಲ್ಲಿ ಸೇ. 90 ರಷ್ಟನ್ನು ಕೂಡ, ತುಂಬಿಕೊಡುತ್ತಿದೆ. ರಿಸರ್ವ್ ಬ್ಯಾಂಕಿನ ಒಂದು ಅಂಗವಾಗಿ ಕೆಲಸ ಮಾಡುತ್ತಿದ್ದ ಈ ಸಂಸ್ಥೆಯ ಕಾರ್ಯಗಳನ್ನು ಇತ್ತೀಚೆಗೆ (1-4-81ರಿಂದ) ಠೇವಣಿ ವಿಮೆ ಹಾಗೂ ಸಾಲ ಖಾತರಿ ನಿಗಮಕ್ಕೆ (ಡಿಪಾಸಿಟ್ ಇನ್‌ಷೂರೆನ್ಸ್ ಮತ್ತು ಕ್ರೆಡಿಟ್ ಗ್ಯಾರಂಟೀ ಕಾರ್ಪೊರೇಷನ್) ವರ್ಗಾಯಿಸಲಾಗಿದೆ.

ಕೈಗಾರಿಕಾ ಅಭಿವೃದ್ಧಿ ಬ್ಯಾಂಕೂ ಸಣ್ಣ ಕೈಗಾರಿಕೆಗಳಿಗೆ ಯಂತ್ರೋಪಕರಣಗಳನ್ನು ಕೊಳ್ಳಲು ಕಡಿಮೆ ಬಡ್ಡಿ ದರಗಳಲ್ಲಿ ದೀರ್ಘಾವಧಿ ಸಾಲಗಳನ್ನು ಕೊಡುತ್ತಿದೆ. ಅಲ್ಲದೆ ಬ್ಯಾಂಕುಗಳು ತಮ್ಮ ಸಾಲಗಾರರಿಗೆ ಕೊಡುವ ದೀರ್ಘಾವಧಿ ಸಾಲಗಳಿಗಾಗಿ ಅವಕ್ಕೆ ಪುನರ್ಧನಪೋಷಣೆ ನೀಡುವುದರ ಮೂಲಕ (ರೀ–ಫೈನಾನ್ಸ್) ಬ್ಯಾಂಕುಗಳಿಗೂ ನೆರವಾಗುತ್ತಿದೆ.

ಸಣ್ಣ ಕೈಗಾರಿಕೆಗಳು—ಕೆಲವು ಅಂಕಿ–ಅಂಶಗಳು

ಸಂಖ್ಯೆ	ವಿವರ	1965ರಲ್ಲಿ	1978ರಲ್ಲಿ
1	ರಾಜ್ಯ ಕೈಗಾರಿಕಾ ಇಲಾಖೆಗಳಲ್ಲಿ ನೋಂದಾಯಿಸಲ್ಪಟ್ಟ ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ	1,20,000	6,00,000
2	ಉತ್ಪಾದನೆಯ ಮೌಲ್ಯ (ಕೋಟಿ ರೂ.ಗಳಲ್ಲಿ)	2,954	7,570
3	ಉದ್ಯೋಗ (ಲಕ್ಷ ರೂ.ಗಳಲ್ಲಿ)	29	60
4	ಬ್ಯಾಂಕುಗಳು ಸಾಲ ನೀಡಿದ		
	i) ಘಟಕಗಳ ಸಂಖ್ಯೆ	38,927	4,77,000
	ii) ಸಾಲದ ಮೊತ್ತ (ಕೋಟಿ ರೂ.ಗಳಲ್ಲಿ)	375	2,273
5	ರಾಜ್ಯ ಹಣಕಾಸು ನಿಗಮಗಳು ನೀಡಿದ ಸಾಲಗಳು		
	i) ಸಂಖ್ಯೆ	3,126	7,914
	ii) ಮೊತ್ತ (ಕೋಟಿ ರೂ.ಗಳಲ್ಲಿ)	25	126
6	ರಾಷ್ಟ್ರೀಯ ಕೈಗಾರಿಕಾ ಬ್ಯಾಂಕು ಮರು ಸಾಲ ನೀಡಿಕೆ		
	i) ಘಟಕಗಳ ಸಂಖ್ಯೆ	456	5,126
	ii) ಸಾಲದ ಮೊತ್ತ (ಕೋಟಿ ರೂ.ಗಳಲ್ಲಿ)	7	89
7	ಮರುಪಾವತಿಯಾಗದೆ ಉಳಿದ ಸಾಲಗಳ		
	i) ಸಂಖ್ಯೆ (ಘಟಕಗಳು)	12,439	19,887
	ii) ಮೊತ್ತ (ಕೋಟಿ ರೂ.ಗಳಲ್ಲಿ)	60	126
8	ಕೈಗಾರಿಕಾ ವಸಾಹತುಗಳ ಸಂಖ್ಯೆ	336	6,124
	i) ಮಳಿಗೆಗಳ ಸಂಖ್ಯೆ	6,326	13,551
	ii) ಕಲ್ಪಿತವಾದ ಉದ್ಯೋಗಾವಕಾಶಗಳ ಸಂಖ್ಯೆ	54,651	2,20,000
	iii) ಉತ್ಪಾದನೆಯ ಮೌಲ್ಯ (ಕೋಟಿ ರೂ.ಗಳಲ್ಲಿ)	49	500
9	ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮ ಸರಬರಾಜು ಮಾಡಿದ ಯಂತ್ರೋಪಕರಣಗಳ ಮೌಲ್ಯ (ಕೋಟಿ ರೂ.ಗಳಲ್ಲಿ)	3	96
10	ಸಣ್ಣ ಕೈಗಾರಿಕೆಗಳಿಗೆ ಕಾದಿರಿಸಲ್ಪಟ್ಟ ಉತ್ಪನ್ನಗಳ ಸಂಖ್ಯೆ (1968 ಹಾಗೂ 1977ರಲ್ಲಿ)	46	504

ಇವೆಲ್ಲದರ ಜೊತೆಗೆ ಎಲ್ಲಾ ರಾಜ್ಯ ಸರಕಾರಗಳೂ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳ ಹಾಗೂ ರಾಜ್ಯ ಹಣಕಾಸು ನಿಗಮಗಳ ಮೂಲಕ ತಮ್ಮದೇ ಆದ ರೀತಿಯಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ನೆರವಾಗುತ್ತಿವೆ.

ಸರಕಾರ ಕಾಲಕಾಲಕ್ಕೆ ಹಲವಾರು ಸರಕುಗಳ ಉತ್ಪಾದನೆಯನ್ನು ಸಣ್ಣ ಕೈಗಾರಿಕಾ ರಂಗಕ್ಕೆ ಕಾದಿರಿಸುತ್ತ ಬಂದಿದೆ. ಈ ರಂಗದ ಪ್ರಶಂಸಾರ್ಹ ಅಭಿವೃದ್ಧಿಗೆ ಈ ನೀತಿಯೇ ಮುಖ್ಯ ಕಾರಣವೆಂದರೆ ತಪ್ಪಾಗಲಾರದು. ಇಂಥ ಕಾದಿರಿಸಲಾದ ಉತ್ಪನ್ನಗಳ ಸಂಖ್ಯೆ ಈಗ ಐದು ನೂರನ್ನೂ ಮೀರಿದೆ.

ಸಮಸ್ಯೆಗಳು

ಇಷ್ಟಾದರೂ ಹಲವಾರು ಸಮಸ್ಯೆಗಳು ಈ ರಂಗವನ್ನು ಕಾಡುತ್ತಿವೆ. ಅವುಗಳಲ್ಲಿ ಮುಖ್ಯವಾದ ಸಮಸ್ಯೆ ಕೈಗಾರಿಕಾ ಘಟಕಗಳ ಅಸ್ವಸ್ಥತೆ. ಸರಕಾರದ ದೃಷ್ಟಿಯಲ್ಲಿ ಬಹುಪಾಲು ಘಟಕಗಳ ನಷ್ಟ ಹಾಗೂ ಅಸ್ವಸ್ಥತೆಗೆ ಕೈಗಾರಿಕೋದ್ಯಮಿಗಳ ದುರಾಡಳಿತವೇ ಕಾರಣ.

ಕೆಲವೊಮ್ಮೆ ಸರಕಾರದ ನೀತಿ ಸಣ್ಣ ಕೈಗಾರಿಕೆಗಳಿಗೆ ವರವಾಗುವುದರ ಬದಲು ಶಾಪವಾಗುವುದೂ ಉಂಟು. ಸರಕಾರದ ಪ್ರೋತ್ಸಾಹದಿಂದಲೇ, ಸರಕಾರವೇ ಕಾದಿರಿಸಿದ ಕೆಲವು ವಸ್ತುಗಳ ಉತ್ಪಾದನೆಯಲ್ಲಿ ತೊಡಗಿದ ಕೆಲವು ಕೈಗಾರಿಕೆಗಳು (ಉದಾ: ಸಣ್ಣ ಉಕ್ಕಿನ ಕಾರ್ಖಾನೆಗಳು, ಟೂತ್ ಪೇಸ್ಟ್ ಉದ್ಯಮಗಳು) ಹಲವಾರು ಕಾರಣಗಳಿಂದಾಗಿ (ಉದಾ: ವಿದೇಶೀ ಸಂಸ್ಥೆಗಳಿಂದ ಪ್ರತಿಸ್ಪರ್ಧೆ, ಮಾರುಕಟ್ಟೆಯ ಅಭಾವದಿಂದಾಗಿ ಬಂಡವಾಳಕ್ಕೆ ತಕ್ಕ ಲಾಭಗಳಿಕೆಯ ಅಸಾಧ್ಯತೆ) ನಷ್ಟ ಅನುಭವಿಸಿವೆ. ಅಲ್ಲದೆ ದೇಶದ ಆರ್ಥಿಕ ಪ್ರಗತಿಗೆ ಅವಶ್ಯವೆಂದು ಸರಕಾರದಿಂದಲೇ ಪರಿಗಣಿಸಲ್ಪಟ್ಟ ಹಲವಾರು ಕೈಗಾರಿಕೆಗಳು ಇನ್ನೂ ಬೃಹತ್ ಕೈಗಾರಿಕೆಗಳಿಗೇ ಮೀಸಲಾಗಿವೆ. ಜೊತೆಗೆ ಸರಕಾರ ಯಾವ ಭೋಗವಸ್ತುಗಳ ಬಳಕೆಯನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆಯೋ ಅವುಗಳ ತಯಾರಿಕೆಗೆ ಸರಕಾರವೇ ಹೆಚ್ಚು ಹೆಚ್ಚಾಗಿ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸುತ್ತಿದೆ. ಅಲ್ಲದೆ ಅಸ್ವಸ್ಥ ಘಟಕಗಳಿಗೆ ದೊರೆಯುವ ವಿವಿಧ ರೀತಿಯ ರಿಯಾಯಿತಿಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿರುವ ಘಟಕಗಳಿಗೆ ದೊರೆಯುವುದಿಲ್ಲ. ಅಂಥ ಘಟಕಗಳು ಬೆಳೆದಂತೆಲ್ಲ ಬೃಹತ್ ಕೈಗಾರಿಕೆಗಳೆಂದು ಪರಿಗಣಿಸಲ್ಪಟ್ಟು, ಸಿಗುತ್ತಿದ್ದ ಕೆಲವೇ ರಿಯಾಯಿತಿಗಳೂ ಇಲ್ಲವಾಗುತ್ತವೆ.

ಇಂಥ ವಿಪರ್ಯಾಸಗಳನ್ನು ಸರಿಪಡಿಸಿದಲ್ಲಿ ಹಾಗೂ ಸರಕಾರದಿಂದ ಸೂಕ್ತ ಮಾರ್ಗದರ್ಶನ ದೊರೆತಲ್ಲಿ ಸಣ್ಣ ಕೈಗಾರಿಕಾ ರಂಗ ಹೆಚ್ಚು ಹೆಚ್ಚಿನ ಪ್ರಗತಿಯನ್ನು ಸಾಧಿಸುವುದರಲ್ಲಿ ಸಂದೇಹವಿಲ್ಲ.

ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆ ಮತ್ತು ಬ್ಯಾಂಕುಗಳ ನಡುವಿನ ಬಾಂಧವ್ಯ

ಆರ್. ಲಕ್ಷ್ಮೀನರಸಿಂಹಯ್ಯ

ಬ್ಯಾಂಕು ಹಣದ ವ್ಯವಹಾರದಲ್ಲಿ ತೊಡಗಿರುವ ಸಂಸ್ಥೆ. ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆ, ಹೆಸರೇ ಸೂಚಿಸುವಂತೆ, ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ಕಾರ್ಯ ನಿರತವಾಗಿರುವ ಒಂದು ಸರ್ಕಾರಿ ಸಂಸ್ಥೆ. ಇವೆರಡರ ನಡುವೆ ಎಂಥ ಬಾಂಧವ್ಯ ಸಾಧ್ಯ? ಇದು ಪರಿಶೀಲಿ ಸಬೇಕಾದ ಪ್ರಶ್ನೆ.

ಬ್ಯಾಂಕು ಮತ್ತು ಕೈಗಾರಿಕೆಗಳ ನಡುವೆ ಸಂಬಂಧ ಏರ್ಪಡುವುದು ಹಣದ ರೂಪದಲ್ಲಿರುವ ಬಂಡವಾಳದ ಮೂಲಕ. ಬ್ಯಾಂಕುಗಳು ಕೈಗಾರಿಕಾ ಚಟುವಟಿಕೆಗಳಿಗೆ ಅಗತ್ಯ ವಾದ ಈ ಬಂಡವಾಳವನ್ನು ಸಾಲದ ರೂಪದಲ್ಲಿ ಒದಗಿ ಸುತ್ತವೆ. ಸಾಲ ನೀಡುವಾಗ ಸಾಲದ ಮೊತ್ತ ಬಡ್ಡಿಯ ಸಮೇತ ವಾಪಸು ಬರಲು ಸಾಧ್ಯವಾಗುವಂತೆ ಎಲ್ಲ ಭದ್ರತೆಯ ಕ್ರಮಗಳನ್ನು ಕೈಗೊಂಡರೂ ಕೈಗಾರಿಕೆಗಳ ಅಭಿ ವೃದ್ಧಿಯ ದೃಷ್ಟಿಯಿಂದ ಬ್ಯಾಂಕುಗಳು ಕೆಲವು ವಿಶೇಷವಾದ ನೀತಿ-ಮಾನಕಗಳನ್ನು ಅನುಸರಿಸಬೇಕಾಗುತ್ತದೆ. ಬಂಡವಾಳದ ಸಾಲವನ್ನು ನೀಡುವುದರಲ್ಲಿಯೇ ವಿಶೇಷವಾಗಿ ನಿರತವಾ ಗಿರುವ ಬ್ಯಾಂಕುಗಳ ಕೊರತೆ ಇರುವ ನಮ್ಮ ದೇಶದಲ್ಲಿ ವಾಣಿಜ್ಯ ಬ್ಯಾಂಕುಗಳೇ ಈ ಅಭಿವೃದ್ಧಿ ಕಾರ್ಯಕ್ರಮವನ್ನೂ ನಿರ್ವಹಿಸಬೇಕಾಗಿರುವುದರಿಂದ ಈ ವಿಶೇಷ ನೀತಿ-ಮಾನಕಗಳ ಪ್ರಾಮುಖ್ಯ ಬಹಳ ಹೆಚ್ಚು. ಇದಕ್ಕೆ ಕಾರಣ ಇಷ್ಟೆ: ಕೈಗಾ ರಿಕೆಗಳ ಬಂಡವಾಳಕ್ಕಾಗಿ ಹಣವನ್ನು ಸಾಲವಾಗಿ ನೀಡು ವಾಗ ಕೇವಲ ಸಾಲದ ಮೊತ್ತ ಮತ್ತು ಅದರ ಬಡ್ಡಿಯ ವಾಪಸಾತಿಯನ್ನು ಮಾತ್ರ ಭದ್ರಪಡಿಸಿಕೊಂಡರೆ ಸಾಲದು. ಸಾಲವಾಗಿ ಪಡೆದ ಹಣದಿಂದ ಎಂಥ ವಸ್ತುವನ್ನು ತಯಾರಿ ಸಲು ಉಪಯೋಗಿಸಲು ಉದ್ದೇಶಿಸಲಾಗಿದೆ, ಆ ವಸ್ತುವಿನ ಉಪಯೋಗವೇನು, ಅದರ ಮಾರಾಟದ ಆಗುಹೋಗು ಗಳೇನು, ಅದರ ತಯಾರಿಕೆಗೆ ಸರಿಯಾದ ಯಂತ್ರೋಪ ಕರಣಗಳು ಯಾವುವು, ಅದಕ್ಕೆ ಕಚ್ಚಾ ಸಾಮಗ್ರಿಯ ಪೂರೈಕೆ ಹೇಗಿದೆ—ಮುಂತಾದ ಅಂಶಗಳಿಗೆ ಹೆಚ್ಚಿನ ಗಮನ ನೀಡು ವುದು ಆವಶ್ಯಕ. ಇವುಗಳ ಕೂಲಂಕಷ ಪರಿಶೀಲನೆಗೆ ಈಗಿನ ಅನೇಕ ವಾಣಿಜ್ಯ ಬ್ಯಾಂಕುಗಳಲ್ಲಿ ಸೌಲಭ್ಯಗಳಿಲ್ಲ. ಸಣ್ಣ ಕೈಗಾರಿಕೆಗಳ ತ್ವರಿತ ಅಭಿವೃದ್ಧಿಗೆ ತೊಡಕನ್ನುಂಟುಮಾಡುವ ಈ ಅಂಶವನ್ನು ಭಾರತ ಸರ್ಕಾರ ಗಮನಿಸಿ ಕೈಗಾರಿಕೆಗಳನ್ನು ಸಮಗ್ರವಾಗಿ ಮತ್ತು ಸಮಂಜಸವಾಗಿ ಅಭಿವೃದ್ಧಿಪಡಿಸ ಲೋಸುಗವಾಗಿಯೇ ಅಸ್ತಿತ್ವಕ್ಕೆ ತಂದ ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆಯಲ್ಲಿ ಅಂಥ ಸೌಲಭ್ಯಗಳುನ್ನು ಕಲ್ಪಿಸಿದೆ. ಈ ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆಯ ಹಿನ್ನೆಲೆ ಮತ್ತು ಕಾರ್ಯವಿಧಾನ ಹೀಗಿದೆ:

ಸೇವಾಸಂಸ್ಥೆಯ ಹಿನ್ನೆಲೆ

ಬಂಡವಾಳದ ದೃಷ್ಟಿಯಿಂದ ಭಾರತ ಬಡದೇಶ. ಈ ಬಡದೇಶದ ಆರ್ಥಿಕ ಅಭಿವೃದ್ಧಿ ಕೇವಲ ವ್ಯವಸಾಯ ದಿಂದ ಸಾಧ್ಯವಿಲ್ಲ. ಕೈಗಾರಿಕೆಗಳ ಸ್ಥಾಪನೆಯೂ ಅತ್ಯಾವಶ್ಯಕ. ಆದರೆ ದೇಶಾದ್ಯಂತ ದೊಡ್ಡ ಕೈಗಾರಿಕೆಗಳನ್ನೇ ಸ್ಥಾಪಿಸಿ ಆ ಮೂಲಕ ಜನರಿಗೆ ಬೇಕಾದ ಎಲ್ಲ ಸರಕುಗಳನ್ನೂ ತಯಾರುಮಾಡಲು ಅನುವು ಮಾಡಿಕೊಡುವುದು ಬಂಡ ವಾಳದ ಕೊರತೆಯಿಂದಷ್ಟೇ ಅಲ್ಲದೆ ನಮ್ಮ ಆರ್ಥಿಕ ನೀತಿಯ ದೃಷ್ಟಿಯಿಂದಲೂ ಅಸಮ್ಮತವಾದುದು. ಅದಕ್ಕೆ ಬದಲಿ ಮಾರ್ಗವಾಗಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕಾಗಿ ಬಂತು. ಆದರೂ ಕೆಲವು ಅನಿವಾರ್ಯ ವಿಷಯಗಳಲ್ಲಿ ದೊಡ್ಡ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರದ ಪ್ರೋತ್ಸಾಹ ಉಂಟು. ಆದಷ್ಟು ಮಟ್ಟಿಗೆ ದೇಶಾದ್ಯಂತ ಆಧುನಿಕ ರೀತಿಯಲ್ಲಿ ಮತ್ತು ಹೆಚ್ಚಿನ ಸಾಮರ್ಥ್ಯದಿಂದ ತಯಾರಿಕಾ ಚಟುವಟಿಕೆಗಳಲ್ಲಿ ನಿರತ ವಾಗತಕ್ಕ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಭಾರತ ಸರ್ಕಾರ ಕಾತರಗೊಂಡು ಈ ವಿಷಯಕ್ಕೆ ಸಂಬಂಧ ಪಟ್ಟ ಎಲ್ಲ ಅಂಶಗಳನ್ನೂ ಆಮೂಲಾಗ್ರವಾಗಿ ಅಧ್ಯಯನ ಮಾಡಿ ಒಂದು ವರದಿಯನ್ನು ಸಲ್ಲಿಸಲು, 1953–54ರಲ್ಲಿ, ಅಮೆರಿಕದ ಫೋರ್ಡ್ ಫೌಂಡೇಷನ್‌ನ ಸೌಜನ್ಯದಿಂದ, ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ವಿಶೇಷ ವಾದ ಪಾಂಡಿತ್ಯ ಮತ್ತು ಅನುಭವವುಳ್ಳವರನ್ನೊಳಗೊಂಡ ಒಂದು ಅಂತರರಾಷ್ಟ್ರೀಯ ಯೋಜನಾ ತಂಡವನ್ನು ಭಾರತಕ್ಕೆ ಕರೆಸಲಾಯಿತು.

ತನಗೆ ವಹಿಸಿಕೊಟ್ಟ ಕಾರ್ಯವಿಷಯದ ಪರಿಮಿತಿಗೆ ಒಳಪಟ್ಟ ಎಲ್ಲ ಅಂಶಗಳನ್ನೂ ಈ ತಂಡ ಸುದೀರ್ಘವಾಗಿ ಅಧ್ಯಯನ ಮಾಡಿ ಅನಂತರ ಸಿದ್ಧಪಡಿಸಿದ ವರದಿಯಲ್ಲಿ ಹಲವಾರು ಸಲಹೆಗಳನ್ನು ನೀಡಿತು. ಅವುಗಳ ಪೈಕಿ ಈ ಸಂದರ್ಭದಲ್ಲಿ ಉಲ್ಲೇಖಾರ್ಹವಾದುದು ಏನೆಂದರೆ: ಭಾರತದ ಸಂವಿಧಾನದ ಪ್ರಕಾರ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯ ವಿಷಯು ರಾಜ್ಯ ಸರ್ಕಾರಗಳ ಅಧಿಕಾರವ್ಯಾಪ್ತಿಗೆ ಒಳಪಟ್ಟಿದೆ. ಆದಾಗ್ಯೂ, ದೇಶಾದ್ಯಂತ ಆಧುನಿಕ ರೀತಿಯ ಸಣ್ಣ ಕೈಗಾರಿಕೆಗಳು ಒಂದು ಯೋಜಿತ ರೀತಿಯಲ್ಲಿ ಸಮತೋಲವಾದ ಪ್ರಗತಿ ಹೊಂದಬೇಕಾದರೆ ಬಂಡವಾಳ ಹೂಡಿಕೆ, ಸರಕುಗಳನ್ನು ಲಾಭದಾಯಕವಾಗಿ ತಯಾರಿಸುವ ವಿಧಾನ, ಅವನ್ನು ಮಾರಾಟ ಮಾಡುವ ತಂತ್ರ, ಕೈಗಾರಿಕೆಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಅಗತ್ಯವಾದ ನಿರ್ವಹಣೆಯ ವಿಷಯಗಳ ತಿಳಿವಳಿಕೆ, ಸರಿಯಾದ ಯಂತ್ರೋಪಕರಣಗಳನ್ನು ಉಪಯೋಗಿಸಿ ವಸ್ತುಗಳ ತಯಾರಿಕೆ ಮುಂತಾದ ಅಂಶಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ವಿಸ್ತರಣ ಸೇವೆಯ ಅಗತ್ಯ ಬಹಳವಾಗಿ ಇದ್ದು, ಈ ಕೊರತೆಯನ್ನು ನೀಗಲು ಭಾರತ ಸರ್ಕಾರದ ಅಧೀನದಲ್ಲಿ ಒಂದು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ ಮತ್ತು ಅದರ ಅಂಗವಾಗಿ ನಾಲ್ಕು ಪ್ರಾದೇಶಿಕ ತಾಂತ್ರಿಕ ಸಂಸ್ಥೆಗಳೂ ಅಸ್ತಿತ್ವಕ್ಕೆ ಬರಬೇಕು ಎಂಬ ಸಲಹೆ. ಇದನ್ನು ಭಾರತ ಸರ್ಕಾರ ಅಂಗೀಕರಿಸಿದುದರ ಪರಿಣಾಮವಾಗಿ 1954ರಲ್ಲಿ ಕೇಂದ್ರೀಯ ಸಣ್ಣ ಕೈಗಾರಿಕೆಗಳ ಸಂಸ್ಥೆ (ಸೆಂಟ್ರಲ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಆರ್ಗನೈಸೇಷನ್) ನವದೆಹಲಿಯಲ್ಲೂ ಅದರ ಕ್ಷೇತ್ರ ಕಾರ್ಯಾಲಯಗಳಾಗಿ ಸಣ್ಣ ಕೈಗಾರಿಕೆಗಳ ಸೇವಾಸಂಸ್ಥೆ (ಸ್ಮಾಲ್ ಇಂಡಸ್ಟ್ರೀಸ್ ಸರ್ವಿಸ್ ಇನ್‌ಸ್ಟಿಟ್ಯೂಟ್) ಎಂಬ ಹೆಸರಿನ ನಾಲ್ಕು ಪ್ರಾದೇಶಿಕ ತಾಂತ್ರಿಕಸಂಸ್ಥೆಗಳು ನವದೆಹಲಿ, ಮುಂಬಯಿ, ಕಲ್ಕತ್ತ ಮತ್ತು ಮದರಾಸಿನಲ್ಲೂ ಅಸ್ತಿತ್ವಕ್ಕೆ ಬಂದುವು. ಆಗಿನ ಮೈಸೂರು ರಾಜ್ಯದಲ್ಲಿ ಜನರು ಹೆಚ್ಚುಹೆಚ್ಚಾಗಿ ಸಣ್ಣ ಗಾತ್ರದ ಕೈಗಾರಿಕೆಗಳನ್ನು ಆರಂಭಿಸಲು ಅನುವಾಗುವಂತೆ ಕೈಗಾರಿಕಾ ವಿಸ್ತರಣ ಸೇವೆಯ ಕಾರ್ಯನಿರ್ವಹಣೆಯನ್ನು ಮುಂಬಯಿಯಲ್ಲಿ ಸ್ಥಾಪಿತವಾದ ಪ್ರಾದೇಶಿಕ ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆಗೆ ವಹಿಸಿಕೊಡಲಾಯಿತು. ಕ್ರಮೇಣ ಕೇಂದ್ರೀಯ ಸಣ್ಣ ಕೈಗಾರಿಕೆಗಳ ಸಂಸ್ಥೆ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ (ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಆರ್ಗನೈಸೇಷನ್) ಆಗಿ ಮಾರ್ಪಟ್ಟಿತು; ಮತ್ತು ಕರ್ನಾಟಕ ರಾಜ್ಯಕ್ಕೆ ಪ್ರತ್ಯೇಕವಾದ ಎಸ್.-ಐ. ಎಸ್.ಐ. ಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ಈಗ ಈ ರಾಜ್ಯದಲ್ಲಿ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಒಂದೊಂದು ಹಿರಿಯ ದರ್ಜೆಯ ಎಸ್.ಐ.ಎಸ್.ಐ., ಮಂಗಳೂರಿನಲ್ಲಿ ಒಂದು ಉಪಕಾರ್ಯಾಲಯ, ಮೈಸೂರು ಮತ್ತು ಬೆಳಗಾವಿಯಲ್ಲಿ ಒಂದೊಂದು ಕೈಗಾರಿಕಾ ವಿಸ್ತರಣ ಕೇಂದ್ರ (ಇಂಡಸ್ಟ್ರಿಯಲ್ ಎಕ್ಸ್‌ಟೆನ್ಷನ್ ಸೆಂಟರ್) ಇವು ಸಣ್ಣ ಕೈಗಾರಿಕೆಗಳ ಬೆಳವಣಿಗೆಯನ್ನು ತ್ವರಿತಗೊಳಿಸಲು ಶ್ರಮಿಸುತ್ತಿವೆ.

ಕಾರ್ಯಭಾರಗಳು

ಖಾದಿ ಮತ್ತು ಗ್ರಾಮ ಕೈಗಾರಿಕೆಗಳು, ತೆಂಗಿನ ನಾರು, ರಬ್ಬರ್, ಬಟ್ಟೆಗಳ ತಯಾರಿಕೆ ಮುಂತಾದವುಗಳಿಗೆ ಸಂಬಂಧಪಟ್ಟಂತೆ ರಾಷ್ಟ್ರಮಟ್ಟದಲ್ಲಿ ಆಯೋಗ ಅಥವಾ ಮಂಡಳಿಗಳಿರುವುದರಿಂದ ಅಂತಹ ಕೈಗಾರಿಕೆಗಳನ್ನುಳಿದು, ಯಂತ್ರೋಪಕರಣಗಳಿಗಾಗಿ ಬಂಡವಾಳದ ಅಗತ್ಯ 20 ಲಕ್ಷ ರೂಪಾಯಿಗಳಿಗೆ ಮೀರದೆ ಇರುವ ತಯಾರಿಕೆಯ ಚಟುವಟಿಕೆಗಳು ಈ ಸಂಸ್ಥೆಯ ಪೋಷಣಾ ಕಾರ್ಯವ್ಯಾಪ್ತಿಗೆ ಸೇರುತ್ತವೆ. ಇಂಥ ಸಣ್ಣ ಗಾತ್ರ ಉದ್ಯಮಗಳನ್ನು ಆರಂಭಿಸಲು ಇಚ್ಛೆ ಇರುವ ಉದ್ಯಮಶೀಲ ವ್ಯಕ್ತಿಗಳು ತಮ್ಮ ಉದ್ದೇಶಿತ ಉದ್ಯಮಗಳ ಬಗ್ಗೆ ಒಂದು ಸ್ಥೂಲವಾದ ನಿರ್ಧಾರವನ್ನು ಕೈಗೊಳ್ಳಲು ಅದರ ಆರ್ಥಿಕ, ತಾಂತ್ರಿಕ ಮತ್ತು ನಿರ್ವಹಣ ವಿಷಯಗಳ ಬಗ್ಗೆ ಸಲಹಾತ್ಮಕ ರೂಪದಲ್ಲಿ ತಿಳಿವಳಿಕೆ ನೀಡುವುದು ಈ ಸಂಸ್ಥೆಯ ಮುಖ್ಯವಾದ ಕಾರ್ಯವಿಧಾನ. ಇದಕ್ಕಾಗಿ ಆರ್ಥಿಕ, ನಿರ್ವಹಣ ತಂತ್ರ ಮತ್ತು ತಾಂತ್ರಿಕ ವಿಷಯಗಳಾದ ಮೆಕ್ಯಾನಿಕಲ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ ಇಂಜಿನಿಯರಿಂಗ್, ಕೆಮಿಕಲ್ ಇಂಜಿನಿಯರಿಂಗ್, ಮೆಟಲರ್ಜಿ, ಗ್ಲಾಸ್ ಟೆಕ್ನಾಲಜಿ, ಸೆರಾಮಿಕ್ಸ್ ಟೆಕ್ನಾಲಜಿ, ಲೆದರ್ ಟೆಕ್ನಾಲಜಿ ಮುಂತಾದುವುಗಳ ಕೈಗಾರಿಕಾ ವಿಷಯಗಳಲ್ಲಿ ಪಾಂಡಿತ್ಯ ಮತ್ತು ಪರಿಣತಿ ಪಡೆದ ಅಧಿಕಾರಿಗಳು ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸಣ್ಣ ಕೈಗಾರಿಕೋದ್ಯಮಿಗಳ ಉಪಯೋಗಕ್ಕಾಗಿ ಯಂತ್ರಾಗಾರ, ರಾಸಾಯನಿಕ ಮತ್ತು ಪಿಂಗಾಣಿ ವಸ್ತುಗಳ ಕೆಲವು ಗುಣಗಳನ್ನು ಪರೀಕ್ಷಿಸಲು ಪ್ರಯೋಗಶಾಲೆ ಇವೂ ಈ ಸಂಸ್ಥೆಯಲ್ಲಿ ಸಜ್ಜುಗೊಂಡಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕಾ ಚಟುವಟಿಕೆಗಳನ್ನು ವೃದ್ಧಿಪಡಿಸಲು ಕಮ್ಮಾರಿಕೆ, ಚರ್ಮೋದ್ಯೋಗ ಮತ್ತು ಮರಗೆಲಸಗಳಿಗೆ ಸಂಬಂಧಪಟ್ಟ ಕೆಲವು ಯಂತ್ರೋಪಕರಣಗಳಿಂದ ಸಜ್ಜುಗೊಂಡ ಮೂರು ಪ್ರದರ್ಶನ ವಾಹನಗಳು ಸದಾಕಾಲ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅಲ್ಲಿನ ಕುಶಲಕರ್ಮಿಗಳಿಗೆ ತರಬೇತಿ ನೀಡುವ ಕಾರ್ಯದಲ್ಲಿ ತೊಡಗಿರುತ್ತವೆ. ಉದ್ಯಮಶೀಲತೆಯ ವಿಕಾಸವೂ ಸೇರಿದಂತೆ ಅನೇಕ ನಿರ್ವಹಣಾ ವಿಚಾರ ಮತ್ತು ತಾಂತ್ರಿಕ ವಿಷಯಗಳ ತರಬೇತಿಯನ್ನೂ ಈ ಸಂಸ್ಥೆ ಏರ್ಪಡಿಸುತ್ತದೆ. ಸಣ್ಣ ಕೈಗಾರಿಕೆಗಳ ತಾಂತ್ರಿಕ ಮತ್ತು ಇತರ ಸಮಸ್ಯೆಗಳನ್ನು ಚರ್ಚಿಸಿ ಅವುಗಳಿಗೆ ಪರಿಹಾರವನ್ನು ಹುಡುಕಲು ಅನೇಕ ವಿಚಾರಸಂಕಿರಣಗಳನ್ನೂ ಈ ಸಂಸ್ಥೆ ಆಗಿಂದಾಗ್ಗೆ ಏರ್ಪಡಿಸುತ್ತದೆ. ಅಸ್ವಸ್ಥವಾದ ಸಣ್ಣ ಕೈಗಾರಿಕೆಗಳ ಹಣಕಾಸಿನ ವ್ಯವಹಾರವನ್ನು ಪರಿಶೀಲಿಸಿ ಅವನ್ನು ಪುನಃ ಲಾಭದಾಯಕವಾಗಿ ಮಾಡುವ ವಿಧಾನವನ್ನು ಸೂಚಿಸು

ವುದೂ, ಹಳೆಯ ವಿಧಾನವನ್ನು ಅನುಸರಿಸಿ ಸರಕುಗಳನ್ನು ತಯಾರು ಮಾಡುತ್ತಿರುವ ಸಣ್ಣ ಕೈಗಾರಿಕೆಗಳನ್ನು ಆಧುನಿಕ ಗೊಳಿಸುವ ಕಾರ್ಯಕ್ರಮವನ್ನು ರೂಪಿಸುವುದೂ ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆಯ ಇತರ ಮುಖ್ಯ ಕಾರ್ಯ ಭಾರಗಳು.

ಬ್ಯಾಂಕುಗಳೊಂದಿಗೆ ಸಂಬಂಧ


ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಬಂಡವಾಳವನ್ನು ಸಾಲವಾಗಿ ನೀಡುತ್ತಿರುವ ಅನೇಕ ವಾಣಿಜ್ಯ ಬ್ಯಾಂಕುಗಳಲ್ಲಿ ಇಂಥ ಸೌಲಭ್ಯಗಳಿಲ್ಲ. ಆದ್ದರಿಂದ ಸಾಲ ಪಡೆಯಲು ಉದ್ಯಮಗಳು ಬ್ಯಾಂಕುಗಳಿಗೆ ಸಲ್ಲಿಸುವ ಪರಿಯೋಜನಾ ವರದಿಯ (ಪ್ರಾಜೆಕ್ಟ್ ರಿಪೋರ್ಟ್) ಸಾಧಕ ಬಾಧಕ ಗಳನ್ನು ಅಭಿವೃದ್ಧಿಯ ದೃಷ್ಟಿಕೋನದಿಂದ ವಿಶ್ಲೇಷಣೆ ಮಾಡಿ ಸಲಹೆ ನೀಡಲು ಈ ಸೇವಾ ಸಂಸ್ಥೆಯಲ್ಲಿನ ಸೌಲಭ್ಯಗಳನ್ನು ಅನೇಕ ವಾಣಿಜ್ಯ ಬ್ಯಾಂಕುಗಳು ಉಪಯೋಗಿಸಿಕೊಳ್ಳುತ್ತಿವೆ. ಇದರಿಂದಾಗಿ ಈ ಎರಡು ಸಂಸ್ಥೆಗಳ ನಡುವೆ ಅತಿ ನಿಕಟವಾದ ಬಾಂಧವ್ಯ ಏರ್ಪಡಲು ಅನುವಾಗಿದೆ. ಇಂಥ ಸಲಹೆಗಳಿಗಾಗಿ ವಾಣಿಜ್ಯ ಬ್ಯಾಂಕು ಗಳು 1980–81ರಲ್ಲಿ ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆಗೆ 89,391 ರೂಪಾಯಿಗಳನ್ನು ಸಲಹಾ ಶುಲ್ಕವಾಗಿ (ಕನ್‌ಸಲ್ಟೆನ್ಸಿ ಫೀ) ಪಾವತಿ ಮಾಡಿದುವು. ಇಷ್ಟೇ ಅಲ್ಲದೆ ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆ ಏರ್ಪಡಿಸುವ ತರಬೇತಿ ಗಳು, ವಿಚಾರಸಂಕಿರಣಗಳು ಮುಂತಾದ ಕಾರ್ಯಕ್ರಮ ಗಳಲ್ಲಿ ವಾಣಿಜ್ಯ ಬ್ಯಾಂಕುಗಳು ಸಕ್ರಿಯವಾಗಿ ಸಹಕರಿಸಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ನೆರವು ನೀಡುತ್ತಿವೆ. ಸಣ್ಣ ಕೈಗಾರಿಕೆ ಗಳಿಗೆ ಬೇಕಾಗುವ ಬಂಡವಾಳವನ್ನು ನೀಡಲು ಅಭಿವೃದ್ಧಿ ಬ್ಯಾಂಕುಗಳ ಸ್ಥಾಪನೆ ನಮ್ಮ ದೇಶದಲ್ಲಿ ಇನ್ನೂ ಆಗಿಲ್ಲವೆಂಬ ಅಂಶವನ್ನು ಈಗಾಗಲೇ ಜ್ಞಾಪಕಕ್ಕೆ ತಂದುಕೊಂಡದ್ದಾಗಿದೆ. ಆದ್ದರಿಂದ ಈ ವಿಷಯದಲ್ಲಿ ವಾಣಿಜ್ಯ ಬ್ಯಾಂಕುಗಳ ಹೊಣೆ ಗಾರಿಕೆ ಹೆಚ್ಚಾಗಿದೆ. ಇದಕ್ಕೆ ಉದಾಹರಣೆಯಾಗಿ 1960 ರಿಂದ 1980ರ ಅಂತ್ಯದ ವರೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ನಮ್ಮ ದೇಶದಲ್ಲಿ ಸಣ್ಣ ಕೈಗಾರಿಕೆಗಳಿಗೆ ಒದಗಿ ಸಿರುವ ಬಂಡವಾಳದ ವಿವರಗಳನ್ನು ಮುಂದೆ ಕೊಡಲಾಗಿದೆ

ವರ್ಷಾಂತ್ಯ	ಮೊಬಲಗು (ಕೋಟಿ ರೂ.)
1960	4
1965	25
1969	104
1970	152
1975	320
1976	376
1977	462
1978	591
1979	733
1980	853

(ಮೂಲ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ವಾರ್ಷಿಕ ವರದಿ 1980)

ಮುಂದಿನ ವರ್ಷಗಳಲ್ಲಿ ಈ ಬಂಡವಾಳ ನೀಡಿಕೆಯ ಹೊಣೆ ಇನ್ನೂ ಹೆಚ್ಚಾಗುವ ಸಂಭವವಿದೆ. ಸಣ್ಣ ಕೈಗಾರಿಕೆ ಗಳ ಅಭಿವೃದ್ಧಿಗಾಗಿ ಬ್ಯಾಂಕುಗಳು ಬಂಡವಾಳವನ್ನು ಸಾಲದ ರೂಪದಲ್ಲಿ ನೀಡಿದರೆ ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆಯ ನೆರವಿನಿಂದ ಆ ಬಂಡವಾಳದ ಸದುಪಯೋಗವಾಗಿ ಅದರಿಂದ ಉದ್ದಿಮೆದಾರರಿಗೂ ಲಾಭ ದೊರಕಿ ಅವರು ಸಾಲವಾಗಿ ಪಡೆದ ಬಂಡವಾಳವನ್ನು ಬಡ್ಡಿ ಸಹಿತ ಬ್ಯಾಂಕುಗಳಿಗೆ ವಾಪಸು ಮಾಡಲು ನೆರವಾಗುತ್ತದೆ. ಆದ್ದರಿಂದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಬ್ಯಾಂಕುಗಳು ಮತ್ತು ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆಯ ನಡುವೆ ಅತ್ಯಂತ ನಿಕಟವಾದ ಸಹಯೋಗ ನಿರ್ವಿವಾದವಾಗಿ ಸ್ವಾಗತಾರ್ಹ.

ಡಿಸೆಂಬರ್ 1980ರ ಕೊನೆಯಲ್ಲಿ 23,255 ಸಣ್ಣ ಅಸ್ವಸ್ಥ ಘಟಕಗಳಿದ್ದುವೆಂದು ಅಧಿಕೃತ ಮೂಲಗಳಿಂದ ತಿಳಿದುಬಂದಿದೆ.


AWAITING...
SHIPMENT TO
THE MOON & THE MARS
Having captured & pénetrated deep in the sophisticated markets of more than 80 countries of the world, we are now eagerly awaiting the day when the world's first space-ship will take its maiden flight to the Moon & the Mars, for we are confident of capturing even the world's first ever space-market.
Right now, even before we could realize our dreams, we have been rated as one of India's top exporters by the Indian Government–bestowing on us a Certificate of Merit for outstanding export performance in the year 1976–77. The Certificate was presented to us by H.E. Sri N. Sanjiva Reddy, president of India, on 8th June '78.
The fact that we have won this coveted National Award for the second year in succession, taking the tally of our export awards to 14 in the last 7 years continuously, is in itself a tribute to the superior quality of our magnum opus - Sugandha Shringar and a host of others.
Sugandha Shringar
AGARBATHI
ARAVINDA PARIMALA WORKS
MYSORE-570 004, INDIA.
Murali-Apw-878

ರಾಜ್ಯ ಹಣಕಾಸು ಸಂಸ್ಥೆ ಮತ್ತು ವಾಣಿಜ್ಯ ಬ್ಯಾಂಕುಗಳ ನಡುವಿನ ಹೊಂದಾಣಿಕೆ

ಎಸ್. ಬಿ. ಮುದ್ದಪ್ಪ, ಐ.ಎ.ಎಸ್.

ದೇಶದ ಕೈಗಾರಿಕಾ ಪ್ರಗತಿಗೆ ಮೂಲಭೂತವಾದ ಆವಶ್ಯಕತೆಗಳಲ್ಲಿ ಮುಖ್ಯವಾದುದೆಂದರೆ ಹಣಕಾಸಿನ ನೆರವು. ಈ ನೆರವು ಪ್ರಮುಖವಾಗಿ ವಾಣಿಜ್ಯ ಬ್ಯಾಂಕುಗಳಿಂದ ಮತ್ತು ಪ್ರತಿ ರಾಜ್ಯದಲ್ಲಿಯೂ ಇರುವ ರಾಜ್ಯ ಹಣಕಾಸು ಸಂಸ್ಥೆಯಿಂದ (ಸ್ಟೇಟ್ ಫೈನಾನ್ಷಿಯಲ್ ಕಾರ್ಪೊರೇಷನ್) ದೊರೆಯುತ್ತದೆ. ರಾಜ್ಯ ಹಣಕಾಸು ಸಂಸ್ಥೆ ವಿಶಿಷ್ಟವಾದ ಉದ್ದೇಶದಿಂದ ಸ್ಥಾಪಿತವಾಗಿದೆ. ಇದನ್ನು ಪ್ರಾದೇಶಿಕ ಅಭಿವೃದ್ಧಿ ಬ್ಯಾಂಕ್ ಎಂದು ಕರೆಯಲಾಗುತ್ತಿದೆ. ಉದ್ಯಮಗಳಿಗೆ ಬೇಕಾದ ದೀರ್ಘಾವಧಿ ಸಾಲವನ್ನು ಬೇರೆ ಯಾವುದೇ ಸ್ಥಿರ ಆಸ್ತಿಯ ಆಧಾರದಮೇಲೆ ನೀಡದೆ, ಸಣ್ಣ ಮತ್ತು ಕಿರು ಉದ್ಯಮಗಳಿಗೆ ವಿಶೇಷ ಪ್ರೋತ್ಸಾಹ ನೀಡಿ ಇಲ್ಲಿಯ ವರೆಗೆ ಕೈಗಾರಿಕಾ ನಕ್ಷೆಯಲ್ಲಿ ಬರದ ಹಿಂದುಳಿದ ಪ್ರದೇಶಗಳನ್ನು ಕೈಗಾರಿಕಾ ರಂಗದಲ್ಲಿ ಬರುವಂತೆ ಮಾಡುವುದು ರಾಜ್ಯ ಹಣಕಾಸು ಸಂಸ್ಥೆಗಳ ಮುಖ್ಯ ಉದ್ದೇಶ. ವಾಣಿಜ್ಯ ಬ್ಯಾಂಕುಗಳೂ ಅತಿ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ಆದಾಗ್ಯೂ ಸರಕಾರಿ ನೀತಿ ಪ್ರಣಾಳಿಕೆಯ ಪ್ರಕಾರ ಬ್ಯಾಂಕುಗಳು ಆದಷ್ಟು ಮಟ್ಟಿಗೆ ಚರ ಬಂಡವಾಳಕ್ಕೆ ಬೇಕಾದ ನೆರವನ್ನು ಒದಗಿಸಬೇಕು. ಒಟ್ಟಿನಲ್ಲಿ ಮೂಲತಃ ರಾಜ್ಯ ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕುಗಳು ಕೈಗಾರಿಕೆಯ ಸಮಗ್ರ ಬೆಳವಣಿಗೆಯ ಉದ್ದೇಶವನ್ನು ಹೊಂದಿರುವುವಾದರೂ ಅವುಗಳ ಕಾರ್ಯ ಕ್ಷೇತ್ರದಲ್ಲಿ, ಅವು ಅನುಸರಿಸುವ ವಿಧಾನಗಳಲ್ಲಿ, ನಿಯಮಾವಳಿಗಳಲ್ಲಿ ವ್ಯತ್ಯಾಸ ಸ್ಪಷ್ಟವಾಗಿದೆ.

ಸಮಗ್ರ ಕೈಗಾರಿಕಾ ಪ್ರಗತಿಗೆ ಸಮರ್ಪಕವಾದ ರೀತಿಯಲ್ಲಿ ಹಣಕಾಸಿನ ನೆರವು ಸಿಗಬೇಕಾದರೆ, ಅಂತಹ ನೆರವು ನೀಡುವ ಸಂಸ್ಥೆಗಳಲ್ಲಿ ಹೊಂದಾಣಿಕೆ ಮತ್ತು ಪರಸ್ಪರ ಒಡಂಬಡಿಕೆ ಅತ್ಯಗತ್ಯ. ಈ ಸಂಸ್ಥೆಗಳು ತಮ್ಮ ಸಹಾಯ ನೀತಿಯನ್ನು ಮತ್ತು ಸಾಂಸ್ಥಿಕ ಗುರಿಗಳನ್ನು ಕೇವಲ ತಮ್ಮದೇ ಆದ ಸೀಮಿತ ದೃಷ್ಟಿಕೋನದಿಂದ ನಿರ್ಧರಿಸದೆ, ಒಂದು ಪ್ರದೇಶದ ಸರ್ವತೋಮುಖ ಆವಶ್ಯಕತೆಗಳ ಹಿನ್ನೆಲೆಯಲ್ಲಿ ಒಟ್ಟುಗೂಡಿ ರೂಪಿಸಬೇಕು. ಈ ವಿಷಯವನ್ನು ಅಭ್ಯಸಿಸಲು ಭಾರತೀಯ ಔದ್ಯಮಿಗಳ ಬ್ಯಾಂಕ್ (ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯ) ನೇಮಿಸಿದ ಭಿಡೆ ಸಮಿತಿ 1976 ರಲ್ಲಿ ತನ್ನ ವರದಿಯನ್ನು ಒಪ್ಪಿಸಿತು. ಈ ವರದಿ ನೀಡಿದ ಸಲಹೆಗಳು ಬ್ಯಾಂಕುಗಳು ಮತ್ತು ರಾಜ್ಯ ಹಣಕಾಸು ಸಂಸ್ಥೆಗಳ ನಡುವಿನ ಸಂಬಂಧದಲ್ಲಿ ಮಹತ್ವದ ಮಾರ್ಪಾಟುಗಳನ್ನು ಮಾಡಿ ಕೈಗಾರಿಕೆಯ ಬೆಳವಣಿಗೆಯ ಮೇಲೆ ಮಹತ್ವದ ಪರಿಣಾಮವನ್ನು ಬೀರಬಲ್ಲದು. ಈ ವರದಿಯ ಶಿಫಾರಸಿನಂತೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ 1978ನೆಯ ಇಸವಿಯಲ್ಲೇ ಎಲ್ಲ ಪ್ರಮುಖ ಬ್ಯಾಂಕುಗಳೊಡನೆ ವಿಚಾರ ವಿನಿಮಯ ನಡೆಸಿ ಈ ವರದಿಯನ್ನು ಕಾರ್ಯಗತಗೊಳಿಸುವ ನಿರ್ಣಯವನ್ನು ಸ್ವೀಕರಿಸಿ ಆ ಪ್ರಕಾರ ಕಾರ್ಯಕ್ರಮವನ್ನು ಈಗಾಗಲೇ ಜಾರಿಗೊಳಿಸಿದೆ.

ಈ ವರದಿಯ ಪ್ರಕಾರ ರಾಜ್ಯ ಹಣಕಾಸು ಸಂಸ್ಥೆ ಮತ್ತು ಬ್ಯಾಂಕುಗಳ ನಡುವೆ ಹೊಂದಾಣಿಕೆ ಉದ್ಯಮಾಕಾಂಕ್ಷಿ ಹಣಕಾಸಿನ ನೆರವಿಗಾಗಿ ಪ್ರಪ್ರಥಮವಾಗಿ ಬರುವ ಘಟ್ಟದಿಂದ ಪ್ರಾರಂಭವಾಗಿ ಉದ್ಯಮ ಸ್ಥಾಪನೆ ಮತ್ತು ಬೆಳವಣಿಗೆಯ ಘಟ್ಟಗಳ ವರೆಗೂ ವ್ಯಾಪಿಸಿದೆ. ಉದ್ಯಮಿಗೆ ಸರಿಯಾದ ಹೊತ್ತಿನಲ್ಲಿ ಸಾಕಷ್ಟು ಹಣ ಸಮರ್ಪಕ ರೀತಿಯಲ್ಲಿ ಸಂದು, ಕೈಗಾರಿಕೆ ಸರಿಯಾದ ಹೊತ್ತಿಗೆ ಸ್ಥಾಪಿತವಾಗಿ, ಅಭಿವೃದ್ಧಿ ಹೊಂದಿ, ನೀಡಿದ ಸಾಲ ಸಕಾಲಕ್ಕೆ ಮರುಪಾವತಿಯಾಗುವಂತೆ ಮಾಡುವ ವಾತಾವರಣವನ್ನು ಕಲ್ಪಿಸುವುದೇ ಈ ಹೊಂದಾಣಿಕೆಯ ಗುರಿ. ಈ ಹೊಂದಾಣಿಕೆ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ನಾನೀಗ ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

ಹೊಂದಾಣಿಕೆಯ ರೀತಿ

ಮೊದಲನೆಯದಾಗಿ, ಆದಷ್ಟು ಮಟ್ಟಿಗೆ ಸ್ಥಿರ ಬಂಡವಾಳಕ್ಕಾಗಿ ರಾಜ್ಯ ಹಣಕಾಸು ಸಂಸ್ಥೆ ನೆರವನ್ನು ನೀಡಬೇಕು. ರಾಜ್ಯ ಹಣಕಾಸು ಸಂಸ್ಥೆಗಳು ಉದ್ಯಮಸ್ಥಾಪನೆಗೆ ಬೇಕಾಗುವ ಭೂಮಿ, ಕಟ್ಟಡ ಮತ್ತು ಯಂತ್ರಗಳನ್ನು ಕೊಳ್ಳಲು, ವಿದೇಶಗಳಿಂದ ತಂತ್ರಜ್ಞಾನ ಮತ್ತು ಆಧುನಿಕ ಯಂತ್ರಗಳ ಆಮದಿಗೆ ಧೀರ್ಘಾವಧಿ ಸಾಲ ಒದಗಿಸುತ್ತವೆ.

ಮರುಪಾವತಿ ವಿರಾಮ ಮತ್ತು ಮರುಪಾವತಿಯ ಅವಧಿ ಹೆಚ್ಚಾಗಿದ್ದು, ಬಡ್ಡಿ ದರ ಬ್ಯಾಂಕುಗಳಿಗೆ ಹೋಲಿಸಿದಾಗ ಕಡಿಮೆಯಾಗಿರುವುದು ಈ ಸಂಸ್ಥೆಗಳ ಸಾಲದ ವೈಶಿಷ್ಟ್ಯ. ವಿದೇಶಿ ವಿನಿಮಯ ರೂಪದಲ್ಲಿ ಕೈಗಾರಿಕೆಗಳಿಗೆ ಸಾಲ ಒದಗಿಸಲು ಮಾನ್ಯತೆ ಪಡೆದಿರುವವು ರಾಜ್ಯ ಹಣಕಾಸು ಸಂಸ್ಥೆಗಳು ಮಾತ್ರ.

ಹಣಕಾಸು ಸಂಸ್ಥೆ ನೀಡುವ ವಿಶೇಷ ಸವಲತ್ತುಗಳ ಮೂಲಕ ಉದ್ಯಮಿಗೆ ಹೆಚ್ಚಿನ ಅನುಕೂಲವಾಗುವುದರಿಂದ ಬ್ಯಾಂಕುಗಳು ತಮ್ಮ ಬಳಿ ಸ್ಥಿರ ಬಂಡವಾಳಕ್ಕಾಗಿ ಬರುವ ಉದ್ಯಮಾಕಾಂಕ್ಷಿಗಳನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಕಳುಹಿಸಬೇಕು. ಉದ್ಯಮಕ್ಕೆ ಬೇಕಾದ ಚಾಲ್ತಿ ಬಂಡವಾಳಕ್ಕಾಗಿ ಬ್ಯಾಂಕುಗಳು ನೆರವು ನೀಡಬೇಕು. ಈ ರೀತಿ ಧೀರ್ಘಕಾಲಿಕ ಸಹಾಯದಲ್ಲಿ ನೈಪುಣ್ಯ ಪಡೆದ ಹಣಕಾಸು ಸಂಸ್ಥೆಗಳು, ಚರ ಬಂಡವಾಳ ಸಹಾಯದಲ್ಲಿ ಅನುಭವ ಹೊಂದಿದ ಬ್ಯಾಂಕುಗಳು ಒಟ್ಟಿಗೆ ಒಂದು ಉದ್ಯಮಕ್ಕೆ ಹೆಚ್ಚಿನ ಸಹಾಯ ಸಲ್ಲಿಸಬಲ್ಲವು.

ಒಬ್ಬ ಉದ್ಯಮಿ ಹಣಸಹಾಯಕ್ಕಾಗಿ ಬಂದಾಗ ಸಲ್ಲಿಸ ಬೇಕಾದ ಅರ್ಜಿಯ ನಮೂನೆಯಲ್ಲಿಯೂ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಲ್ಲಿ ವ್ಯತ್ಯಾಸವಿದ್ದುವು. ಈಗ ಹೊಂದಾಣಿಕೆಯ ಪ್ರಕಾರ ಸುಮಾರು 2 ಲಕ್ಷ ರೂ.ಗಳ ವರೆಗೆ ಈ ನಮೂನೆಗಳಲ್ಲಿ ಏಕರೂಪತೆಯನ್ನು ತರಲಾಗಿದೆ. ಇದರಿಂದ ಬೇರೆ ಬೇರೆ ತರಹದ ಅರ್ಜಿಗಳನ್ನು ಭರ್ತಿ ಮಾಡುವ ಪ್ರಮೇಯ ತಪ್ಪಿದೆ.

ಅರ್ಜಿಯ ಮೌಲ್ಯ ಪರಿಶೀಲನೆ ಮಾಡುವಾಗ ಕೂಡ ಆದಷ್ಟು ಮಟ್ಟಿಗೆ ಈಗ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆ ಒಟ್ಟಿಗೆ ಕೆಲಸ ಮಾಡುತ್ತಿವೆ. ಜಂಟಿ ಮೌಲ್ಯ ಪರಿಶೀಲನೆ ಆದಷ್ಟು ಮಟ್ಟಿಗೆ ಕಾರ್ಯಗತವಾಗುತ್ತಿದೆ. ಹಣಕಾಸು ಸಂಸ್ಥೆ ಉದ್ಯಮಿ ತರಬೇಕಾದ ಸ್ವಂತ ಬಂಡವಾಳವನ್ನು ನಿರ್ಧರಿಸುವಾಗ ಬ್ಯಾಂಕುಗಳೊಡನೆ ಮಾತುಕತೆ ನಡೆಸಿ ಚರ ಬಂಡವಾಳದ ಅವಶ್ಯಕತೆಯನ್ನೂ ತಿಳಿದುಕೊಳ್ಳುತ್ತದೆ. ಅದೇ ರೀತಿ ಬ್ಯಾಂಕುಗಳು ಸ್ಥಿರ ಬಂಡವಾಳದ ಮಾಹಿತಿಯನ್ನು ರಾಜ್ಯ ಹಣಕಾಸು ಸಂಸ್ಥೆಯಿಂದ ಪಡೆದು ತಮ್ಮ ಸಹಾಯದ ಮೊತ್ತವನ್ನು ನಿಷ್ಕರ್ಷಿಸುತ್ತವೆ. ಈ ಒಂದು ಕಾರ್ಯಕ್ರಮದ ಮುಖ್ಯ ಪ್ರಯೋಜನವೆಂದರೆ, ಬ್ಯಾಂಕುಗಳ ಮತ್ತು ರಾಜ್ಯ ಹಣಕಾಸು ಸಂಸ್ಥೆಗಳ ಪರಿಣತಿ ಮತ್ತು ಅನುಭವಗಳ ಕ್ರೋಡೀಕರಣ.

ಸಾಲ ಮುಂಜೂರಾದ ಮೇಲೆ ವಿತರಣೆಯಾಗುವಾಗ ಒಂದೊಮ್ಮೆ ಕಾರಣಾಂತರಗಳಿಂದ ಯೋಜನೆಯ ವೆಚ್ಚ ಏರಿದಲ್ಲಿ ಪುನಃ ಬ್ಯಾಂಕುಗಳ ಮತ್ತು ರಾಜ್ಯ ಹಣಕಾಸು ಸಂಸ್ಥೆಗಳ ಅಧಿಕಾರಿಗಳು ಕೂಡಿ ವಿಮರ್ಶಿಸಿ, ಹೆಚ್ಚಿನ ನೆರವು ನೀಡುವ ಬಗ್ಗೆ ನಿರ್ಣಯಿಸುತ್ತಾರೆ.

ಇದೇ ರೀತಿ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ತಮ್ಮ ಸಹಾಯಕ್ಕೆ ಬಂದ ಗ್ರಾಹಕ ಕೈಗಾರಿಕೆಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳುವುವು. ಇದರಿಂದ ಒಬ್ಬ ಉದ್ಯಮಾಕಾಂಕ್ಷಿಯ ಹಿನ್ನೆಲೆ ಮತ್ತು ವ್ಯಕ್ತಿತ್ವದ ಬಗ್ಗೆ ಹೆಚ್ಚಿನ ಮಾಹಿತಿ ಸಿಗಬಲ್ಲುದು. ಇದೇ ಪ್ರಕಾರ, ಕೈಗಾರಿಕೆಯ ಭಾಗವಾದ ಸ್ಥಿರ ಆಸ್ತಿಗಳನ್ನು ಆಧಾರಕ್ಕೆ ತೆಗೆದುಕೊಳ್ಳುವಾಗ ಉದ್ಭವಿಸುವ ಕಾನೂನಿನ ಅಂಶಗಳನ್ನೂ ಆದಷ್ಟು ಮಟ್ಟಿಗೆ ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕುಗಳು ಒಟ್ಟಾಗಿ ನಿರ್ಧರಿಸುತ್ತವೆ. ಉದ್ಯಮಿಗೆ ಸಾಲ ವಿತರಣೆ ಮಾಡುವಾಗ ಹಣಕಾಸು ಸಂಸ್ಥೆ ಆದಷ್ಟು ಮಟ್ಟಿಗೆ ಸಂಬಂಧಿಸಿದ, ಅಂದರೆ ಚಾಲ್ತಿ ಬಂಡವಾಳ ನೀಡುವ, ಬ್ಯಾಂಕಿನ ಮೂಲಕವೇ ವ್ಯವಸ್ಥೆ ಮಾಡುತ್ತದೆ.

ಸಹಯೋಗ

ಒಂದು ಕೈಗಾರಿಕೆ ಕಾರಣಾಂತರಗಳಿಂದ ತೊಂದರೆಗೀಡಾಗಿ ಹಣ ಮರುಪಾವತಿ ಮಾಡುವ ಸಾಮರ್ಥ್ಯ ಇಲ್ಲದ ಸಂದರ್ಭದಲ್ಲಿ ರಾಜ್ಯ ಹಣಕಾಸು ಸಂಸ್ಥೆ ಮತ್ತು ಬ್ಯಾಂಕುಗಳ ಅಧಿಕಾರಿಗಳು ಒಟ್ಟಿಗೆ ಸಮಸ್ಯೆಯನ್ನು ಅಭ್ಯಸಿಸುತ್ತಾರೆ. ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುವಾಗ ಆದಷ್ಟು ಮಟ್ಟಿಗೆ ಜಂಟಿ ನಿರ್ಣಯವನ್ನು ಸ್ವೀಕರಿಸಲಾಗುತ್ತದೆ. ಉದಾಹರಣೆಗಾಗಿ ಬ್ಯಾಂಕುಗಳು ಹಣಕಾಸು ಸಂಸ್ಥೆಯೊಡನ ವಿಚಾರವಿನಿಮಯ ಮಾಡದೆ ಚಾಲ್ತಿ ಬಂಡವಾಳಕ್ಕೆ ನೀಡುವ ಸಾಲವನ್ನು ಹಠಾತ್ತನೆ ನಿಲ್ಲಿಸುವುದಿಲ್ಲ. ಅದೇ ರೀತಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹೊಸದಾಗಿ ಒಂದು ಯಂತ್ರಭಾಗಕ್ಕೆ ಸಹಾಯವನ್ನು ನೀಡುವಾಗ ಬ್ಯಾಂಕುಗಳೊಡನೆ ಪರಾಮರ್ಶೆ ನಡೆಸುತ್ತದೆ. ಇಷ್ಟೆಲ್ಲ ಪ್ರಯತ್ನ ಮಾಡಿಯೂ ಒಂದು ಕೈಗಾರಿಕೆ ತಿರುಗಿ ಹಣ ಕೊಡದೆ ಇದ್ದರೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವಾಗ ಜೊತೆಯಾಗಿ ವ್ಯಹರಿಸುತ್ತವೆ.

ಅಸ್ವಸ್ಥ ಉದ್ದಿಮೆಯ ಪುನರುಜ್ಜೀವನದ ಪ್ರಯತ್ನವೂ ಜಂಟಿಯಾಗಿಯೇ ಸಾಗುತ್ತದೆ. ಯಾವ ಯಾವ ಅನುಕೂಲಗಳನ್ನು ಒದಗಿಸಲು ಎಷ್ಟೆಷ್ಟು ಮಟ್ಟಿಗೆ ಹಣದ ನೆರವು ನೀಡಬೇಕೆಂಬ ನಿರ್ಣಯವನ್ನು ಜಂಟಿ ಅಧ್ಯಯನ ಮಾಡಿ ತೆಗೆದುಕೊಳ್ಳಲಾಗುತ್ತದೆ. ಒಂದೊಮ್ಮೆ ಬೇರೆಬೇರೆ ಸಂಸ್ಥೆಗಳಿಂದ ಅನುಕೂಲ ಒದಗಬೇಕಾಗಿದ್ದಲ್ಲಿ ಇಂತಹ ಅನುಕೂಲ ಒದಗಿಸಲು ಒಟ್ಟಿಗೆ ಪ್ರಯತ್ನ ಮಾಡಲಾಗುತ್ತದೆ.

ಕೆ.ಎಸ್.ಎಫ್.ಸಿ. ಸರಿಯಾಗಿ ಹಣ ಮರುಪಾವತಿ ಮಾಡದ ಉದ್ಯಮಗಳ ಬಗ್ಗೆ ನಿರ್ಣಯ ಸ್ವೀಕರಿಸಲು ಒಂದು ಸಮಿತಿಯನ್ನು ನೇಮಿಸಿದೆ. ಈ ಸಮಿತಿಗೆ ಸುಸ್ತಿ ವಿಮರ್ಶನಾ ಸಮಿತಿ (ಡಿಫಾಲ್ಟ್ ರಿವ್ಯೂ ಕಮಿಟಿ) ಎಂದು ಹೆಸರಿಡಲಾಗಿದೆ. ಈ ಸಮಿತಿ ಸಂಬಂಧಿಸಿದ ಉದ್ಯಮಿಗಳನ್ನು ಸಂದರ್ಶಿಸಿ ಅವರ ಕಷ್ಟ ನಷ್ಟಗಳನ್ನು ತಿಳಿದುಕೊಂಡು,

ತೆಗೆದುಕೊಳ್ಳಬೇಕಾದ ಕ್ರಮವನ್ನು ಶಿಫಾರಸು ಮಾಡುತ್ತದೆ. ಈ ಸಮಿತಿ ಹೀಗೆ ಸಂದರ್ಶಿಸುವಾಗ ಸಂಬಂಧಿಸಿದ ಬ್ಯಾಂಕಿನ ಪ್ರತಿನಿಧಿಯೂ ಇರುತ್ತಾರೆ. ಈ ಕ್ರಮ ಈಗಾಗಲೇ ಸಾಕಷ್ಟು ಯಶಸ್ವಿಯಾಗಿದೆ.

ಇವೆಲ್ಲಕ್ಕಿಂತ ವಿಶೇಷವಾಗಿ ಬ್ಯಾಂಕುಗಳೂ ಹಣಕಾಸು ಸಂಸ್ಥೆಯೂ ಯಾವ ತರಹದ ಉದ್ಯಮಗಳಿಗೆ ಸಹಾಯ ನೀಡಬೇಕು ಮತ್ತು ನೀಡಬಾರದು ಎಂಬ ಧೋರಣೆಯನ್ನು ರೂಪಿಸುವಾಗ ಅನುಭವ, ಪರಿಣತಿಗಳ ವಿನಿಮಯವನ್ನು ಮಾಡಿಕೊಳ್ಳುತ್ತವೆ. ಉದಾಹರಣೆಗಾಗಿ, ಕತ್ತದ ಉದ್ಯಮಕ್ಕೆ ನೆರವು ನೀಡುವ ಬಗ್ಗೆ ರಾಜ್ಯ ಹಣಕಾಸು ಸಂಸ್ಥೆ ನಿರ್ಣಯ ಸ್ವೀಕರಿಸುಸಾಗ ಸಾಕಷ್ಟು ಮಟ್ಟಿಗೆ ಈ ಉದ್ಯಮಕ್ಕೆ ಈಗಾಗಲೇ ನೆರವು ನೀಡಿರುವ ಬ್ಯಾಂಕುಗಳೊಡನೆ ವ್ಯವಹರಿಸಿ ಅವುಗಳ ಅನುಭವದ ಲಾಭ ಪಡೆದು ತನ್ನ ಅನುಭವದ ಲಾಭದೊಡನೆ ಮೇಳೈಸಿ ವಿಸ್ತೃತವಾದ ಮಾಹಿತಿಯ ಮೇಲೆ ನಿರ್ಣಯ ಕೈಗೊಳ್ಳುತ್ತದೆ.

ಒಟ್ಟಿನಲ್ಲಿ ಒಬ್ಬ ಉದ್ಯಮಾಕಾಂಕ್ಷಿ ಹಣದ ನೆರವಿಗಾಗಿ ಮೊದಲನೆಯ ಸಲ ಬಂದಾಗಿನಿಂದ, ಕೈಗಾರಿಕೆಯ ಬೆಳೆವಣಿಗೆ ಮತ್ತು ಮರುಪಾವತಿಯ ಮಟ್ಟದ ವರೆಗೂ ಹಣಕಾಸು ಸಂಸ್ಥೆ ಮತ್ತು ಬ್ಯಾಂಕುಗಳು ಒಟ್ಟಾಗಿ ಕೆಲಸ ಮಾಡುತ್ತವೆ. ಕೆಲವೊಮ್ಮೆ ಸಮಯಾಭಾವ ಮತ್ತು ಸಾಂಸ್ಥಿಕ ಅನನುಕೂಲಗಳಿಂದ ಎಷ್ಟರ ಮಟ್ಟಿಗೆ ಈ ಹೊಂದಾಣಿಕೆ ಆಗಬೇಕಿತ್ತೋ ಅಷ್ಟರ ಮಟ್ಟಿಗೆ ಆಗದಿರಬಹುದು. ಈ ಹೊಂದಾಣಿಕೆ ಯೋಜನೆ ಸ್ಪಷ್ಟವಾಗಿ ರೂಪಗೊಂಡಿದ್ದು ಇತ್ತೀಚಿನ ಎರಡು ವರ್ಷಗಳಲ್ಲಿ ಎಂಬುದು ಗಮನಿಸಬೇಕಾದ ಅಂಶ. ಹೀಗಿರುವಾಗ ಕೆಲ ಮಟ್ಟಿಗೆ ಪ್ರಾರಂಭಿಕ ಅಡೆತಡೆಗಳು ಉದ್ಭವಿಸುವುದು ಸ್ವಾಭಾವಿಕ. ಆದಾಗ್ಯೂ ದಿನದಿನಕ್ಕೆ ಹೆಚ್ಚು ಮಟ್ಟಿಗೆ ಪರಿಣಾಮ ನೀಡುತ್ತಿದೆ. ಈ ವಿಷಯವನ್ನು ಅರಿತು ಉದ್ಯಮಾಕಾಂಕ್ಷಿಗಳು ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳೊಡನೆ ವ್ಯವಹರಿಸಿದರೆ ಅವರಿಗೂ ಲಾಭ; ಮತ್ತು ಸಂಸ್ಥೆಗಳಿಗೂ ಕಾರ್ಯನಿರ್ವಹಣೆ ಸುಲಭ. ಈ ಯೋಜನೆ ಭವಿಷ್ಯದಲ್ಲಿ ಇನ್ನೂ ಹೆಚ್ಚಾಗಿ ಕಾರ್ಯಗತವಾಗಿ ಯಶಸ್ವಿಯಾದಾಗ ರಾಜ್ಯದ ಸಮಗ್ರ ಕೈಗಾರಿಕಾ ಬೆಳವಣಿಗೆಗೆ ಅನುಕೂಲಕರವಾದ ಪರಿಸರ ಬೆಳೆಯುಬಲ್ಲುದು.

ನಬಾರ್ಡ್

ಕೃಷಿ, ಸಣ್ಣ ಕೈಗಾರಿಕೆಗಳು, ಕುಟೀರ ಮತ್ತು ಗ್ರಾಮ ಕೈಗಾರಿಕೆಗಳು ಕರಕುಶಲತೆ ಇತ್ಯಾದಿ ಗ್ರಾಮಕ್ಕೆ ಸಂಬಂಧಿಸಿದ ಆರ್ಥಿಕ ವಿಷಯಗಳ ಬಗ್ಗೆ ನೀತಿ, ಯೋಜನೆ ಮತ್ತು ಕಾರ್ಯಕಲಾಪಗಳನ್ನು ರೂಪಿಸಲು ಪ್ರಾರಂಭವಾಗುತ್ತಿರುವ ಶೃಂಗಸಂಸ್ಥೆಯೇ ರಾಷ್ಟ್ರೀಯ ಕೃಷಿ ಮತ್ತು ಗ್ರಾಮಾಭಿವೃದ್ಧಿ ಬ್ಯಾಂಕ್ (NABARD). ಇದರ ಪ್ರಾರಂಭಿಕ ಬಂಡವಾಳ ರೂ. ೧೦೦ ಕೋಟಿಗಳಷ್ಟಿದ್ದು ರೂ. ೫೦೦ ಕೋಟಿಗಳಿಗೆ ಹೆಚ್ಚಿಸುವ ಅಧಿಕಾರವನ್ನು ಕೇಂದ್ರ ಸರ್ಕಾರ ಪಡೆದಿರುತ್ತದೆ.

ಕೃಷಿ ಮರುಹಣಕಾಸು ಮತ್ತು ಅಭಿವೃದ್ಧಿ ನಿಗಮ ಇದರಲ್ಲಿ ಪೂರ್ಣವಾಗಿ ವಿಲೀನವಾಗಲಿದೆ. ಮರುಹಣಕಾಸು ಸಂಸ್ಥೆಯಾಗಿಯೂ ಕಾರ್ಯ ನಿರ್ವಹಿಸುವ ಈ ಸಂಸ್ಥೆ ರಿಸರ್ವ್ ಬ್ಯಾಂಕಿನೊಂದಿಗೆ ಸಂಬಂಧವಿಟ್ಟುಕೊಂಡಿರುತ್ತದೆ.

ಇದಕ್ಕೆ ಸಂಬಂಧಿಸಿದ ವಿಧೇಯಕ ಈಗ ಲೋಕಸಭೆಯ ಮುಂದೆ ಇದೆ.

ಸಣ್ಣ ಕೈಗಾರಿಕೆಯ ದುಡಿಯುವ ಬಂಡವಾಳ

ಬಿ. ಎಸ್. ಚಂದ್ರಶೇಖರ

ದುಡಿಯುವ ಬಂಡವಾಳ ಯಾವುದು ? ಅದು ಎಷ್ಟಿರಬೇಕು ? ಆದರ ಕೊರತೆಯಾಗದಂತೆ ಅನುಸರಿಸಬೇಕಾದ ಕ್ರಮಗಳೇನು ?

ಯಾವುದೇ ಕೈಗಾರಿಕೆಯಾಗಲಿ, ಕಟ್ಟಡ ನಿರ್ಮಿಸಲು, ಯಂತ್ರಸ್ಥಾವರಗಳನ್ನು ಕೊಳ್ಳಲು ಹಣ ತೊಡಗಿಸ ಬೇಕಾಗುತ್ತದೆ. ಆದರೆ ಇವನ್ನು ಹೊಂದಿದ್ದ ಮಾತ್ರಕ್ಕೆ ಉತ್ಪಾದನೆಯ ಕಾರ್ಯ ಸಾಧ್ಯವಾಗುವುದಿಲ್ಲ. ಕೈಗಾರಿಕಾ ಘಟಕಕ್ಕೆ ದೈನಂದಿನ ಉತ್ಪಾದನ ಚಟುವಟಿಕೆಗಾಗಿ ಹಣದ ಆವಶ್ಯಕತೆ ಇರುತ್ತದೆ.

ಕಚ್ಚಾ ಸಾಮಗ್ರಿ ಕೊಳ್ಳುವುದರ ಮೂಲಕ ಕೈಗಾರಿಕಾ ಘಟಕ ತನ್ನ ಉತ್ಪಾದನ ಚಟುವಟಿಕೆಯನ್ನು ಆರಂಭಿಸುತ್ತದೆ. ಕಚ್ಚಾ ಸಾಮಗ್ರಿಯನ್ನು ಕೊಳ್ಳಲು ತಗಲುವ ಖರ್ಚು, ಅದನ್ನು ವಿವಿಧ ರೀತಿಗಳಲ್ಲಿ ಸಂಸ್ಕರಿಸಲು ತಗಲುವ ಖರ್ಚು ಮುಂತಾದವನ್ನು ಘಟಕ ತನ್ನ ಉತ್ಪನ್ನವನ್ನು ಮಾರಿ ಪ್ರಾಪ್ತವಾದ ಹಣದಿಂದ ತುಂಬಿಕೊಳ್ಳಬೇಕಾಗುತ್ತದೆ. ಈ ಅವಧಿಯಲ್ಲಿ ಘಟಕದ ದೈನಂದಿನ ಉತ್ಪಾದನ ಚಟುವಟಿಕೆ ಗಳಿಗೆ ಬೇಕಾಗುವ ಹಣವನ್ನು ದುಡಿಯುವ ಬಂಡವಾಳ (ವರ್ಕಿಂಗ್ ಕ್ಯಾಪಿಟಲ್) ಎನುತ್ತೇವೆ.

ಕಚ್ಚಾ ಸಾಮಗ್ರಿಯನ್ನು ಕೊಳ್ಳುವುದರಿಂದ ಹಿಡಿದು ಸಿದ್ಧ ಸರಕನ್ನು ಮಾರಿ ಹಣ ಪ್ರಾಪ್ತಿಯಾಗುವ ವರೆಗಿನ ಅವಧಿ ತಾತ್ಕಾಲಿಕ, ಆದರೆ ದುಡಿಯುವ ಬಂಡವಾಳದ ಆವಶ್ಯಕತೆ ತಾತ್ಕಾಲಿಕವಲ್ಲ. ಘಟಕ ನಿರಂತರವಾಗಿ ಉತ್ಪಾದಿ ಸುತ್ತಲೇ ಇರಬೇಕಾದುದರಿಂದ ದುಡಿಯುವ ಬಂಡವಾಳ ಒಂದು ಶಾಶ್ವತ ಆವಶ್ಯಕತೆಯಾಗುತ್ತದೆ. ಉತ್ಪಾದನೆಯ ಮಟ್ಟ ಹೆಚ್ಚಿದಂತೆ ದುಡಿಯುವ ಬಂಡವಾಳದ ಗಾತ್ರವೂ ಹೆಚ್ಚುವುದು ಎಂಬುದು ಸ್ವಯಂವೇದ್ಯ.

ಇಲ್ಲಿ ಎರಡು ಅಂಶಗಳನ್ನು ಗಮನಿಸಬಹುದು: 1 ಕನಿಷ್ಠ ಉತ್ಪಾದನ ಮಟ್ಟದಲ್ಲಿ ಉತ್ಪನ್ನಗಳಿಗಿರುವ ಬೇಡಿಕೆಯನ್ನು ಪೂರೈಸಲು ಬೇಕಾಗುವ ದುಡಿಯುವ ಬಂಡವಾಳ ಶಾಶ್ವತ ಸ್ವರೂಪದ್ದು. ಇದನ್ನು 'ಶಾಶ್ವತ ದುಡಿಯುವ ಬಂಡವಾಳ' ಎನ್ನಬಹುದು. 2 ಬೇಡಿಕೆ ಹೆಚ್ಚಾಗಿ ಅದನ್ನು ಪೂರೈಸಲು ಘಟಕ ತನ್ನ ಉತ್ಪಾದನೆಯ ಮಟ್ಟವನ್ನು ಹೆಚ್ಚಿಸಿದಾಗ ಬೇಕಾಗುವ ಹೆಚ್ಚಿನ ದುಡಿಯುವ ಬಂಡವಾಳ ತಾತ್ಕಾಲಿಕ ಸ್ವರೂಪದ್ದು. ಬೇಡಿಕೆ ಇಳಿದಂತೆ ಉತ್ಪಾದನೆಯೂ ಇಳಿ ಮುಖವಾದಾಗ ಇದರ ಅಗತ್ಯವಿರುವುದಿಲ್ಲ.

ದುಡಿಯುವ ಬಂಡವಾಳಕ್ಕೆ ಸಂಬಂಧಿಸಿದ ವಿವಿಧ ಅಂಶ ಗಳನ್ನು ಹೀಗೆ ವಿವರಿಸಬಹುದು:

1 **ಕಚ್ಚಾ ಸಾಮಗ್ರಿಯ ದಾಸ್ತಾನು:** ಕಚ್ಚಾ ಸಾಮಗ್ರಿ ಯ ದಾಸ್ತಾನು ಮಾಡುವ ಉದ್ದೇಶವೆಂದರೆ, ಉತ್ಪಾದನೆ ಯನ್ನು ತಡೆಯಿಲ್ಲದೆ ಮುಂದುವರಿಸಿಕೊಂಡು ಹೋಗು ವುದು. ಕಚ್ಚಾ ಸಾಮಗ್ರಿ ಮುಗಿಯಿತೆಂದರೆ ಉತ್ಪಾದನ ಚಟುವಟಿಕೆ ಸ್ಥಗಿತವಾಗುವುದು. ಆದ್ದರಿಂದ ಆವಶ್ಯಕವೆನಿಸು ವಷ್ಟು ಕಚ್ಚಾ ಸಾಮಗ್ರಿಯನ್ನು ದಾಸ್ತಾನು ಮಾಡುವುದು ಯಾವುದೇ ಘಟಕಕ್ಕೆ ಅನಿವಾರ್ಯ. ಮಾರುಕಟ್ಟೆಯಲ್ಲಿ ಕಚ್ಚಾ ಸಾಮಗ್ರಿ ಸುಲಭವಾಗಿ ದೊರೆಯುವಂತಿದ್ದರೆ ಅದನ್ನು ಆಗಾಗ್ಗೆ ಕೊಳ್ಳಬಹುದು. ಇಲ್ಲದಿದ್ದಲ್ಲಿ ಅದನ್ನು ಮೊದಲೇ ಕೊಂಡು ಬಹು ಕಾಲ ದಾಸ್ತಾನು ಮಾಡಬೇಕಾಗುತ್ತದೆ. ಹೆಚ್ಚು ಪ್ರಮಾಣದಲ್ಲಿ ಕಚ್ಚಾ ಸರಕು ದಾಸ್ತಾನು ಮಾಡು ವುದರಿಂದ ಸರಕಿನಲ್ಲಿ ತೊಡಗಿಸುವ ಹಣ ಹೆಚ್ಚಾಗಿ, ಇತರ ಖರ್ಚುಗಳಿಗೆ ಹಣ ಒದಗದಿರಬಹುದು. ಆದ್ದರಿಂದ ದಾಸ್ತಾ ನಿನ ಪ್ರಮಾಣ ಅನಾವಶ್ಯಕವಾಗಿ ಏರದಂತೆ ನೋಡಿ ಕೊಳ್ಳಬೇಕು.

2 **ಪ್ರಕ್ರಿಯೆಯಲ್ಲಿರುವ ಸರಕು (ಗುಡ್ಸ್ ಇನ್ ಪ್ರೋಸೆಸ್):** ಅಂತಿಮ ಉತ್ಪನ್ನದ ರೂಪಕ್ಕೆ ಬರಲು ಕಚ್ಚಾ ಸಾಮಗ್ರಿ ವಿವಿಧ ರೀತಿಯ ಪ್ರಕ್ರಿಯೆಗಳಿಗೆ ಒಳಪಡುತ್ತದೆ. ಸಾಧಾರಣವಾಗಿ ಉತ್ಪಾದನೆ ವಿವಿಧ ಹಂತಗಳಲ್ಲಿ ನಡೆಯು ವುದಿದ್ದು, ಎಲ್ಲ ಹಂತಗಳಲ್ಲೂ ವಿವಿಧ ರೂಪಗಳಲ್ಲಿ ಸರಕು ದಾಸ್ತಾನಾಗುತ್ತದೆ. ಹೀಗೆ ದಾಸ್ತಾನಾದ ಸರಕಿನ ಬೆಲೆಯಲ್ಲಿ

ಕಚ್ಚಾ ಸಾಮಗ್ರಿಯ ಬೆಲೆಗೆ ಆ ಸಾಮಗ್ರಿಯನ್ನು ಆಯಾ ಹಂತಕ್ಕೆ ಪರಿವರ್ತಿಸಲು ಅಗತ್ಯವಾದ ಇತರ ಎಲ್ಲ ಖರ್ಚುಗಳೂ ಸೇರಿಕೊಂಡಿರುತ್ತವೆ. ಆ ಖರ್ಚುಗಳಲ್ಲಿ ಮುಖ್ಯವಾದವೆಂದರೆ ಕೆಲಸಕ್ಕೆ ಕೊಟ್ಟ ಕೂಲಿ ಮತ್ತು ಇಂಧನ ವೆಚ್ಚ. ಉತ್ಪಾದನೆಗೆ ಅಗತ್ಯವಾದ ಅವಧಿ ಹೆಚ್ಚಾದಂತೆ ಪ್ರಕ್ರಿಯೆಯಲ್ಲಿರುವ ಸರಕು ಹೆಚ್ಚುವುದು. ಆದರೆ ಕಚ್ಚಾ ಸಾಮಗ್ರಿಗಳು ಅರ್ಧಸಿದ್ಧ ಅವಸ್ಥೆಯಲ್ಲೇ ಉಳಿದುಹೋದರೆ ದುಡಿಯುವ ಬಂಡವಾಳದ ಗಾತ್ರ ಹೆಚ್ಚುವುದರಿಂದ ಪ್ರಕ್ರಿಯೆಯಲ್ಲಿರುವ ಸರಕಿನ ಪ್ರಮಾಣವನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸುವುದು ಕೈಗಾರಿಕಾ ಘಟಕದ ಕರ್ತವ್ಯ.

3 **ಸಿದ್ಧ ಸರಕು:** ಪ್ರಕ್ರಿಯೆಯ ವಿವಿಧ ಹಂತಗಳು ಮುಗಿದು ಮಾರುಕಟ್ಟೆಗೆ ಹೋಗಲು ಸಿದ್ಧವಾಗಿರುವ ಉತ್ಪನ್ನಕ್ಕೆ ಸಿದ್ಧ ಸರಕು ಎನುತ್ತೇವೆ. ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗಿದ್ದರೆ ಅವು ತತ್‌ಕ್ಷಣ ಮಾರಾಟವಾಗಬಹುದು. ಆದರೆ ಅನೇಕ ಬಾರಿ ಉತ್ಪಾದಿಸಿದ ಸರಕನ್ನು ಕೂಡಲೇ ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ. ದೂರದ ಮಾರುಕಟ್ಟೆಗೆ ಸರಕನ್ನು ಸಾಗಿಸಬೇಕಾದಾಗ ಅಲ್ಪ ಪ್ರಮಾಣಗಳಲ್ಲಿ ಅನೇಕ ಬಾರಿ ಸಾಗಿಸಿದರೆ ಸಾಗಣೆಯ ಖರ್ಚುಗಳು ಹೆಚ್ಚುತ್ತವೆ. ಆದ್ದರಿಂದ ಸಾಗಣೆಗೆ ಅನುಕೂಲವಾಗುವಷ್ಟು ಅಧಿಕ ಪ್ರಮಾಣದಲ್ಲಿ ಸಿದ್ಧ ಸರಕನ್ನು ದಾಸ್ತಾನು ಮಾಡಿಕೊಂಡು ಮಾರುಕಟ್ಟೆಗೆ ಕಳಿಸಬೇಕಾಗುತ್ತದೆ. ಉತ್ಪನ್ನದ ಆವಶ್ಯಕತೆ ಶ್ರಾಯಿಣವಾಗಿದ್ದರೆ (ಸೀಸನಲ್) ಸಿದ್ಧ ಸರಕಿನ ದಾಸ್ತಾನು ಹೆಚ್ಚಾಗುವುದು ಅನಿವಾರ್ಯವೇ ಆಗುತ್ತದೆ. ಉದಾಹರಣೆಗೆ, ಪಟಾಕಿ ಕಾರ್ಖಾನೆಯಲ್ಲಿ 5–6 ತಿಂಗಳು ಉತ್ಪಾದನೆ ನಡೆದರೂ ಮಾರಾಟ ನಡೆಯುವುದು ದೀಪಾವಳಿಯ ಸಂದರ್ಭದಲ್ಲೇ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಆದಷ್ಟು ಮಟ್ಟಿಗೆ ಸಿದ್ಧ ಸರಕು ದೀರ್ಘಕಾಲ ಉಳಿಯದಂತೆ ಅದರ ಮಾರಾಟದ ವ್ಯವಸ್ಥೆ ಮಾಡಿದರೆ ದುಡಿಯುವ ಬಂಡವಾಳದ ಮೇಲಿನ ಒತ್ತಡ ಕಡಿಮೆಯಾಗುತ್ತದೆ.

4 **ವ್ಯವಹಾರದ ಋಣಿಗಳು (ಟ್ರೇಡ್ ಡೆಟರ್ಸ್):** ಘಟಕದ ಉತ್ಪನ್ನಗಳನ್ನು ಉದರಿಯ ಮೇಲೆ ಕೊಂಡವರನ್ನು ವ್ಯವಹಾರದ ಋಣಿಗಳು ಎನುತ್ತೇವೆ. ಘಟಕ ಉದರಿಯ ಮೇಲೆ ಉತ್ಪನ್ನವನ್ನು ಮಾರಿದಾಗ ಹಣಪ್ರಾಪ್ತಿಯಾಗಲು ಹಲವು ತಿಂಗಳು ಬೇಕಾಗಬಹುದು. ಹೀಗಾದಾಗ ದುಡಿಯುವ ಬಂಡವಾಳದ ಪ್ರಮಾಣವೂ ಹೆಚ್ಚುತ್ತದೆ. ವ್ಯವಹಾರದ ಋಣಿಗಳಿಂದ ಬರಬೇಕಾದ ಹಣವನ್ನು ಉದರಿ ಕೊಟ್ಟ ಅವಧಿಯೊಳಗೆ ವಸೂಲು ಮಾಡದಿದ್ದರೆ ಘಟಕಕ್ಕೆ ದುಡಿಯುವ ಬಂಡವಾಳದ ಕೊರತೆಯುಂಟಾಗುತ್ತದೆ.

5 **ಇತರ ವೆಚ್ಚಗಳು;** ಆಡಳಿತ ಕಛೇರಿಯ ಬಾಡಿಗೆ, ಆಡಳಿತವರ್ಗದ ಸಂಬಳ ಸಾರಿಗೆ, ಅಂಚೆ ತಂತಿ ವೆಚ್ಚ, ಲೇಖನ ಸಾಮಗ್ರಿ, ಮುದ್ರಣದ ವೆಚ್ಚ ಮುಂತಾದ ವಿವಿಧ ರೀತಿಯ ಆಡಳಿತ ವೆಚ್ಚಗಳೂ ಮಾರಾಟದ ವೆಚ್ಚ, ಸರಕು ಸಾಗಣೆ, ಜಾಹೀರಾತು, ಸಾಲದ ಮೇಲೆ ಬೀಳುವ ಬಡ್ಡಿ ಮುಂತಾದವೂ ದುಡಿಯುವ ಬಂಡವಾಳದ ವ್ಯಾಪ್ತಿಗೆ ಒಳಪಡುತ್ತವೆ.

6 **ಉದರಿಯ ಮೇಲೆ ಕೊಂಡ ಕಚ್ಚಾ ಸಾಮಗ್ರಿ:** ಕಚ್ಚಾ ಸಾಮಗ್ರಿಯನ್ನು ಪೂರೈಸುವವರಿಂದ ಉದರಿ ದೊರೆತರೆ ಘಟಕಕ್ಕೆ ಅನುಕೂಲ. ಏಕೆಂದರೆ ಹೀಗೆ ಉದರಿ ದೊರೆತಷ್ಟು ಹಣ ಘಟಕದ ಉಪಯೋಗಕ್ಕೆ ತಾತ್ಕಾಲಿಕವಾಗಿಯಾದರೂ ದೊರೆಯುತ್ತದೆ. ಈ ಉದರಿಯ ಪ್ರಮಾಣ ಹೆಚ್ಚಿದರೆ ದುಡಿಯುವ ಬಂಡವಾಳದ ಆವಶ್ಯಕತೆಯೂ ಕಡಮೆಯಾಗುತ್ತದೆ ಎಬುದು ಗಮನಾರ್ಹ.

7 **ವ್ಯವಹಾರದ ಋಣಿಗಳಿಂದ ಮುಂಗಡ:** ಉದರಿಯ ಮೇಲೆ ಘಟಕದ ಉತ್ಪನ್ನವನ್ನು ಕೊಂಡವರನ್ನು ವ್ಯವಹಾರದ ಋಣಿಗಳು (ಟ್ರೇಡ್ ಡೆಟರ್ಸ್) ಎನ್ನುತ್ತೇವೆ. ಉದರಿಯ ಮೇಲೆ ಸರಕನ್ನು ಮಾರುವುದರಿಂದ ದುಡಿಯುವ ಬಂಡವಾಳದ ಆವಶ್ಯಕತೆ ಹೆಚ್ಚುವುದೆಂದು ಈ ಮೊದಲೇ ವಿವರಿಸಲಾಗಿದೆ. ಹಾಗೆ ಉದರಿ ಪಡೆದವರು ಭಾಗಶಃ ಮೊತ್ತವನ್ನು ಮುಂಗಡವಾಗಿ ನೀಡಿದರೆ ಅದು ಘಟಕದ ದುಡಿಯುವ ಬಂಡವಾಳಕ್ಕೆ ಒದಗುತ್ತದೆ.

ದುಡಿಯುವ ಬಂಡವಾಳದ ನಿರ್ಧಾರಣ

ಘಟಕವೊಂದಕ್ಕೆ ಬೇಕಾದ ದುಡಿಯುವ ಬಂಡವಾಳದ ಮೊತ್ತವನ್ನು ನಿರ್ಧರಿಸುವಾಗ ಘಟಕದ ಆವಶ್ಯಕತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಘಟಕದ ಸದ್ಯದಉತ್ಪಾದನೆಯ ಮಟ್ಟವನ್ನೂ ನಿರೀಕ್ಷಿತ ಉತ್ಪಾದನೆಯ ಮಟ್ಟವನ್ನೂ ಆಧರಿಸಿ ಈ ಪ್ರಮಾಣವನ್ನು ನಿರ್ಧರಿಸಬಹುದು.

ಉತ್ಪಾದನೆ ನಿರಂತರವಾಗಿ ಮುಂದುವರಿಯಲು ಎಷ್ಟು ತಿಂಗಳಿಗೆ ಬೇಕಾದ ಕಚ್ಚಾ ಸಾಮಗ್ರಿಯ ದಾಸ್ತಾನು ಮಾಡಬೇಕು? ಉತ್ಪಾದನೆಯ ಅವಧಿ ಎಷ್ಟು? ಕೂಲಿ, ಇಂಧನ ಮುಂತಾದ ಖರ್ಚುಗಳ ಪ್ರಮಾಣವೇನು? ಉದರಿ ಕೊಡುವುದಿದ್ದಲ್ಲಿ ಹಣ ಪ್ರಾಪ್ತಿಯಾಗಲು ಎಷ್ಟು ಕಾಲ ಬೇಕು? ಉತ್ಪನ್ನಕ್ಕೆ ಶೀಘ್ರ ಮಾರುಕಟ್ಟೆಯಿದೆಯೆ? ಇಲ್ಲದಿದ್ದಲ್ಲಿ ಎಷ್ಟು ಸಿದ್ಧ ಸರಕನ್ನು ದಾಸ್ತಾನು ಮಾಡಬೇಕಾಗಬಹುದು? ಈ ಎಲ್ಲ ಅಂಶಗಳನ್ನೂ ಗಮನಿಸುವ ವ್ಯಾಪಕ ದೃಷ್ಟಿಯಿರಬೇಕು. ಘಟಕದ ಕಳೆದ ಎರಡು–ಮೂರು ವರ್ಷಗಳ ಆಸ್ತಿ-ಹೊಣೆ ತಃಖ್ತೆಗಳನ್ನು ಪರಿಶೀಲಿಸಿ ಹಲವು ಅಂಶಗಳನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ.

ಉತ್ಪಾದನೆ ಗರಿಷ್ಠ ಮಟ್ಟದಲ್ಲಿದ್ದಾಗ ದುಡಿಯುವ ಬಂಡವಾಳದ ಆವಶ್ಯಕತೆಯ ಪ್ರಮಾಣವನ್ನು ನಿರ್ಧರಿಸಬೇಕು.

ದುಡಿಯುವ ಬಂಡವಾಳದ ಗಾತ್ರ ನಿಷ್ಕರ್ಷೆ

1	ಸದ್ಯದ ಉತ್ಪಾದನೆ/ನಿರೀಕ್ಷಿತ ಉತ್ಪಾದನೆ	(ಮಾಸಿಕ)	ರೂ.	...
2	ಬಿಕರಿ	(")	ರೂ.	...
3	ಉತ್ಪಾದನೆಯ ಖರ್ಚು	(")	ರೂ.	...
4	ಅಗತ್ಯವಾದ ಕಚ್ಚಾ ಸಾಮಗ್ರಿಯ ಪ್ರಮಾಣ	(")	ರೂ.	...

ದುಡಿಯುವ ಬಂಡವಾಳಕ್ಕೆ ಸಂಬಂಧಿಸಿದ ವಿವಿಧ ಅಂಶಗಳು

ಘಟಕಕ್ಕೆ ಬೇಕಾದ ದುಡಿಯುವ ಬಂಡವಾಳ

(ಉತ್ಪಾದನೆ ಗರಿಷ್ಠ ಮಟ್ಟದಲ್ಲಿರುವಾಗ)

1 ಕಚ್ಚಾ ಸಾಮಗ್ರಿಯ ದಾಸ್ತಾನು ... ತಿಂಗಳು ರೂ. ...

2 ಪ್ರಕ್ರಿಯೆಯಲ್ಲಿರುವ ಸರಕು ... ವಾರಗಳು ರೂ. ...

3 ಸಿದ್ಧ ಸರಕು (ಅಸಲು ಬೆಲೆಯನ್ನಾಧರಿಸಿ) ... ವಾರಗಳು ರೂ. ...

4 ವ್ಯವಹಾರದ ಋಣಿಗಳು ... ತಿಂಗಳು ರೂ. ...

5 ಇತರ ವೆಚ್ಚಗಳು (ಒಂದು ತಿಂಗಳಿಗೆ) ರೂ. ...

(1)

ದುಡಿಯುವ ಬಂಡವಾಳಕ್ಕೆ ಒದಗುವ ವಿವಿಧ ಮೂಲಗಳು

ಮೊತ್ತ ರೂ.

1 ಉದರಿ ಖರೀದಿ ... ತಿಂಗಳು ...

2 ವ್ಯವಹಾರದ ಋಣಿಗಳಿಂದ ಮುಂಗಡ ... ತಿಂಗಳು ...

3 ಘಟಕದ ಆಸ್ತಿ–ಹೊಣೆ ತಃಖ್ತೆಯಂತೆ (ಬ್ಯಾಲೆನ್ಸ್ ಷೀಟ್) ನಗದತೆಯ ಹೆಚ್ಚಳ ... ತಿಂಗಳು ...

(2)

(1)ನೆಯ ಬಾಬ್ತಿನಲ್ಲಿ ಬರುವ ಮೊಬಲಗಿನಿಂದ (2)ನೆಯ ಬಾಬ್ತಿನಲ್ಲಿ ಕಾಣಿಸಿರುವ ಮೊಬಲಗನ್ನು ಕಳೆದರೆ ಉಳಿಯುವ ಮೊಬಲಗೇ ಘಟಕಕ್ಕೆ ಆವಶ್ಯಕವಾದ ದುಡಿಯುವ ಬಂಡವಾಳದ ಪ್ರಮಾಣ (3).

$$(1)-(2)=(3)$$

ಬ್ಯಾಂಕುಗಳ ನೆರವು

ದುಡಿಯುವ ಬಂಡವಾಳಕ್ಕಾಗಿ ಕೈಗಾರಿಕಾ ಘಟಕಗಳಿಗೆ ಬ್ಯಾಂಕುಗಳು ಸಾಲ ನೀಡಬೇಕಾದಾಗ ಮೊದಲು ಘಟಕಕ್ಕೆ ಈ ದಿಶೆಯಲ್ಲಿ ಆವಶ್ಯಕವಾಗುವ ಹಣದ ಮೊತ್ತವನ್ನು ಮೇಲೆ ವಿವರಿಸಿದಂತೆ ನಿರ್ಧರಿಸುತ್ತವೆ. ಆದರೆ ಅಷ್ಟು ಹಣವನ್ನೂ ಘಟಕಕ್ಕೆ ಸಾಲವಾಗಿ ನೀಡುವುದಿಲ್ಲ. ಇದರಲ್ಲಿ ಒಂದು ಪಾಲನ್ನು ಘಟಕವೇ ವಹಿಸಿಕೊಳ್ಳಬೇಕಾಗುತ್ತದೆ. ಈ ಪಾಲು ಎಷ್ಟಿರಬೇಕೆಂಬುದು ಮಾರುಕಟ್ಟೆಯಲ್ಲಿ ಕಚ್ಚಾ ಸಾಮಗ್ರಿಗೆ ಇರುವ ಬೇಡಿಕೆ, ಕಚ್ಚಾ ಸರಕಿನ ಗುಣಮಟ್ಟ ಮುಂತಾದ ವಿವಿಧ ಅಂಶಗಳನ್ನು ಅವಲಂಬಿಸಿರುತ್ತದೆ. ದುಡಿಯುವ ಬಂಡವಾಳಕ್ಕೆಂದು ಆರ್ಥಿಕ ನೆರವು ಪಡೆಯುವಾಗ ಘಟಕ ತನ್ನ ಕಚ್ಚಾ ಸಾಮಗ್ರಿ ಮುಂತಾದವನ್ನು ಬ್ಯಾಂಕು ನೀಡಿದ ಸಾಲದ ಭದ್ರತೆಗಾಗಿ ಬ್ಯಾಂಕಿಗೆ ಈಡು ಮಾಡಬೇಕಾಗುತ್ತದೆ. ಈಡಾದ ಸರಕಿನ ಮೌಲ್ಯ ಇಳಿಯುವ ಸಂಭವವಿರುವುದರಿಂದ ಈ ಸರಕುಗಳನ್ನು ಕೊಳ್ಳಲು ಪೂರ್ತಿ ಹಣವನ್ನು ಬ್ಯಾಂಕು ಸಾಲವಾಗಿ ನೀಡದೆ ಘಟಕದ ಭಾಗ (ಮಾರ್ಜಿನ್) ಸೇಕಡ ಇಂತಿಷ್ಟು ಇರಲೇಬೇಕೆಂದು ನಿಗದಿ ಪಡಿಸುತ್ತದೆ. ಸಾಮಾನ್ಯವಾಗಿ ಪ್ರಕ್ರಿಯೆಯಲ್ಲಿರುವ ಸರಕು ಮತ್ತು ಸಿದ್ಧ ಸರಕುಗಳಿಗೆ ಕಚ್ಚಾ ಸಾಮಗ್ರಿಗಳಿಗಿರುವಷ್ಟು ಮಾರುಕಟ್ಟೆಯಿರುವುದಿಲ್ಲವಾದ್ದರಿಂದ ಅವುಗಳಲ್ಲಿ ಘಟಕದ ಪಾಲು ಸ್ವಲ್ಪ ಹೆಚ್ಚಿರಬೇಕು ಎಂದು ಬ್ಯಾಂಕು ಅಪೇಕ್ಷಿಸುತ್ತದೆ. ವ್ಯವಹಾರದ ಋಣಿಗಳು ಸಾಧಾರಣವಾಗಿ ಹುಂಡಿಗಳ ಮೂಲಕ ಲೆಕ್ಕ ಚುಕ್ತಾ ಮಾಡುವುದರಿಂದ ಈ ಅಂಶದಲ್ಲಿ ಘಟಕದ ಪಾಲು ಸ್ವಲ್ಪ ಕಡಮೆಯಿದ್ದರೆ ಅಡ್ಡಿಯಿಲ್ಲ.

ದುಡಿಯುವ ಬಂಡವಾಳದ ವಿವಿಧ ಅಂಶಗಳಲ್ಲಿ ಘಟಕದ ಪಾಲು ಎಷ್ಟಿರಬೇಕೆಂದು ಲೆಕ್ಕ ಹಾಕಿ ಅದನ್ನು ಕಳೆದು ತಾವು ನೀಡಬೇಕಾದ ಸಾಲದ ಪರಿಮಿತಿಯನ್ನು (ಲಿಮಿಟ್) ಬ್ಯಾಂಕುಗಳು ನಿರ್ಧರಿಸುತ್ತವೆ.

ದುಡಿಯುವ ಬಂಡವಾಳಕ್ಕೆ ಸಂಬಂಧಿಸಿದ ವಿವಿಧ ಅಂಶಗಳು

(ಉತ್ಪಾದನೆ ಗರಿಷ್ಠ ಮಟ್ಟದಲ್ಲಿರುವಾಗ)	ಅಗತ್ಯವಾದ ದುಡಿಯುವ ಬಂಡವಾಳದ ಮೊತ್ತ	ಕಳೆಯಿರಿ: ಘಟಕದ ಪಾಲು (ಮಾರ್ಜಿನ್) ಸೇಕಡ	ಬ್ಯಾಂಕು ನೀಡುವ ಸಾಲದ ಮಿತಿ
1 ಕಚ್ಚಾ ಸಾಮಗ್ರಿಯ ದಾಸ್ತಾನು	ರೂ. ...	25	ರೂ. ...
2 ಪ್ರಕ್ರಿಯೆಯಲ್ಲಿರುವ ಸರಕು	ರೂ. ...	30	ರೂ. ...
3 ಸಿದ್ಧ ಸರಕು	ರೂ. ...	30	ರೂ. ...
4 ವ್ಯವಹಾರದ ಋಣಿಗಳು	ರೂ. ...	20	ರೂ. ...
5 ಇತರ ವೆಚ್ಚಗಳು* (ಒಂದು ತಿಂಗಳ ವೆಚ್ಚ) ರೂ.			ರೂ. ...
	ಒಟ್ಟು ಸಾಲದ ಪರಿಮಿತಿ		ರೂ.

ಘಟಕದ ಭಾಗ: ಕಲಮಿನಲ್ಲಿ ತೋರಿಸಿರುವ ಅಂಕಿಗಳು ಘಟಕದಿಂದ ಘಟಕಕ್ಕೆ ವ್ಯತ್ಯಾಸವಾಗುತ್ತವೆ.

* ಸಾಮಾನ್ಯವಾಗಿ ಬ್ಯಾಂಕುಗಳು ಇತರ ವೆಚ್ಚಗಳಿಗೆ ಸಾಲ ನೀಡುವುದಿಲ್ಲ.

ಇಲ್ಲಿ ಬ್ಯಾಂಕು ಇನ್ನೊಂದು ಅಂಶವನ್ನು ಮುಖ್ಯವಾಗಿ ಗಮನಿಸುತ್ತದೆ. ಉದರಿ ಕ್ರಯ, ವ್ಯಹಾರದ ಋಣಿಗಳಿಂದ ಮುಂಗಡ, ಘಟಕದ ದ್ರವ್ಯದ ಹೆಚ್ಚಳ—ಈ ಅಂಶಗಳೂ ದುಡಿಯುವ ಬಂಡವಾಳಕ್ಕೆ ಒದಗಿಬರುವುವಷ್ಟೆ? ('ದುಡಿಯುವ ಬಂಡವಾಳದ ನಿರ್ಧಾರಣ'ದ ವಿವರಣೆಯಲ್ಲಿಯ ಅಂಶ 2ನ್ನು ನೋಡಿ) ಈ ಮೂಲಗಳಿಂದ ಸಾಕಷ್ಟು ಹಣ ಒದಗುವುದಾದರೆ ಬ್ಯಾಂಕು ತನ್ನ ಸಾಲದ ಪರಿಮಿತಿಯನ್ನು ಕಡಿಮೆ ಮಾಡಲು ಅನುವಾಗುವಂತೆ ಆವಶ್ಯಕ ದುಡಿಯುವ ಬಂಡವಾಳದಲ್ಲಿ ಘಟಕದ ಭಾಗವನ್ನು ಹೆಚ್ಚಿಸುತ್ತದೆ.

ಏಕೆಂದರೆ ಘಟಕಕ್ಕೆ ಆವಶ್ಯಕವಾದ ದುಡಿಯುವ ಬಂಡವಾಳದ ಪ್ರಮಾಣಕ್ಕಿಂತ (3) ಒಟ್ಟು ಸಾಲದ ಪರಿಮಿತಿ ಕಡಮೆಯಾಗಿರಬೇಕು. ಈ ಕೊರತೆಯನ್ನು ಘಟಕ ಇತರ ಮೂಲಗಳಿಂದ ತುಂಬಿಕೊಳ್ಳಬೇಕಾಗುತ್ತದೆ.

ಟಿಪ್ಪಣಿ :

ಘಟಕದ ಆಸ್ತಿ – ಹೊಣೆ ತಃಖ್ತೆಯಂತೆ ನಗದತೆಯ ಹೆಚ್ಚಳ: ಒಂದು ಘಟಕದ ಚರಾಸ್ತಿಗಳಿಂದ 'ಚಾಲ್ತಿ ಹೊಣೆಗಳನ್ನು ಕಳೆದಾಗ ಬರುವ ಮೊಬಲಗನ್ನು ಘಟಕದ (ನಗದತೆಯ) ಹೆಚ್ಚಳ (ಲಿಕ್ವಿಡ್ ಸರ್ಪ್ಲಸ್) ಎನ್ನುತ್ತೇವೆ. ಯಾವುದೇ ಘಟಕದ ಆಸ್ತಿ – ಹೊಣೆ ತಃಖ್ತೆಯನ್ನು ಪರಿಶೀಲಿಸಿದಾಗ ಅದರಲ್ಲಿ ಸ್ಥೂಲವಾಗಿ ಈ ಅಂಶಗಳನ್ನು ಕಾಣಬಹುದು:

ಹೊಣೆ		ಆಸ್ತಿ	
1 ದೀರ್ಘಾವಧಿ ನಿಧಿ (ಅ) ಮೂಲಧನ, ಮಿಾಸಲುಧನ, ಲಾಭ (ಆ) ದೀರ್ಘಾವಧಿ ಸಾಲಗಳು	ರೂ.	3 ಸ್ಥಿರಾಸ್ತಿಗಳು	ರೂ.
2 ಚಾಲ್ತಿ ಹೊಣೆಗಳು	ರೂ.	4 ಚರಾಸ್ತಿಗಳು	ರೂ.

ಒಟ್ಟು ಆಸ್ತಿ ಮತ್ತು ಒಟ್ಟು ಹೊಣೆ ಪರಸ್ಪರ ಸಮವಾಗಿರುತ್ತವೆ.

ಅಂಶ 1 + ಅಂಶ 2 = ಅಂಶ 3 + ಅಂಶ 4

∴ ಅಂಶ 4 – ಅಂಶ 2

= ಅಂಶ 1 – ಅಂಶ 3

ನಗದತೆಯ ಹೆಚ್ಚಳ = ಚರಾಸ್ತಿಗಳು – ಚಾಲ್ತಿ ಹೊಣೆಗಳು

= ಅಂಶ 4 – ಅಂಶ 2

= ಅಂಶ 1 – ಅಂಶ 3

= ದೀರ್ಘಾವಧಿ ನಿಧಿ – ಸ್ಥಿರಾಸ್ತಿಗಳು

ಆದ್ದರಿಂದ ಘಟಕ ತನ್ನ ದಿರ್ಘಾವಧಿ ನಿಧಿಯನ್ನು ಸ್ಥಿರಾಸ್ತಿಗಳಲ್ಲಿ ವಿನಿಯೋಗಿಸಿದ ಅನಂತರ ಉಳಿಯುವ ಹಣವನ್ನು ನಗದತೆಯ ಹೆಚ್ಚಳ ಪ್ರತಿನಿಧಿಸುತ್ತದೆ. ಸಹಜವಾಗಿ ಘಟಕದ ದುಡಿಯುವ ಬಂಡವಾಳಕ್ಕೆ ಈ ಹಣ ಒದಗುತ್ತದೆ.

ನೊಬೆಲ್ ಪ್ರಶಸ್ತಿ

'ಹಣಕಾಸು ಮಾರುಕಟ್ಟೆ, ವೆಚ್ಚ ನಿರ್ಣಯ, ಉದ್ಯೋಗ, ಉತ್ಪಾದನೆ ಹಾಗೂ ಬೆಲೆಗಳಿಗಿರುವ ಸಂಬಂಧದ ವಿಶ್ಲೇಷಣೆ'ಗಾಗಿ ಪ್ರೊ॥ ಜೇಮ್ಸ್ ಟಾಬಿನ್ ಅವರಿಗೆ ೧೯೮೧ನೆಯ ಸಾಲಿನ ಅರ್ಥಶಾಸ್ತ್ರದ ನೊಬೆಲ್ ಬಹುಮಾನ ದೊರೆತಿದೆ.

ಅಸ್ವಸ್ಥ ಘಟಕಗಳ ರೋಗನಿದಾನ ಮತ್ತು ಚಿಕಿತ್ಸೆ

ವೈ. ವಿಜಯಾನಂದ್

'ಸಂಸಾರ ಗುಟ್ಟು. ವ್ಯಾಧಿ ರಟ್ಟು' ಎಂಬ ಗಾದೆ ಕೈಗಾರಿಕಾ ಘಟಕಗಳ ವಿಚಾರದಲ್ಲೂ ನಿಜ. ಸಕಾಲದಲ್ಲಿ ರೋಗದ ಪತ್ತೆ ಹಾಗೂ ಚಿಕಿತ್ಸೆಯಲ್ಲಿ ಬ್ಯಾಂಕುಗಳದೂ ಪಾತ್ರವುಂಟು.

ನಮ್ಮ ಬ್ಯಾಂಕಿಂಗ್ ರಚನೆಯ ಒಂದು ವೈಶಿಷ್ಟ್ಯವೇನೆಂದರೆ ಸಾಮಾಜಿಕ ಉದ್ದೇಶಗಳನ್ನು ವಾಣಿಜ್ಯ ಬ್ಯಾಂಕಿಂಗಿನೊಂದಿಗೆ ಬೆರೆಸಿ, ಹಣವನ್ನು ಉತ್ಪಾದನೆ, ನಿಯೋಜನೆ ಮತ್ತು ಉದ್ಯೋಗಸೃಷ್ಟಿಗೆ ಸಾರ್ಥಕವಾಗಿ ಬಳಸಿಕೊಳ್ಳುವುದಾಗಿದೆ. ಸರ್ಕಾರದಿಂದ ಆದ್ಯತಾ ಕ್ಷೇತ್ರವೆಂದು ಪರಿಗಣಿತವಾಗಿರುವ ಸಣ್ಣ ಕೈಗಾರಿಕೆಗಳಿಗೆ ಅಸ್ತಿಭಾರ ಇದರಲ್ಲಿದೆ.

ಉತ್ತಮ ಸರ್ಕಾರ ತನ್ನ ಪ್ರಜೆಗಳನ್ನು ಯಾವ ದೃಷ್ಟಿಯಿಂದ ನೋಡಿಕೊಳ್ಳುವುದೋ ಹಾಗೆ ಭಾರತದ ಬ್ಯಾಂಕುಗಳ ದೃಷ್ಟಿ ಸಣ್ಣಕೈಗಾರಿಕೆಗಳ ಬಗ್ಗೆ ಇದೆ. ಒಳ್ಳೆಯ ನಿರ್ವಾಹಕರನ್ನು ಉತ್ತೇಜಿಸುವುದು, 'ಆವಶ್ಯಕತೆ ಇರುವವರಿಗೆ ಸಹಾಯ ಮಾಡುವುದು' ಮತ್ತು ಅಪ್ರಾಮಾಣಿಕರನ್ನು ಶಿಕ್ಷಿಸುವುದು—ಇವೇ ಇವುಗಳ ಮುಖ್ಯ ಧೋರಣೆಗಳಾಗಿದೆ. ಈ ಮೂರರಲ್ಲಿ 'ಆವಶ್ಯಕತೆ ಇರುವವರಿಗೆ ಸಹಾಯ ಮಾಡುವುದು' ಬ್ಯಾಂಕರನಿಗೆ ಅತ್ಯಂತ ದುಸ್ತರವಾದ, ಆದರೆ ಕುತೂಹಲಕಾರಿಯಾದ ಮತ್ತು ಸವಾಲನ್ನೊಡ್ಡುವ ವಿಷಯವಾಗಿದೆ. ಬ್ಯಾಂಕರನ ಪಾತ್ರ ಈ ವಿಷಯದಲ್ಲಿ ಸಂಕೀರ್ಣವಾದ್ದು: ಸಮಯಕ್ಕೆ ಒದಗುವ ಸ್ನೇಹಿತ ಮತ್ತು ಮುಖ್ಯ ಹಣಪಾಲುದಾರ, ಆವಶ್ಯಕತೆ ಇರುವ ಘಟಕಗಳಿಗೆ ಸರಿಯಾದ ಚಿಕಿತ್ಸೆ ನಡೆಸಿ ತಕ್ಕುದಾದ ಔಷಧಿಯನ್ನು ಗೊತ್ತುಪಡಿಸುವ ತಜ್ಞ ವೈದ್ಯ. ಆದ್ದರಿಂದ ಇಂಥ ಘಟಕಗಳನ್ನು 'ಅಸ್ವಸ್ಥ ಘಟಕ'ಗಳೆನ್ನುತ್ತೇವೆಯೇ ಹೊರತು 'ಕೆಟ್ಟ ಘಟಕ'ಗಳೆನ್ನುವುದಿಲ್ಲ.

'ವ್ಯಾಧಿ ರಟ್ಟು'

ಅಸ್ವಸ್ಥ ಘಟಕಗಳಿಗೆ ಬೇಕಾಗಿರುವುದು ಸರಿಯಾದ ರೋಗನಿದಾನ ಮತ್ತು ಯುಕ್ತ ಚಿಕಿತ್ಸೆ. ಘಟಕಗಳಿಗೂ ಕೆಲವು ಜವಾಬ್ದಾರಿಗಳಿವೆ. ಯಾವುದೇ ರೀತಿಯ ಕುಂದುಗಳಿದ್ದರೂ ತಮ್ಮ ಸಮಗ್ರತೆಯನ್ನು ಕಾಯ್ದುಕೊಳ್ಳುವುದು ಅವುಗಳ ಪ್ರಥಮ ಜವಾಬ್ದಾರಿ. ಇದೇ ಅವುಗಳಿಗೆ ಬಲದ ಆಕರ. ಇದರ ಜೊತೆಗೆ ಈ ಘಟಕಗಳು ರೋಗಿ ಹೇಳುವಂತೆ ತಮ್ಮ ಕುಂದು ಕೊರತೆಗಳನ್ನು ಚಾಚೂ ತಪ್ಪದೆ ವಿಶ್ವಾಸದಿಂದ ಅರಿಕೆ ಮಾಡಿಕೊಂಡು, ಬ್ಯಾಂಕರರು ತಮ್ಮನ್ನು ಪುನರುಜ್ಜೀವನಗೊಳಿಸಲು ಅನುವು ಮಾಡಿಕೊಡಬೇಕು.

ಸಮಗ್ರತೆ ಮತ್ತು ಬ್ಯಾಂಕರನೊಡನೆ ಸಹಕಾರ—ಇವೆರಡೂ ಬ್ಯಾಂಕರ್ ಮತ್ತು ಸಣ್ಣ ಘಟಕಗಳ ಸಂಬಂಧದಲ್ಲಿ ಜವಾಬ್ದಾರಿಯುತವಾದ ಹಾಸು–ಹೊಕ್ಕುಗಳು. ಈ ಘಟಕಗಳು ಮನುಷ್ಯರ ಕೈಯಲ್ಲಿರುವ ಉಪಕರಣಗಳಾದುದರಿಂದ ಪ್ರತಿಕೂಲ ಸನ್ನಿವೇಶಗಳಲ್ಲಿ ಮನುಷ್ಯಸ್ವಭಾವದಲ್ಲಿಯಂತೆ ತೀವ್ರತರವಾದ ಪ್ರತಿಕ್ರಿಯೆಗಳು ಕಾಣಬಹುದು. ಈ ರೀತಿಯ ತೀವ್ರತರ ಪ್ರತಿಕ್ರಿಯೆಗಳು ಕೈಗಾರಿಕೆಗೆ ಮಾರಕವಾಗುವುವೇ ಹೊರತು ಸಹಾಯಕವಾಗುವುದಿಲ್ಲ. ಒಂದು ತೀವ್ರತರ ಪ್ರತಿಕ್ರಿಯೆಯೆಂದರೆ ಈ ಘಟಕಗಳು ತಾವು ಅಸ್ವಸ್ಥವಾಗಿರುವುದನ್ನು ಒಪ್ಪಿಕೊಳ್ಳದಿರುವುದು.

ಈ ಘಟಕಗಳನ್ನು ನಡೆಸುವ ಜನ ತಮ್ಮ ಸಮಸ್ಯೆಗಳನ್ನು ಬಿನ್ನವಿಸಿಕೊಳ್ಳಲು ಸಂಕೋಚಪಡುವುದು ಇದರಿಂದಾಗಿ. ಆದ್ದರಿಂದ ಈ ಸಮಸ್ಯೆ ಹಾಗೇ ಉಳಿಯುತ್ತದೆ. ಇಲ್ಲದ ಅವಾಸ್ತವ ಚಿತ್ರವನ್ನು ಕೊಡುವುದರಿಂದ ಸಮಸ್ಯೆ ಉಲ್ಬಣವಾಗುತ್ತದೆ. ಈ ಸೋಗು ಎಂಥ ಸನ್ನಿವೇಶವನ್ನು ಸೃಷ್ಟಿಸುತ್ತದೆ ಎಂದರೆ, ಬ್ಯಾಂಕರು ಅವುಗಳ ಸಮಸ್ಯೆಗಳನ್ನು ಪರಿಹರಿಸಲಾಗಂಥ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಆರ್ಥಿಕ ಸಹಾಯವನ್ನು ನೀಡುತ್ತಿರುವ ಬ್ಯಾಂಕನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಉತ್ತಮ. ಅದರಿಂದ ಬ್ಯಾಂಕರನ ಪಾತ್ರದ ಮಹತ್ವದ ಅರಿವಾಗುತ್ತದೆ.

ಎರಡನೆಯ ತೀವ್ರತರ ಪ್ರತಿಕ್ರಿಯೆ ಎಂದರೆ, ಅಲ್ಪಕಾಲಿಕ ಶುಶ್ರೂಷೆಯನ್ನು ಮತ್ತಷ್ಟು ವಿಸ್ತರಿಸಿಕೊಳ್ಳಲು

ಪ್ರಯತ್ನಿಸುವುದು. ಇದು ಘಟಕಕ್ಕೆ ಸ್ವಯಂ ಮಾರಕವಾಗಿ ಪರಿಣಮಿಸುತ್ತದೆ. ಆದರೆ ಅನೇಕ ಘಟಕಗಳು ಜಾಗೃತಗೊಂಡು ಬ್ಯಾಂಕುಗಳೊಡನೆ ಸಹಕರಿಸುತ್ತಿರುವುದು ಸಂತೋಷದ ಸಂಗತಿ.

ಕೈಗಾರಿಕೆಗಳ, ಅದರಲ್ಲೂ ಸಣ್ಣ ಕೈಗಾರಿಕೆಗಳ, ಅನಾರೋಗ್ಯದ ಬಗ್ಗೆ ಬ್ಯಾಂಕುಗಳು ನೀತಿಯನ್ನು ರೂಪಿಸುವಾಗ ತಮ್ಮ ಪ್ರಾಯೋಗಿಕ ಜ್ಞಾನ ಮತ್ತು ನಿರಂತರ ಶೋಧನೆಗಳನ್ನು ಗಮನಕ್ಕೆ ತೆಗೆದುಕೊಂಡೇ ರೂಪಿಸಿರುತ್ತವೆ. ಇದರಿಂದಾಗಿ ಘಟಕಗಳ ಅನಾರೋಗ್ಯದ ಬಗ್ಗೆ ಅವು ಜಾಗರೂಕತೆಯನ್ನು ವಹಿಸುತ್ತವೆಯೇ ಹೊರತು ಹೆದರುವುದಿಲ್ಲ.

ಸರ್ಕಾರ, ಭಾರತೀಯ ರಿಸರ್ವ್‌ಬ್ಯಾಂಕ್ ಮತ್ತು ವಾಣಿಜ್ಯ ಬ್ಯಾಂಕುಗಳು ರೂಪಿಸಿರುವ ನೀತಿ ಎಂದರೆ ಈ ಘಟಕಗಳ ಬಗ್ಗೆ ಆಶಾದಾಯಕವಾದ ದೃಷ್ಟಿ ಹೊಂದಿರುವುದು. ವಾಣಿಜ್ಯ ಬ್ಯಾಂಕುಗಳ ನಾಯಕನಂತಿರುವ ಭಾರತೀಯ ಸ್ಟೇಟ್ ಬ್ಯಾಂಕ್ ಈ ನೀತಿಯನ್ನು ಅನುಷ್ಠಾನಕ್ಕೆ ತರುವಲ್ಲಿ ಪರಿಣತೆ ಪಡೆದಿದೆ. ರೋಗಗ್ರಸ್ತ ಘಟಕಗಳಿಗೆ ಯುಕ್ತ ಸಮಯದಲ್ಲಿ ತಕ್ಕ ಸಹಾಯವನ್ನೊದಗಿಸುವುದು ತನ್ನ ಕರ್ತವ್ಯವೆಂದು ಪ್ರತಿಯೊಂದು ಬ್ಯಾಂಕೂ ಭಾವಿಸಿದೆ.

ಯಾವುದು ಅಸ್ವಸ್ಥ?

ರೋಗ ನಿದಾನದಲ್ಲಿ ರೋಗಗ್ರಸ್ತ ಘಟಕಗಳನ್ನು ಗುರುತಿಸುವುದು ಮೊದಲ ಹೆಜ್ಜೆ. ಸರ್ಕಾರ ಮತ್ತು ಬ್ಯಾಂಕುಗಳು ಅಸ್ವಸ್ಥ ಘಟಕಗಳ ಬಗ್ಗೆ ಆಳವಾದ ಅಭ್ಯಾಸ ಮಾಡಿವೆ. ಇದೆಲ್ಲದರ ಫಲಿತಾಂಶವೆಂದರೆ ಅಸ್ವಸ್ಥ ಘಟಕದ ವಿವರಣೆ. ಆರೋಗ್ಯಪೂರ್ಣವಾದ ಮತ್ತು ಮಾಮೂಲಿಯ ಕೆಲಸ ಮಾಡಲು ಸಾಕಾಗವಷ್ಟು ನಿಧಿಗಳನ್ನು ಯಾವ ಘಟಕ ಉತ್ಪಾದಿಸಲು ಅಶಕ್ಯವಾಗಿರುವುದೋ ಅದೇ ಅಸ್ವಸ್ಥ ಘಟಕ.

ಆಗಾಗ ನಷ್ಟಗಳನ್ನು ಅನುಭವಿಸುವುದರಿಂದ ಇತರ ಕೆಲಸಗಳು ಕ್ಷಣಿಕವಾಗಿ ವ್ಯತ್ಯಸ್ತವಾದಂತೆ ಕಂಡು, ಘಟಕ ಆರೋಗ್ಯವಾಗಿಲ್ಲವೆಂದು ಅವಸರದ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆಯಿದೆ. ಆದರೆ ಭಾರತೀಯ ಸ್ಟೇಟ್ ಬ್ಯಾಂಕಿನ ನಿರಂತರವಾದ ಸಂಶೋಧನೆ ಮೇಲ್ಕಂಡ ಸೂತ್ರವನ್ನು ಬೇರೆಯಾಗಿ ವ್ಯಾಖ್ಯಾನಿಸಿದೆ. ನಷ್ಟ ಮತ್ತಿತರ ರೋಗ ಲಕ್ಷಣಗಳನ್ನು ಯಾವುದೇ ಘಟಕ ನಿರಂತರವಾಗಿ ವ್ಯಕ್ತಪಡಿಸುತ್ತಿದ್ದರೆ ಆಗ ಅದು ಅಸ್ವಸ್ಥ ಘಟಕವೆನಿಸಿಕೊಳ್ಳುತ್ತದೆ. ಹೊರ ಸಹಾಯಕ್ಕೆ ಈ ಘಟಕಗಳು ಯಾವಾಗಲೂ ಕೈ ಚಾಚಿರುತ್ತವೆ. ಹೊರ ಸಹಾಯದಿಂದ ಘಟಕದ ಚಾಲನೆಯೇ ಸ್ತಬ್ಧಗೊಳ್ಳುವ ಸಾಧ್ಯತೆಯಿದೆ. ಆದರೆ ಯೋಜನಾರಹಿತ ಸಹಾಯ ಘಟಕಕ್ಕೂ ನೆರವುದಾರರಿಗೂ ಮಾರಕವಾಗುತ್ತದೆ. ಇಂಥ ಸಂದರ್ಭದಲ್ಲಿಯೇ ರೋಗವನ್ನು ಪತ್ತೆ ಹಚ್ಚುವ ಜವಾಬ್ದಾರಿ ಕಾಣಿಸಿಕೊಳ್ಳುವುದು. ಕಾರಣವನ್ನು ಪತ್ತೆ ಹಚ್ಚಿದರೆ ರೋಗಕ್ಕೆ ಪರಿಹಾರವುಂಟೆ ಎಂಬುದನ್ನೂ ಅದಕ್ಕಾಗಿ ಅನುಸರಿಸಬೇಕಾದ ಮಾರ್ಗ ಯಾವುದೆಂಬುದನ್ನೂ ನಿರ್ಧರಿಸಬಹುದು. ಯಾವ ರೀತಿ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು ಎಂಬುದನ್ನು ಕೆಲವು ನಿದರ್ಶನಗಳೊಂದಿಗೆ ವಿವರಿಸಬಹುದು.

ಘಟಕ 1: ತನ್ನ ಉತ್ಪಾದನೆಗಳಿಗೆ ಬೇಡಿಕೆ ಇದ್ದರೂ, ಸಕಾಲದಲ್ಲಿ ಕಚ್ಚಾ ಸಾಮಗ್ರಿಯ ಕೊರತೆಯನ್ನು ಎದುರಿಸುತ್ತಿದೆ.

ಘಟಕ 2: ಗ್ರಾಹಕರಿಂದ ಇದರ ಉತ್ಪಾದನೆಗಳು ತಿರಸ್ಕೃತವಾಗುತ್ತಿವೆ.

ಘಟಕ 3: ಬ್ಯಾಂಕಿನ ಉದರಿ ಸೌಲಭ್ಯವಿದೆ. ಘಟಕ ಯಾವಾಗಲೂ ಚಟುವಟಿಕೆಯಿಂದ ಕೂಡಿದೆ. ಆದರೆ ಆರ್ಥಿಕ ಮುಗ್ಗಟ್ಟು ಪರಿಹಾರವಾಗಿಲ್ಲ.

ಘಟಕ 4: ತಾಂತ್ರಿಕ ಪರಿಣತರಿಂದ ತುಂಬಿರುವ ಘಟಕ. ಆದರೆ ಹಣಕಾಸಿಗೆ ಪರದಾಟ.

ಬ್ಯಾಂಕರನೊಂದಿಗೆ ಸಾಮರಸ್ಯವಿರದಿದ್ದಲ್ಲಿ ಮತ್ತು ಉದ್ದೇಶ ಸಾಧನೆಯನ್ನು ಕೈ ಬಿಟ್ಟಲ್ಲಿ ಘಟಕಕ್ಕೆ ನೀಡಿರುವ ಉದರಿ ಸೌಲಭ್ಯವನ್ನು ಬ್ಯಾಂಕು ಹಿಂದೆಗೆದುಕೊಳ್ಳಬಹುದು. ಮೇಲ್ಕಂಡ ಉದಾಹರಣೆಗಳಲ್ಲಿ ಸಮನ್ವಯ ಪ್ರಯತ್ನ ಕಂಡುಬಂದರೆ ಈ ಕೆಳಗಿನ ಫಲಿತಾಂಶವನ್ನು ಪಡೆಯಲು ಸಾಧ್ಯ.

ಘಟಕ 1: ಸರಿಯಾದ ಸರಕನ್ನು ಒದಗಿಸುವ ವಿದೇಶಿ ರಫ್ತುದಾರನನ್ನಾಗಲಿ ಸರ್ಕಾರದ ಅಭಿಕರಣ ಸಂಸ್ಥೆಗಳನ್ನಾಗಲಿ ಬ್ಯಾಂಕ್ ಮತ್ತು ಘಟಕ ಪತ್ತೆಮಾಡಬೇಕು. ಘಟಕ ಕಚ್ಚಾ ಸಾಮಗ್ರಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಳ್ಳಲು ಮತ್ತು ಅದನ್ನು ದಾಸ್ತಾನು ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಹಾಗೆಯೇ ದಾಸ್ತಾನನ್ನು ಹಂತಹಂತವಾಗಿ ಮತ್ತು ನಿಯಮಿತವಾಗಿ ಬಳಸಿಕೊಳ್ಳುವುದನ್ನು ಕಲಿಯಬೇಕು. ಇದು ಸಾಧ್ಯವಾಬೇಕಾದರೆ ಬ್ಯಾಂಕು ಸಾಮಾನ್ಯವಾಗಿ ನೀಡುವ ಮಟ್ಟಕ್ಕಿಂತ ಹೆಚ್ಚಿನ ಪ್ರಮಾಣದ ಉದರಿ ಸೌಲಭ್ಯವನ್ನು ನೀಡಿ ಹೆಚ್ಚಿಗೆ ದಾಸ್ತಾನಿಗೆ ಅನುವು ಮಾಡಿಕೊಡಬೇಕು. ಇದಕ್ಕಾಗಿ ಸರಬರಾಜುದಾರರಿಗೆ ಘಟಕಗಳ ಪರವಾಗಿ ಖಾತರಿ ಪತ್ರ ಮತ್ತು ಉದರಿ ಪತ್ರಗಳನ್ನು ಬ್ಯಾಂಕು ನೀಡಬೇಕಾಗಬಹುದು.

ಘಟಕ 2: ಪ್ರಥಮತಃ ತಾಂತ್ರಿಕ ಅಧ್ಯಯನ ನಡೆಸಬೇಕು. ಉತ್ಪಾದನೆಗಳ ತಿರಸ್ಕಾರಕ್ಕೆ ಕಾರಣಗಳನ್ನು ಕಂಡುಹಿಡಿದು ಪರಿಹಾರ ಒದಗಿಸಬೇಕು. ಅದು ಉಪಯೋಗಿಸುತ್ತಿರುವುದು ಹಳತಾಗುತ್ತಿರುವ ಯಂತ್ರೋಪಕರಣವಾಗಿರಬಹುದು. ಅದಕ್ಕೆ ಸೂಕ್ತವಾದ ಯಂತ್ರವಿಲ್ಲದಿರಬಹುದು.

ಹೆಚ್ಚಿನ ಆರ್ಥಿಕ ನೆರವಿನಿಂದ ಘಟಕ ಇದನ್ನು ಪಡೆದು ಲಾಭ ದಾಯಕವಾಗಿ ಕೆಲಸ ಮಾಡಬಹುದು.

ಘಟಕ 3: ದೀರ್ಘ ಪರೀಕ್ಷೆಯ ಅನಂತರ ಈ ಘಟಕದ ಕುಂದು ಕೊರತೆಗಳು ಹೇಗಿರಬಹುದೆಂಬುದು ತಿಳಿಯುತ್ತದೆ. ಕಚ್ಚಾ ಸಾಮಗ್ರಿಯ ದಾಸ್ತಾನಿನ ಮೇಲೆ ನಿಯಂತ್ರಣವಿಲ್ಲ ದಿರುವುದು, ಇಲ್ಲವೇ ಗ್ರಾಹಕರಿಂದ ಪಾವತಿಯನ್ನು ಪಡೆ ಯುವಲ್ಲಿ ವಿಫಲವಾಗಿರವುದು. ತಾಂತ್ರಿಕ ಶೋಧನೆ ನಡಸಿ ಘಟಕಕ್ಕೆ ಬೇಕಾದ ಗರಿಷ್ಠ ಪ್ರಮಾಣದ ಕಚ್ಚಾ ಸಾಮಗ್ರಿಯ ದಾಸ್ತಾನನ್ನು ಗೊತ್ತುಮಾಡಿಕೊಳ್ಳಬಹುದು. ಸುಸ್ತಿದಾರರಾದ ಗ್ರಾಹಕರಿಂದ ಪಾವತಿ ಪಡೆಯಲು ಬ್ಯಾಂಕಿನ ನೆರವನ್ನು ಅಪೇಕ್ಷಿಸಬಹುದು. ಬ್ಯಾಂಕಿನ ಮಧ್ಯಸ್ಥಿಕೆಯಿಂದ ಸರ್ಕಾರಿ ಕ್ಷೇತ್ರದ ಘಟಕಗಳಿಂದ ವಿಶೇಷವಾಗಿ ಮತ್ತು ಇತರ ಸುಸ್ತಿದಾರರಿಂದ ಸಾಮಾನ್ಯವಾಗಿ ಬಾಕಿ ಪಾವತಿಯಾಗುತ್ತದೆ.

ಘಟಕ 4: ಆಳವಾದ ಅಭ್ಯಾಸದಿಂದ ಈ ಘಟಕದಲ್ಲಿ ರುವವರು ತಾಂತ್ರಿಕ ಪರಿಪೂರ್ಣತೆಯನ್ನು ಸಾಧಿಸಲು ಹೊರಟು ಆರ್ಥಿಕ ವಿಷಯವನ್ನು ನಿರ್ಲಕ್ಷಿಸಿರುವುದು ವ್ಯಕ್ತ ವಾಗುತ್ತದೆ. ಉತ್ಪಾದನೆಯ ಬಿಕರಿ ಬೆಲೆಯನ್ನು ಪರಿಷ್ಕರಿ ಸುವುದರಿಂದ ಅಗತ್ಯವಾದ ಫಲಿತಾಂಶ ಪಡೆಯಬಹುದು.

ಮೇಲೆ ಹೇಳಿರುವ ನಿದರ್ಶನಗಳು ಕೆಲವು ಮಾತ್ರ. ಸಮಸ್ಯೆಗಳು ಅನೇಕ. ಆದರೆ ಇವೆಲ್ಲವನ್ನೂ ಪ್ರತಿದಿನ ಬ್ಯಾಂಕು ಮತ್ತು ಘಟಕಗಳು ಪರಸ್ಪರ ವಿಶ್ವಾಸ ಮತ್ತು ಸಲಹೆಗಳಿಂದ ನಿವಾರಿಸಿಕೊಳ್ಳುತ್ತವೆ. ಈ ಪ್ರಕ್ರಿಯೆಯಿಂದಾಗಿ ಬ್ಯಾಂಕುಗಳು ಪ್ರತ್ಯೇಕ ಸಲಹಾ ವಿಭಾಗಗಳನ್ನು ತೆರೆಯು ವುದಕ್ಕೆ ಸ್ಫೂರ್ತಿ ದೊರಕಿದೆ. ಸಲಹಾ ವಿಭಾಗಗಳು ರೋಗ ಕಾರಣಗಳನ್ನು ಪತ್ತೆ ಹಚ್ಚಿ ಪರಿಹಾರಗಳನ್ನು ಸೂಚಿಸುತ್ತವೆ. ಅಗತ್ಯವಾದರೆ ಖಾಸಗಿ ಸಲಹೆಗಾರರಿಂದಲೂ ಸಲಹೆಗಳನ್ನು ಪಡೆಯಲಾಗುವುದು. ಸರ್ಕಾರವೂ ತನ್ನದೇ ಆದ ಸಲಹಾ ವಿಭಾಗಗಳನ್ನು ಹೊಂದಿದ್ದು ರೋಗಗ್ರಸ್ತ ಘಟಕಗಳಿಗೆ ಸಹಾಯ ಮಾಡಲು ತನ್ನದೇ ಆದ ಸಂಸ್ಥೆಗಳನ್ನು ಹುಟ್ಟು ಹಾಕುತ್ತಿದೆ.

ಶುಶ್ರೂಷೆ

ಈ ಎಲ್ಲ ಕಲಾಪದ ಅಂತಿಮ ಘಟ್ಟವೆಂದರೆ ಒಂದು ಕಾರ್ಯಕ್ರಮವನ್ನು ಸಿದ್ಧಪಡಿಸಿ ಅದನ್ನು ಅನುಷ್ಠಾನಕ್ಕೆ ತರುವುದು. ಬ್ಯಾಂಕಿಂಗ್ ಪರಿಭಾಷೆಯಲ್ಲಿ ಇದನ್ನು 'ಶುಶ್ರೂಷಾ ಕಾರ್ಯಕ್ರಮ' ಎಂದು ಕರೆಯುತ್ತಾರೆ. ದೀರ್ಘವಾದ ಮತ್ತು ಆಳವಾದ ಅಧ್ಯಯನದ ಅನಂತರವೇ ಶುಶ್ರೂಷಾ ಕಾರ್ಯಕ್ರಮವನ್ನು ಗೊತ್ತುಪಡಿಸಲಾಗುವುದು. ತಕ್ಕ ಉಪಕರಣಗಳು ಮತ್ತು ಸಹಾಯವನ್ನು ನೀಡಿ ಮತ್ತೆ ಘಟಕ ಲಾಭದಾಯಕವಾಗಿ ಮತ್ತು ನಿರಂತರವಾಗಿ ನಡೆಯು ವಂತೆ ಮಾಡುವುದೇ ಈ ಕಾರ್ಯಕ್ರಮದ ಸಾರ. ಉಪಕರಣ ಗಳು ಕೇವಲ ಆರ್ಥಿಕ ರೂಪದಲ್ಲಿರದೆ ತಾಂತ್ರಿಕ, ಆಧೋ ರಚನಾತ್ಮಕ, ಮತ್ತು ಮಾನವ ರೂಪದ್ದಾಗಿರಬಹುದು. ಸರ್ಕಾರ ಮತ್ತು ಇತರ ಸಂಸ್ಥೆಗಳಿಂದ ದೊರೆಯುವ ಎಲ್ಲ ಸಹಾಯವನ್ನೂ ಬಳಸಿಕೊಳ್ಳುವುದರ ಜೊತೆಗೆ ಘಟಕ ತನ್ನ ಸಾಧನ ಸಂಪತ್ತನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು. ಶುಶ್ರೂಷಾ ಕಾರ್ಯಕ್ರಮವನ್ನು ಗೊತ್ತುಪಡಿಸಿದ ಮೇಲೆ ಯಾವುದೇ ರೀತಿಯ ಸಹಾಯವನ್ನು ನೀಡಲು ಬ್ಯಾಂಕು ಗಳು ಹಿಂದೆಗೆಯುವುದಿಲ್ಲ. ತಮ್ಮ ಮಾಮೂಲಿ ಪರತ್ತು ಗಳಲ್ಲಿಯೂ ನಮ್ಯತೆಯನ್ನು ತೋರಿಸಲು ಬ್ಯಾಂಕುಗಳು ಸಿದ್ಧವಾಗಿರುತ್ತವೆ. ಆದರೂ ಈ ಕಾರ್ಯಕ್ರಮ ಜಾರಿಗೆ ಬಂದ ಮೇಲೆ ಘಟಕದ ಲೆಕ್ಕದ ವಿಷಯದಲ್ಲಿ ಮಾಮೂಲಿಗಿಂತ ಹೆಚ್ಚಿನ ಜಾಗರೂಕತೆಯನ್ನೂ ಎಚ್ಚರಿಕೆ ಯನ್ನೂ ಬ್ಯಾಂಕುಗಳು ತೋರಿಸುತ್ತವೆ. ಇದು ಒಂದೆಡೆ ಯಾದರೆ ಮತ್ತೊಂದೆಡೆ ಕೈಗಾರಿಕಾ ಘಟಕ ತನ್ನ ಎಲ್ಲ ವಿಭಾಗಗಳಿಂದ ಮಾಹಿತಿಯನ್ನು ಸಂಗ್ರಹಿಸಿ ತನ್ನ ಸ್ಥಿತಿಯ ಬಗ್ಗೆ ಅಂತರ ಅವಲೋಕನ ನಡೆಸಿ ತಾನು ಸರಿಯಾದ ದಾರಿಯಲ್ಲಿ ನಡೆಯುತ್ತಿದ್ದೇನೆಯೇ ಎಂಬುದನ್ನು ನಿರ್ಧರಿಸಿ ಕೊಳ್ಳಬೇಕು. ಶುಶ್ರೂಷಾ ಕಾರ್ಯಕ್ರಮದಲ್ಲಿ ಎರಡು ವಿಷಯಗಳನ್ನು ತಪ್ಪದೆ ನೆನೆಸಿಕೊಳ್ಳಬೇಕು:

1 ಗುರಿಯನ್ನು ಸಾಧಿಸಲು ಶುಶ್ರೂಷಾ ಕಾರ್ಯಕ್ರಮ ದಾರಿಯೇ ಹೊರತು ಅದೇ ಗುರಿಯಲ್ಲ. ಆದ್ದರಿಂದ ಈ ಕಾರ್ಯಕ್ರಮವನ್ನು ಅಕಾರಣವಾಗಿ ಲಂಬಿಸಬಾರದು. ಆರೋಗ್ಯ ಸ್ಥಿತಿಗೆ ಮುಟ್ಟಿಸುವುದಷ್ಟೇ ಶುಶ್ರೂಷೆಯ ಗುರಿ.

2 ಘಟಕ ಮಾಮೂಲು ಸ್ಥಿತಿಗೆ ಬಂದು ಆರೋಗ್ಯಪೂರ್ಣ ವಾಗಿ ಕೆಲಸ ಮಾಡುವುದೇ ಏಕೈಕ ಗುರಿಯಾಗಿರಬೇಕು. ಘಟಕ ನಿರಂತರವಾಗಿ ಅನುಕೂಲತಮ ಮಟ್ಟದಲ್ಲಿ ಉತ್ಪಾದನೆ ಮಾಡುವಂತೆ ನಡೆಸಿಕೊಳ್ಳಬೇಕು. ಇದು ಸಾಧ್ಯ ವಾಗುತ್ತಿರುವಾಗಲೇ ಅವಸರದಲ್ಲಿ ವಿಸ್ತರಣ ಕಾರ್ಯ ಕ್ರಮವನ್ನಾಗಲಿ ಹಣದ ದುರುಪಯೋಗವನ್ನಾಗಲಿ ಮಾಡು ವುದನ್ನು ನಿಲ್ಲಿಸಬೇಕು.

ಈ ರೀತಿಯ ಇತ್ಯಾತ್ಮಕವಾದ ಮಾರ್ಗದ ಅನುಸರಣೆ ಯಿಂದಾಗಿ ಅನೇಕ ಬ್ಯಾಂಕುಗಳಿಂದ ಅಸ್ವಸ್ಥ ಘಟಕಗಳು ಮಾಮೂಲು ಸ್ಥಿತಿಗೆ ಬಂದ ಯಶಪ್ರದ ಕಥೆಗಳು ಕೇಳಿ ಬರುತ್ತಿವೆ. ಅಸ್ವಸ್ಥ ಘಟಕಗಳ ಪುನರುಜ್ಜೀವನವನ್ನು ಕೂಲಂ ಕಷವಾಗಿ ಪರಿಶೀಲಿಸುವುದು ಈಗ ಬ್ಯಾಂಕುಗಳಲ್ಲಿ ಒಂದು ಮುಖ್ಯ ಕೆಲಸವಾಗಿದೆ. ಇದಕ್ಕಾಗಿಯೇ ಒಂದು ವಿಭಾಗವನ್ನು ತೆರೆಯಲು ಅವಕಾಶ ಒದಗಿದೆ.

ದೇಶದ ಉತ್ಪಾದನೆ ಮತ್ತು ಸಂಪತ್ತನ್ನು ಹೆಚ್ಚಿಸುವಂತೆ ಸಣ್ಣ ಕೈಗಾರಿಕಾ ಘಟಕಗಳ ವೈಯಕ್ತಿಕ ಹಿತಾಸಕ್ತಿಯನ್ನು ನೋಡಿಕೊಳ್ಳುತ್ತಿರುವ ಈ ಸಾಮೂಹಿಕ ಕಾರ್ಯ ವ್ಯವಸ್ಥೆ ಸ್ತುತ್ಯರ್ಹವಾದ್ದು.

ಸಣ್ಣ ಕೈಗಾರಿಕೆಗಳಿಗೆ ಬ್ಯಾಂಕು ನೆರವು: ಪುರಿ ಸಮಿತಿಯ ವರದಿ

ಗೋ. ದೇ. ನಿರ್ಮಲಕುಮಾರ

ಸಣ್ಣ ಗಾತ್ರದ ಕೈಗಾರಿಕೆಗಳಿಗೆ ಬ್ಯಾಂಕುಗಳು ಹಣಕಾಸಿನ ನೆರವು ಒದಗಿಸುವಲ್ಲಿ ಇರುವ ಸಮಸ್ಯೆಗಳನ್ನು ಅಧ್ಯಯನ ಮಾಡಿ ಆ ಸಮಸ್ಯೆಗಳ ಪರಿಹಾರಕ್ಕೆ ಶಿಫಾರಸುಗಳನ್ನು ನೀಡಬೇಕೆಂದು ಭಾರತ ಸರಕಾರ 'ಪುರಿ ಸಮಿತಿ'ಯನ್ನು 1975 ರಲ್ಲಿ ರಚಿಸಿತು. ಸಮಿತಿ ಸಂಬಂಧಪಟ್ಟ ಹಲವಾರು ಅಂಶಗಳ ಅಧ್ಯಯನ ನಡೆಸಿ, ಕೆಲವು ಕ್ರಮಗಳನ್ನು ಸೂಚಿಸಿತು. ಸಣ್ಣ ಕೈಗಾರಿಕೆಗಳಿಗೆ ಬ್ಯಾಂಕುಗಳು ಸುಲಭವಾಗಿ ಸಾಲ ನೀಡಲು ಇದ್ದ ಕೆಲವು ಅಡೆ-ತಡೆಗಳನ್ನು ನಿವಾರಿಸುವಲ್ಲಿ ಈ ಸಲಹೆಗಳು ಬಹಳಷ್ಟು ಸಹಕಾರಿಯಾಗಿವೆ. ರಿಜರ್ವ್ ಬ್ಯಾಂಕಿನ ಸೂಚನೆಯ ಮೇರೆಗೆ ವಾಣಿಜ್ಯ ಬ್ಯಾಂಕುಗಳು ಈ ಮುಂದಿನ ಅಂಶಗಳ ಬಗ್ಗೆ ಸಮಿತಿಯ ಸಲಹೆಗಳನ್ನು ಕಾರ್ಯಗತಗೊಳಿಸುತ್ತಿವೆ: 1 ಅರ್ಜಿಗಳು ಮತ್ತು ಮೂಲ್ಯಾಂಕನ ಫಾರಮ್‌ಗಳ ಪ್ರಮಾಣೀಕರಣ,2 ಸೀಮಾಂತ (ಮಾರ್ಜಿನ್), 3 ಪೂರಕ ಆಧಾರಗಳು, 4 ಮರುಪಾವತಿ ಕಾರ್ಯಕ್ರಮ ಮತ್ತು 5 ಸಾಲಗಳನ್ನು ಮಂಜೂರು ಮಾಡಲು ಬ್ಯಾಂಕುಗಳ ಶಾಖಾಧಿಕಾರಿಗಳಿಗೆ ತಮ್ಮ ವ್ಯಾಪ್ತಿಯಲ್ಲಿಯೇ ಇರುವ ಅಧಿಕಾರ.

ದೇಶದಲ್ಲಿನ ರಾಜ್ಯ ಹಣಕಾಸು ಸಂಸ್ಥೆಗಳು ಮತ್ತು ವಾಣಿಜ್ಯ ಬ್ಯಾಂಕುಗಳ 30,000 ಕ್ಕೂ ಹೆಚ್ಚು ಶಾಖೆಗಳ ಕಾರ್ಯವಿಧಾನದಲ್ಲಿ ಏಕರೂಪತೆಯನ್ನು ತರುವ ಉದ್ದೇಶದಿಂದ ಸಮಿತಿ ಸರಳವಾದ ಆದರೆ ವ್ಯಾಪಕವಾದ ಎರಡು ಶ್ರೇಣಿಯ ಅರ್ಜಿ ಫಾರಮ್‌ಗಳನ್ನು ರೂಪಿಸಿದೆ. ಒಂದು, ರೂ. 25,000 ವರೆಗೆ ಪಡೆಯುವ ಸಾಲಕ್ಕಾಗಿ. ಮತ್ತೊಂದು, ರೂ. 25,000 ಇಂದ ರೂ. 2 ಲಕ್ಷದ ವರೆಗೆ ಪಡೆಯುವ ಸಾಲಕ್ಕಾಗಿ. ಈ ಫಾರಮ್‌ಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿನ ಸಾಲ ವಿಭಾಗದ ಮ್ಯಾನೇಜರುಗಳು ಕೂಡ ಉಪಯೋಗಿಸಬೇಕು. ಬ್ಯಾಂಕುಗಳು ಸಣ್ಣ ಘಟಕಗಳಿಗೆ ಸಾಲ ಮಂಜೂರು ಮಾಡುವಾಗ, ಸೀಮಾಂತ ಹಣದ (ಎಂದರೆ ಘಟಕಗಳೇ ಪೂರೈಸಬೇಕಾದ ಹಣದ) ಪ್ರಮಾಣದ ಬಗ್ಗೆ ಒತ್ತಾಯ ಮಾಡಕೂಡದೆಂದೂ, ಕನಿಷ್ಠ ಸೀಮಾಂತವನ್ನು ಬದಲಾಯಿಸುವಂತೆ ಇರಬೇಕೆಂದೂ ಯಾವುದೇ ಅರ್ಹ ಯೋಜನೆಯನ್ನು ವಿಶೇಷವಾಗಿ ತಾಂತ್ರಿಕ ಪರಿಣತಿಯುಳ್ಳ ವ್ಯಕ್ತಿಗಳಿಗೆ ಸಂಬಂಧಿಸಿದಂತೆ, ಬೇರೆಲ್ಲ ವಿಷಯುಗಳು ಸರಿ ಇದ್ದು, ಸೀಮಾಂತ ಮಾತ್ರ ಸಾಲದೆಂಬ ಕಾರಣಕ್ಕಾಗಿ ತಳ್ಳಿಹಾಕಬಾರದೆಂದೂ ಸಮಿತಿ ತಿಳಿಸಿದೆ.

ಯೋಗ್ಯ ಘಟಕಗಳ ಪ್ರಸಂಗದಲ್ಲಿ, ಉದ್ಯಮಿಗಳು ತಮ್ಮ ಪಾಲನ್ನು ಕೆಲವು ಸಮಯದ ಅನಂತರ ಅಗತ್ಯ ಬಿದ್ದಂತೆ ತೊಡಗಿಸಲು ಬ್ಯಾಂಕುಗಳು ಅನುಮತಿ ನೀಡಬೇಕು. ಅದೇ ರೀತಿ ಪೂರಕ ಆಧಾರದ ಕೊರತೆಯ ಕಾರಣದಿಂದ ಯಾವುದೇ ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಯೋಗ್ಯವಾದ ಯೋಜನೆಯನ್ನು ನಿರಾಕರಿಸಬಾರದೆಂದೂ, ಬ್ಯಾಂಕುಗಳು ಕೇವಲ ಸಂಪ್ರದಾಯಕ್ಕಾಗಿ ಈ ಆಧಾರಗಳನ್ನು ಕೊಡಲೇಬೇಕೆಂದು ಒತ್ತಾಯ ಮಾಡಬಾರದೆಂದೂ ಸಮಿತಿ ಶಿಫಾರಸು ಮಾಡಿದೆ. ಒಂದು ವೇಳೆ ಸ್ಥಿರ ಸ್ವತ್ತನ್ನೂ ಪೂರಕ ಆಧಾರವಾಗಿ ಕೊಟ್ಟಲ್ಲಿ ಅದು ಸಾಮ್ಯ (ಈಕ್ವಿಟಬಲ್) ಅಡಮಾನದ ರೂಪದಲ್ಲೇ ಇರಬೇಕು ಮತ್ತು ನೋಂದಾಯಿತ (ರಿಜಿಸ್ಟರ್ಡ್) ಅಡಮಾನವಾಗಿ ಮಾಡುವುದನ್ನು ಆದಷ್ಟೂ ಕಡಮೆ ಮಾಡಬೇಕು. ದೀರ್ಘಾವಧಿ ಸಾಲದ ಮರುಪಾವತಿ ಕಾರ್ಯವನ್ನು ಕೇವಲ ಸಾಂದರ್ಭಿಕವಾಗಿ ನಿರ್ಧರಿಸಬಾರದು. ಬದಲಾಗಿ, ಸಾಲಗಾರರ ಆವಶ್ಯಕತೆಗಳನ್ನು ಪೂರೈಸಿದ ಅನಂತರ ಘಟಕ ಎಷ್ಟು ಹೆಚ್ಚುವರಿ ಉತ್ಪನ್ನ ಮಾಡುವ ಸಾಮರ್ಥ್ಯ ಹೊಂದಿದೆಯೆನ್ನುವುದನ್ನು ಅವಲಂಬಿಸಿರಬೇಕು ಎಂಬುದು ಸಮಿತಿಯ ಮತ್ತೊಂದು ಶಿಫಾರಸು. ವಿದ್ಯುತ್ ಕಡಿತ, ಆರ್ಥಿಕ ಹಿಂಜರಿತ, ಪ್ರಾಕೃತಿಕ ವಿಕೋಪ ಮುಂತಾದ ಸಂದರ್ಭಗಳಲ್ಲಿ ಸಾಲ ಮರುಪಾವತಿಯ ಬಗ್ಗೆ ಪುನಃ ಪರಿಶೀಲನೆ ನಡೆಸಿ, ಅಗತ್ಯವಾದ ಕಾಲಾವಕಾಶ ನೀಡಬೇಕು. ಪಾವತಿ ತಡೆಹಿಡಿದ ಅವಧಿಯಲ್ಲಿನ ಸಾಲದ ಮೇಲಿನ ಬಡ್ಡಿಯನ್ನು ಘಟಕ ಹೆಚ್ಚುವರಿ ಉತ್ಪನ್ನ ಮಾಡಲು ಆರಂಭಿಸಿದ ಅನಂತರ, ಸುಲಭ ಕಂತುಗಳಲ್ಲಿ ಚಕ್ರಬಡ್ಡಿ ವಿಧಿಸದೆಯೇ ವಸೂಲಿ ಮಾಡಬೇಕು. ಬ್ಯಾಂಕುಗಳಿಗೆ ಸಾಲ ಮಂಜೂರು ಮಾಡುವ ಬಗ್ಗೆ ಶಾಖಾ ಮ್ಯಾನೇಜರುಗಳಿಗೆ ಇರುವ ವಿವೇಚನಾಧಿಕಾರವನ್ನು ನಿಗದಿ ಮಾಡುವ ವಿಧಾನವನ್ನು ಪುನರ್ವಿಮರ್ಶಿಸಬೇಕೆಂದು ಸಮಿತಿ ಸೂಚಿಸಿದೆ. ಪ್ರತಿಯೊಬ್ಬ ಶಾಖಾ ಮ್ಯಾನೇಜರರೂ ತಮ್ಮ ಶಾಖೆಯ ವ್ಯಾಪ್ತಿಗೊಳಪಡುವ ಪ್ರದೇಶದಲ್ಲಿನ ಅರ್ಜಿಗಳ ಸೇ. 60ರಿಂದ 80ರಷ್ಟು ಸಾಲಗಳನ್ನು ಮಂಜೂರು ಮಾಡಲು ಅಧಿಕಾರ ಹೊಂದಿರಬೇಕೆಂಬುದು ಸಮಿತಿಯ ಇನ್ನೊಂದು ಸೂಚನೆ.

ತಾಂಬೆ ಮತ್ತು ಪುರಿ ಸಮಿತಿಗಳ ಸೂಚನೆಗಳನ್ನು ಭಾರತ ಸರ್ಕಾರ ಮತ್ತು ರಿಜರ್ವ್ ಬ್ಯಾಂಕುಗಳು ಒಪ್ಪಿ, ಬ್ಯಾಂಕುಗಳಿಗೆ ಅವುಗಳನ್ನು ಅನುಸರಿಸಲು ಆಜ್ಞೆ ನೀಡಿವೆ.

ಅತಿ ಸಣ್ಣ ಘಟಕಗಳಿಗೆ ಬ್ಯಾಂಕು ನೆರವು: ತಾಂಬೆ ಸಮಿತಿಯ ವರದಿ

ಗೋ. ದೇ. ನಿರ್ಮಲಕುಮಾರ

ಸರ್ಕಾರದ ಉದ್ಘೋಷಿತ ಗುರಿ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸಮಾನತೆ. ಇವನ್ನು ಸಾಧಿಸುವುದಕ್ಕಾಗಿ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತ ನಡೆದಿದೆ. ಇವುಗಳಲ್ಲಿ ಪ್ರಮುಖ ಸಾಧನೆಗಳು ಪಂಚವಾರ್ಷಿಕ ಯೋಜನೆಗಳು ಮತ್ತು ಬ್ಯಾಂಕುಗಳ ರಾಷ್ಟ್ರೀಕರಣ. ಬ್ಯಾಂಕುಗಳು ರಾಷ್ಟ್ರೀಕರಣಗೊಂಡು ಒಂದು ದಶಕದ ಮೇಲೆ ಆದಾಗ್ಯೂ ಸರ್ಕಾರ ಮತ್ತು ಬಡಜನತೆ ಅವುಗಳಿಂದ ನಿರೀಕ್ಷಿಸಿದಷ್ಟು ಮಹತ್ಸಾಧನೆಯನ್ನೇನೂ ಮಾಡಿಲ್ಲವೆಂದೇ ತೋರುತ್ತದೆ. ಆದರೆ ಆರ್ಥಿಕ ಅಸಮಾನತೆಯನ್ನು ನೀಗಿಸುವುದರಲ್ಲಿ ಬ್ಯಾಂಕುಗಳ ಪಾತ್ರ ಮಹತ್ವದ್ದಾದರೂ ಅವುಗಳಿಗೆ ತಮ್ಮದೇ ಆದ ಪರಿಮಿತಿ ಇದೆ.

ಸಣ್ಣ ಕೈಗಾರಿಕಾ ವಲಯವನ್ನೇ ನಾವು ತೆಗೆದುಕೊಂಡರೆ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ಈ ಆದ್ಯತೆಯ ವಲಯಕ್ಕೆ ದೊಡ್ಡ ಪ್ರಮಾಣದಲ್ಲಿ ಹಣದ ನೆರವು ನೀಡಿವೆಯೆಂಬುದು ನಿಜ. ಆದರೆ ಅವುಗಳ ಗಮನ ಸಮಾಜದ ಮೇಲಣ ವರ್ಗದ ಪ್ರತಿಷ್ಠಿತ ವ್ಯಕ್ತಿಗಳಿಂದ ನಡೆಸಲ್ಪಡುವ, ಸಾಮಾನ್ಯವಾಗಿ ದೊಡ್ಡ ದೊಡ್ಡ ಕೈಗಾರಿಕಾ ಘಟಕಗಳೊಡನೆ ಸಂಬಂಧ ಇರಿಸಿಕೊಂಡಿರುವ ಮತ್ತು ಹೆಚ್ಚು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ನೆಲೆಗೊಂಡಿರುವ ಆಧುನಿಕ ಸಣ್ಣ ಕೈಗಾರಿಕೆಗಳಿಗೆ ಬಹಳಷ್ಟು ಸೀಮಿತವಾಗಿತ್ತು. ಬಹಳ ಮಟ್ಟಿಗೆ ಅಸಂಘಟಿತವಾಗಿರುವ ಮತ್ತು ನಿರ್ಲಕ್ಷಿಸಲ್ಪಟ್ಟ ಅತಿ ಸಣ್ಣ ಕೈಗಾರಿಕಾ ವಲಯ, ಗೃಹ ಕೈಗಾರಿಕಾ ವಲಯ, ನೇಕಾರರು, ಕರಕುಶಲ ಕಾರ್ಮಿಕರು ಮತ್ತು ಇತರ ಶ್ರಮಿಕರು ನಿರೀಕ್ಷಿಸಿದಷ್ಟು ಪಾಲನ್ನು ತಡೆಯಲಿಲ್ಲ. ಈ ಉಪವಲಯಗಳು ನಮ್ಮ ದೇಶದ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಬಹು ಮಹತ್ವದ ಪಾತ್ರ ಹೊಂದಿವೆ. ಆರನೆಯ ಯೋಜನೆಯ ಅವಧಿಯಲ್ಲಿ ಸಣ್ಣ ಕೈಗಾರಿಕಾ ವಲಯದಲ್ಲಿ ಒಟ್ಟು 130 ಲಕ್ಷ ಜನರಿಗೆ ಉದ್ಯೋಗ ಒದಗಿಸುವ ನಿರೀಕ್ಷೆಯಲ್ಲಿ, 100 ಲಕ್ಷ ಜನರಿಗೆ ಈ ಉಪ ವಲಯಗಳಲ್ಲಿ ಉದ್ಯೋಗ ಕಲ್ಪಿಸುವ ಅಂದಾಜು ಮಾಡಲಾಗಿದೆ. ಆದರೆ ಈ ದಿಕ್ಕಿನಲ್ಲಿ ಬ್ಯಾಂಕುಗಳು ಹರಿಸುತ್ತಿರುವ ಸಾಲದ ಪ್ರಮಾಣ ಅತ್ಯಲ್ಪ.

ಪರಿಗಣನಾಂಶಗಳು

ಈ ಒಂದು ಅಸಾಂಗತ್ಯದ ಹಿನ್ನೆಲೆಯಲ್ಲಿ, 1978ರ ಅಕ್ಟೋಬರ್ ತಿಂಗಳಿನಲ್ಲಿ ಅಂದಿನ ಪ್ರಧಾನ ಮಂತ್ರಿ ಮೊರಾರ್ಜಿ ದೇಸಾಯಿಯವರು ಆದ್ಯತೆಯ ಮತ್ತು ನಿರ್ಲಕ್ಷಿತ ವಲಯಗಳಿಗೆ ಸಂಬಂಧಿಸಿದಂತೆ ಐದು ಸಮಿತಿಗಳನ್ನು ನಿಯಮಿಸಿದರು. ಇವುಗಳಲ್ಲಿ ಅತ್ಯಂತ ಮುಖ್ಯವಾದ್ದು 'ತಾಂಬೆ ಸಮಿತಿ'. ಸರ್ಕಾರದ ಆದೇಶಕ್ಕನುಗುಣವಾಗಿ ಈ ಸಮಿತಿ ಈ ಮುಂದಿನ ಶಿಫಾರಸಗಳನ್ನು ಮಾಡಿತು:

1 ಅತಿ ಸಣ್ಣ ಗಾತ್ರದ ಕೈಗಾರಿಕೆಗಳು, ಗೃಹ ಕೈಗಾರಿಕೆಗಳು, ಅಸಂಘಟಿತ ನೇಕಾರರು, ಕರಕುಶಲಗಾರರು ಮುಂತಾದವರಿಗೆ ವ್ಯವಸ್ಥಿತವಾಗಿ ಮತ್ತು ಅಗತ್ಯವಾದಷ್ಟು ಆರ್ಥಿಕ ನೆರವನ್ನು ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ಕೊಡಿಸಲು ಕ್ರಮಗಳನ್ನು ರೂಪಿಸುವುದು,

2 ಮೂಲ ಬಂಡವಾಳ, ಅಂದರೆ ಉದ್ಯಮಿಗಳ ಸ್ವಂತ ಹಣದ (ಮಾರ್ಜಿನ್) ಬಗೆಗಿನ ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದು,

3 ಜಿಲ್ಲಾ ಕೈಗಾರಿಕೆಗಳ ಕೇಂದ್ರಗಳಿಗೆ (ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಸೆಂಟರ್) ಸಂಬಂಧಿಸಿದಂತೆ ಬ್ಯಾಂಕುಗಳಿಂದ ನಿಯೋಜಿತರಾದ ಅಧಿಕಾರಿಗಳ ಪಾತ್ರದ ಬಗ್ಗೆ ಖಚಿತವಾದ ವಿವರಣೆ ನೀಡುವುದು.

ಈ ಸಮಿತಿಯ ವರದಿಯಲ್ಲಿ ಹಲವಾರು ವ್ಯಾಪಕ ಸಲಹೆಗಳಿವೆ. ಅವುಗಳಲ್ಲಿ ಕೆಲವನ್ನು ಮಾತ್ರ, ಇಲ್ಲಿ ವಿವರಿಸಲಾಗಿದೆ,

ಶಿಫಾರಸುಗಳು

ಒಂದು ಗ್ರಾಮ ಕೈಗಾರಿಕೆ ಯಾವುದು ಎಂಬುದರ ಬಗ್ಗೆ ಪ್ರಥಮ ಬಾರಿಗೆ ವ್ಯಾಖ್ಯೆ ನೀಡುವ ಪ್ರಯತ್ನ ಇಲ್ಲಿ

ನಡೆದಿದೆ. ತಾಂಬೆ ಸಮಿತಿಯ ಪ್ರಕಾರ ಒಂದು ಗ್ರಾಮ ಕೈಗಾರಿಕೆ ಎಂದರೆ, ಸ್ಥಳೀಯವಾಗಿ ಒದಗುವ ಕಚ್ಚಾ ಸಾಮಗ್ರಿ ಮತ್ತು ಮಾನವ ಸಂಪನ್ಮೂಲಗಳನ್ನು ಬಳಸಿಕೊಂಡು ತನ್ನ ಸಂಪೂರ್ಣ ಸಾಲದ ಆವಶ್ಯಕತೆ ಇಪ್ಪತ್ತೈದು ಸಾವಿರ ರೂಪಾಯಿಗಳ ಒಳಗೆ ಇರುವ ಒಂದು ಕೈಗಾರಿಕಾ ಘಟಕ.

ಇಂಥ ಒಂದು ಘಟಕ ಐವತ್ತು ಸಾವಿರಕ್ಕೂ ಕಡಿಮೆ (1971ರ ಜನಗಣತಿ) ಜನಸಂಖ್ಯೆಯಿರುವ ಹಳ್ಳಿ ಮತ್ತು ಪಟ್ಟಣದಲ್ಲಿರಬೇಕು. (ಈ ಘಟಕ ಒಬ್ಬ ಕರುಕಶಲಗಾರನದಾಗಿದ್ದರೆ, ಜನಸಂಖ್ಯೆಗೆ ಸಂಬಂಧಿಸಿದ ನಿರ್ಬಂಧವನ್ನು ತೆಗೆದು ಹಾಕಲಾಗಿದೆ.) ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ಈ ತೆರನಾದ ಕೈಗಾರಿಕಾ ಘಟಕಗಳಿಗೆ ಧನ ಸಹಾಯ ಮಾಡಲು ವಿಶಿಷ್ಟವಾದ ಒಂದು ವಿಧಾನವನ್ನು ತಾಂಬೆ ಸಮಿತಿ ಸಲಹೆ ಮಾಡಿದೆ. ಇದಕ್ಕೆ 'ಕಾಂಪೊಸಿಟ್ ಟರ್ಮ್ ಲೋನ್' ಎಂದು ನಾಮಕರಣ ಮಾಡಲಾಗಿದೆ. ಈ ಸಲಹೆಯ ಮೇರೆಗೆ ಒಂದು ಗ್ರಾಮ ಕೈಗಾರಿಕೆಗೆ ಇಪ್ಪತ್ತೈದು ಸಾವಿರದ ವರೆಗೆ ಸೇಕಡ ನೂರರಷ್ಟು ಸಾಲವನ್ನು ಅದು ದಿನನಿತ್ಯದ ಬಳಕೆಗಾಗಲಿ, ಅಥವಾ ಯಂತ್ರ ಮತ್ತಿತರ ಉಪಕರಣಗಳನ್ನು ಖರೀದಿಸುವುದಕ್ಕಾಗಲಿ ಬ್ಯಾಂಕುಗಳು ಮಂಜೂರು ಮಾಡಬೇಕು. ಇಂಥ ಸಾಲಗಳು ವಿತರಣೆಯ ದಿನದಿಂದ 12–18 ತಿಂಗಳ ಅವಧಿಯ ವರೆಗೆ ಮರು ಪಾವತಿಯಿಂದ ವಿನಾಯಿತಿ ಪಡೆದಿರಬೇಕು; ಮತ್ತು ಮರುಪಾವತಿಯ ಒಟ್ಟು ಅವಧಿ 7ರಿಂದ 10 ವರ್ಷಗಳಿರಬೇಕು. ಬಡ್ಡಿ ದರ ಹಿಂದುಳಿದ ಪ್ರದೇಶಗಳಲ್ಲಿ ಸೇ. 9½ ಮತ್ತು ಇತರ ಪ್ರದೇಶಗಳಲ್ಲಿ ಸೇ. 11ರಷ್ಟಿರಬೇಕು. ಇದರ ಇನ್ನೊಂದು ವೈಶಿಷ್ಟ್ಯವೆಂದರೆ, ಸಾಲ ಮಂಜೂರಾತಿಯ ಷರತ್ತುಗಳಲ್ಲಿ ಸಾಲಗಾರರ ತುರ್ತಾದ ಮತ್ತು ಬಳಕೆಯ ಆವಶ್ಯಕತೆಗಳಿಗೆ ಒಟ್ಟು ಸಾಲದ ಮೊಬಲಗಿನ ಸೇ. 10–20 ರಷ್ಟು ಹೆಚ್ಚು ನೆರವು ನೀಡಲು ಬ್ಯಾಂಕುಗಳ ಶಾಖಾಧಿಕಾರಿಗಳಿಗೆ ಅಧಿಕಾರವಿರಬೇಕು.

5 ಲಕ್ಷ ಉದ್ಯೋಗಾವಕಾಶ ಕಲ್ಪಿಸುವ ಕಾರ್ಯಕ್ರಮದನ್ವಯ 1973ರಲ್ಲಿ ಕೇಂದ್ರ ಸರ್ಕಾರ ಆರಂಭಿಸಿದ ಮೂಲ ಬಂಡವಾಳ ಅಥವಾ ಮಾರ್ಜಿನ್ ಹಣದ ಯೋಜನೆಯ ವಿಷಯದಲ್ಲಿ ಸಮಿತಿ ನಿಗದಿಯಾದ ಪ್ರಮಾಣ ಕನಿಷ್ಠ ರೂ. 5,000 ಮತ್ತು ಗರಿಷ್ಠ ರೂ.50,000 ಇರಬೇಕೆಂದೂ ಅದು ಯೋಜನೆಯ ಒಟ್ಟು ವೆಚ್ಚದ ಸೇ.25ರಷ್ಟಿರಬೇಕೆಂದೂ ಹಣ ವಿತರಣೆ ಮಾಡಲು ಬ್ಯಾಂಕುಗಳು ಸರ್ಕಾರದ ಮಧ್ಯವರ್ತಿಗಳಾಗಿ ಕಾರ್ಯ ನಿರ್ವಹಿಸಬೇಕೆಂದೂ ಶಿಫಾರಸು ಮಾಡಿದೆ.

ಜಿಲ್ಲಾ ಕೈಗಾರಿಕಾ ಕೇಂದ್ರಗಳು ಜಿಲ್ಲೆಯ ಒಟ್ಟಾರೆ ಕೈಗಾರಿಕಾ ಬೆಳವಣಿಗೆಯ ಕೇಂದ್ರ ಸ್ಥಾನಗಳು. ಬ್ಯಾಂಕುಗಳಿಂದ ಈ ಕೇಂದ್ರಗಳಿಗೆ ಸಾಲ ವಿಭಾಗದ ಮ್ಯಾನೇಜರುಗಳಾಗಿ ಕಾರ್ಯ ನಿರ್ವಹಿಸಲು ಕೆಲವು ಅಧಿಕಾರಿಗಳ ಸೇವೆಯನ್ನು ಎರವಲು ನೀಡಲಾಗಿದ್ದು, ಅವರ ಪಾತ್ರ ಅತ್ಯಂತ ಮಹತ್ವಪೂರ್ಣದ್ದಾಗಿದೆ. ಏಕೆಂದರೆ, ಉದ್ಯಮಿಗಳು ಬ್ಯಾಂಕು ಮತ್ತಿತರ ಹಣಕಾಸು ಸಂಸ್ಥೆಗಳಿಂದ ಸಕಾಲದಲ್ಲಿ ಸರಿಯಾದ ಪ್ರಮಾಣದಲ್ಲಿ ಯೋಗ್ಯ ಸ್ವರೂಪದ ಸಾಲಗಳನ್ನು ಪಡೆಯಲು ಅಗತ್ಯವಾದ ಎಲ್ಲ ಮಾರ್ಗದರ್ಶನ, ನೆರವು ಮತ್ತು ಪ್ರೋತ್ಸಾಹಗಳನ್ನು ಈ ಅಧಿಕಾರಿಗಳು ನೀಡಬೇಕು. ಸಾಲದ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಅವಕಾಶವಾಗುವಂತೆ ಶಾಖಾ ಮ್ಯಾನೇಜರುಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕೆಂದೂ ಜಿಲ್ಲಾ ಉದ್ಯಮ ಕೇಂದ್ರಗಳು ಕಳುಹಿಸಿದ ಅರ್ಜಿಗಳು ಅಲ್ಲೇ ಸಾಲ ವಿಭಾಗದ ಮ್ಯಾನೇಜರುಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಅನುಭವಿ ಅಧಿಕಾರಿಗಳಿಂದ ಆಗಲೇ ಪರಿಶೀಲಿಸಲ್ಪಟ್ಟಿರುವುದರಿಂದ ಮತ್ತೆ ಬ್ಯಾಂಕುಗಳಲ್ಲಿ ಅವುಗಳ ವಿವರವಾದ ಅಧ್ಯಯನ ಅನಗತ್ಯವೆಂದೂ ಶಿಫಾರಸು ಮಾಡಿದೆ.

ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ಅತಿ ಸಣ್ಣ ಘಟಕಗಳಿಗೆ, ಗೃಹಕೈಗಾರಿಕೆ ಹಾಗೂ ಕುಟೀರೋದ್ಯಮಗಳಿಗೆ ನೆರವು ನೀಡಲು ಹೇಗೆ ಹೆಚ್ಚಿನ ಅವಕಾಶ ಕಲ್ಪಿಸಬಹುದೆಂಬುದನ್ನು ಸಮಿತಿ ಪರಿಶೀಲಿಸಿದೆ. ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿಯನ್ನು ಒದಗಿಸುವುದರಿಂದ ಹಿಡಿದು ಸಿದ್ಧ ವಸ್ತುಗಳ ಮಾರಾಟಕ್ಕೆ ವ್ಯವಸ್ಥೆ ಮಾಡುವವರೆಗೆ ಒಂದು ಸಮಗ್ರ ಕಾರ್ಯಕ್ರಮವನ್ನು ಕೈಗೊಳ್ಳುವುದು ಅವಶ್ಯವೆಂದು ಸಮಿತಿ ಅಭಿಪ್ರಾಯಪಟ್ಟಿದೆ. ಬ್ಯಾಂಕುಗಳು ಈ ಕ್ಷೇತ್ರಕ್ಕೆ ಸಾಲ ನೀಡುವುದರ ಉದ್ದೇಶವೆಂದರೆ ಕಸಬುದಾರರಿಗೆ ಪೂರ್ಣ ಉದ್ಯೋಗ ಒದಗಿಸುವುದು, ಅವರ ಜೀವನ ಮಟ್ಟವನ್ನು ಎತ್ತರಿಸುವುದು ಮತ್ತು ಅವರಿಗೆ ಅಗತ್ಯ ವಸ್ತುಗಳನ್ನು ಒದಗಿಸಿ ಸ್ವಾವಲಂಬಿಗಳಾಗುವಂತೆ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು. ಈ ಸಮಗ್ರ ವಿಧಾನವನ್ನು ಸೂಚಿಸುವಾಗ ಸಮಿತಿ ಈ ಕ್ಷೇತ್ರದ ಉತ್ಪನ್ನಗಳಿಗೆ ಮಾರಾಟ ಸುಲಭವಾಗುವಂತೆ ಮಾಡಲು ಯುಕ್ತ ಮಾರುಕಟ್ಟೆ ಸಂಸ್ಥೆಗಳು ರೂಪುಗೊಳ್ಳಬೇಕೆಂದು ಅಭಿಪ್ರಾಯಪಟ್ಟಿದೆ. ಗ್ರಾಮೀಣ ಕೈಗಾರಿಕಾ ಮಾರುಕಟ್ಟೆ ಸಂಸ್ಥೆಗಳೆಂದು ಕರೆಯಲ್ಪಡುವ ಈ ಸಂಸ್ಥೆಗಳು ತಮ್ಮ ಕಾರ್ಯ ನಿರ್ವಹಣೆಗಾಗಿ ಬ್ಯಾಂಕುಗಳಿಂದ ನೆರವು ಪಡೆಯಬಹುದು. ಕಚ್ಚಾ ಸಾಮಗ್ರಿ, ತಾಂತ್ರಿಕ ನೆರವು ಮತ್ತು ಮಾರಾಟಕ್ಕೆ ಮಾರುಕಟ್ಟೆ ಸಂಸ್ಥೆ ನೆರವು ನೀಡಿದರೆ, ಕಸಬುದಾರರಿಗೆ ನೇರವಾಗಿ ಅಥವಾ ಸೂಕ್ತ ಕಂಡ ಕಡೆ ಗ್ರಾಮೀಣ ಕೈಗಾರಿಕಾ ಮಾರುಕಟ್ಟೆ ಸಂಸ್ಥೆಗಳ ಮೂಲಕ ಉತ್ಪಾದನ ಸಾಲ ಸೌಲಭ್ಯಗಳನ್ನು ಬ್ಯಾಂಕುಗಳು ಒದಗಿಸಬಹುದು. ಈ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಗ್ರಾಮೀಣ ಕೈಗಾರಿಕಾ ಮಾರುಕಟ್ಟೆ ಸಂಸ್ಥೆ ಜಿಲ್ಲಾ ಉದ್ಯಮ ಕೇಂದ್ರಗಳು ಮತ್ತು ಬ್ಯಾಂಕುಗಳಂಥ ಸಂಸ್ಥೆಗಳ ಸಂಘಟಿತ ಪ್ರಯತ್ನ ಅವಶ್ಯವೆಂಬುದು ಸಮಿತಿಯ ಅಭಿಪ್ರಾಯ.

ಹಣವಿದ್ದಲ್ಲೂ ಹಾಸ್ಯ

ಎಚ್. ಎಸ್. ಕೃಷ್ಣ

ಹಣ ಸೇರುವಲ್ಲಿ ಹಾಸ್ಯಕ್ಕೆ ಸ್ಥಳವಿಲ್ಲವೆನ್ನುವುದು ಕೇವಲ ಅಭಿಪ್ರಾಯ

ಹಣ ಸೇರುವಲ್ಲಿ ಹಾಸ್ಯಕ್ಕೆ ಸ್ಥಳವಿಲ್ಲವೆನ್ನುವುದು ಕೇವಲ ಅಭಿಪ್ರಾಯ. ಈ ಮಾತನ್ನು ನಂಬದಿದ್ದರೆ ನೀವು ಬ್ಯಾಂಕಿನ ಕೌಂಟರ್‌ಗೆ ಬಂದು ನನ್ನ ಪಕ್ಕದಲ್ಲಿ ಕುಳಿತುಕೊಳ್ಳಿ. ಅಲ್ಲಿ ನಡೆಯುವ ಸ್ವಾರಸ್ಯಗಳನ್ನು ನೋಡಿದಾಗ ಹಣಕಾಸಿನ ವ್ಯವಹಾರದಲ್ಲೂ ಹಾಸ್ಯ ಇದೆ ಎಂದು ಖಂಡಿತ ಒಪ್ಪುತ್ತೀರಿ. ಇಷ್ಟಾಗಿ ನಾವು ದಿನನಿತ್ಯ ಎದುರುಗೊಳ್ಳುವುದು ಅನೇಕ ರೀತಿಯ ಜನರನ್ನು. ಅನುಭವ ಕೊಡುವ ನಗು ಶ್ರೇಷ್ಠ ಹಾಸ್ಯ.

ಬ್ಯಾಂಕಿನಲ್ಲಿ ಕೊಡುವುದು ಕಳೆಯುವುದು ಬಿಟ್ಟರೆ ಇನ್ನಾವುದಕ್ಕೂ ಅವಕಾಶವಿಲ್ಲವೆಂದು ಅನೇಕರ ಖಚಿತಾಭಿಪ್ರಾಯ. ಒಮ್ಮೆ ಕನ್ನಡ ಸಂಘವನ್ನು ಉದ್ಘಾಟಿಸುತ್ತಾ ಒಬ್ಬ ಸಾಹಿತಿ, 'ಬ್ಯಾಂಕಿನಲ್ಲೂ ಒಂದು ಕನ್ನಡ ಸಂಘ ಪ್ರಾರಂಭವಾಗಿರುವುದು ಸಂತೋಷದ ವಿಷಯ, ಇಲ್ಲೂ ಸಾಹಿತ್ಯ ಸಂಗೀತ ನಾಟಕದ ಬಗ್ಗೆ ಆಸಕ್ತಿ ಬೆಳೆಸಿಕೊಂಡಿರುವುದು . . . .' ಎಂದಾಗ ನಮಗೆಲ್ಲಾ ತಬ್ಬಿಬ್ಬಾಯಿತು. ಬ್ಯಾಂಕಿನಲ್ಲಿ ನೌಕರಿ ಮಾಡಿದ ಮಾತ್ರಕ್ಕೆ ನಮಗೆ ಬೇರೆ ಯಾವುದರಲ್ಲೂ ಆಸಕ್ತಿ ಇರುವುದಿಲ್ಲವೆಂದು ಜನ ಏಕೆ ತಿಳಿಯುತ್ತಾರೆ?—ಎಂದು ನಮಗೆ ಅರ್ಥವಾಗಲಿಲ್ಲ.

ಗ್ರಾಹಕರ ಸೇವೆಗೆಂದೇ ನಾವು ಬಾಗಿಲು ತೆರೆದು ಕುಳಿತುಕೊಳ್ಳುತ್ತೇವೆ. ಕೆಲವರು ಬಂದು ಮಾತನಾಡಿಸಿ ಹೋಗುತ್ತಾರೆ, ಕೆಲವರು ನಮ್ಮನ್ನು ಪ್ರಯತ್ನಪೂರ್ವಕವಾಗಿ ಅಥವಾ ತಮಗರಿಯದೆ ನಮ್ಮನ್ನು ನಗಿಸುತ್ತಾರೆ. ಒಮ್ಮೊಮ್ಮೆ ಗ್ರಾಹಕರ ಪ್ರತಿಕ್ರಿಯೆಗಳು ನಮಗೆ ನಗು ತರುತ್ತವೆ. ಅವರೆದುರಿಗೆ ನಗಲು ಧೈರ್ಯ ಸಾಲದೆ ಅವರು ಹೋದ ಮೇಲೆ ನಗುತ್ತೇವೆ. ಮನುಷ್ಯನ ಬೆನ್ನ ಹಿಂದೆ ನಗುವುದು ಸಭ್ಯತನವಲ್ಲದಿರಬಹುದು. ಆದರೆ ನಮ್ಮ ಹಲ್ಲನ್ನು ನಾವು ಕಾಪಾಡಿಕೊಳ್ಳಲು ಅನೇಕ ಸಲ ಹಾಗೆ ಮಾಡಲೇ ಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ಹಲ್ಲುಗಳು ನಮ್ಮ ಕೌಂಟರಿನಲ್ಲೇ ಬೀಳಬಹುದು.

ಎಷ್ಟಕ್ಕೆ ಬರೆಯಲಿ?

ಒಮ್ಮೆ ಒಬ್ಬ ಗ್ರಾಹಕ ತನ್ನ ಖಾತೆಯಲ್ಲಿ ತಾನು ಇಟ್ಟಿರುವ ಹಣಕ್ಕಿಂತ ಸ್ವಲ್ಪ ಜಾಸ್ತಿ ಮೊಬಲಗಿಗೆ ಚೆಕ್ ಕೊಟ್ಟಿದ್ದ. ಆ ಚೆಕ್ ವಾಪಸ್ಸು ಮಾಡದೆ ಅವನಿಗೆ ಹೇಳಿ ಕಳುಹಿಸಿ, 'ನೋಡಿ, ನಿಮ್ಮ ಖಾತೆಯಲ್ಲಿ ಸ್ವಲ್ಪ ಓವರ್‌ಡ್ರಾ ಆಗಿದೆ. ಹಣ ತುಂಬಬೇಕು,' ಎಂದು ಹೇಳಿದೆವು. ಆಗ ಗ್ರಾಹಕ ಮಹಾಶಯ ತನ್ನ ಚೆಕ್ ಪುಸ್ತಕ (ನಮ್ಮ ಖಾತೆಯದೇ) ತೆಗೆದು, 'ಎಷ್ಟಕ್ಕೆ ಬರೆಯಲಿ?' ಎನ್ನುವುದೆ?

ನನ್ನ ಚೆಕ್ ಒಂದೇ?

ಗ್ರಾಹಕ ಚೆಕ್‌ಗಳನ್ನು ಬೇರೆ ಬೇರೆ ಊರಿಗೆ ಕಳುಹಿಸಿ ಹಣ ತರಿಸಿಕೊಡುವುದು ಒಂದು ಸೇವೆ. ಅದಕ್ಕೆ ಕಮಿಷನ್ ಹಾಗೂ ಪೋಸ್ಟೇಜ್ ತೆಗೆದುಕೊಳ್ಳುತ್ತೇವೆ. ಒಮ್ಮೆ ಒಬ್ಬ ಸರ್ಕಾರಿ ಇಲಾಖೆಯ ನಿವೃತ್ತ ಅಧಿಕಾರಿ ಹೀಗೆ ಪ್ರಶ್ನಿಸಿದರು: 'ನೀವು ಬೊಂಬಾಯಿಗೆ ನನ್ನ ಚೆಕ್ ಒಂದನ್ನೇ ಕಳುಹಿಸುತ್ತೀರಾ? ನಿಮ್ಮ ಪ್ರಧಾನಶಾಖೆಗೆ ಎಷ್ಟೊಂದು ಕಾಗದಗಳನ್ನು ಕಳುಹಿಸುತ್ತೀರಿ! ಅವುಗಳ ಜೊತೆ ನನ್ನ ಚೆಕ್ಕನ್ನು ಕಳುಹಿಸುತ್ತೀರಿ. ಅದಕ್ಕೆ ಏಕೆ ಪೋಸ್ಟೇಜ್ ಹಾಕುತ್ತೀರಿ?' ಅವರು ತಮಾಷೆಗೆ ಹಾಗೆ ಹೇಳುತ್ತಾರೆಂದುಕೊಂಡಿದ್ದೆ. ಅವರು ಸೀರಿಯಸ್ಸಾಗಿ ಹೇಳುತ್ತಿದ್ದಾರೆ ಎಂದು ತಿಳಿದಾಗ ನಮಗೆ ನಗು ಬಂತು.

ಮನೆಗೊಂದು ಆಳು

ಅನಕ್ಷರಸ್ಥರು ಬ್ಯಾಂಕಿನಲ್ಲಿ ಖಾತೆ ಇಡುವಾಗ ಅವರ ಫೋಟೋ ಕೇಳುವುದು ಪದ್ಧತಿ. ಅಂಥ ಗ್ರಾಹಕರು ತಾವೇ ಖುದ್ದಾಗಿ ಬರಬೇಕು. ಹಣ ತೆಗೆಯುವುದಕ್ಕಂತೂ ಬರಲೇಬೇಕು. ಈ ಸಮಾಚಾರ ಕೆಂಪೇಗೌಡನಿಗೂ ತಿಳಿದಿದೆ. ಆದರೆ ಅವನ ಮಗಳ ಹೆಸರಿನಲ್ಲಿ ಖಾತೆ ಪ್ರಾರಂಭಿಸಿದಾಗ ಮತ್ತೆ ಫೋಟೋ ಕೇಳಿದಾಗ ಬ್ಯಾಂಕ್ ನೌಕರನ ಮೇಲೆ ಎಲ್ಲಿಲ್ಲದ ಅನುಮಾನ. 'ಅದ್ಯಾಕೆ? ನನ್ನ ಫೋಟೋ ನಿಮ್ಮ ತಾವ ಇಲ್ವಾ? ಮನೆಗೆ ಒಬ್ಬರದಿದ್ದರೆ ಆಗಕಿಲ್ವಾ'? ಎಂದ.

ಅವನ ಅರಳಿದ ಮೂಗಿನ ಹೊಳ್ಳೆಯ ಜೊತೆ ಮೀಸೆಯೂ ಕುಣಿಯುತ್ತಿತ್ತು. ಫೋಟೋ ಬೇಕೇಬೇಕು ಎಂದು ಅವನಿಗೆ ತಿಳಿಸುವುದರಲ್ಲಿ ಸ್ವಲ್ಪ ಪ್ರಯಾಸವಾಯಿತು. 'ನಿನ್ನ ಮಗಳೇ ಬ್ಯಾಂಕಿಗೆ ಬರಬೇಕು' ಅನ್ನುವ ವಿಚಾರ ಹೇಳು ವಾಗಲಂತೂ ಇನ್ನೂ ರೇಗಿತು ಗೌಡನಿಗೆ. 'ಹಣ ತುಂಬ ಬೇಕಾದರೆ ನೀವು ಬರಬಹುದು. ಆದರೆ 'ಹಣ ತೆಗೆಯುವಾಗ ಖಾತೆದಾರರೇ ಬರಬೇಕು' ಎಂದಾಗ ಸ್ವಲ್ಪ ಸಮಾಧಾನ ವಾಯ್ತು. ನಾವು ಇನ್ನೂ ಕೆಂಪೇಗೌಡನ ಪ್ರಸಂಗದ ವಿಚಾರ ದಲ್ಲಿ ನಮ್ಮ ಗೆಳೆಯ ನೌಕರನನ್ನು ಛೇಡಿಸುತ್ತೇವೆ.

ತ್ರಿವಳಿ

ಮೈನರ್ ಅಕೌಂಟ್ ಪ್ರಾರಂಭಿಸುವಾಗ ಮಕ್ಕಳ ಹುಟ್ಟಿದ ತಾರೀಖನ್ನು ಫಾರಮ್‌ನಲ್ಲಿ ತೆಗೆದುಕೊಳ್ಳುತ್ತೇವೆ. ಒಮ್ಮೆ ಒಬ್ಬ ಧಡೂತಿ ಹೆಂಗಸು ತನ್ನ ಮೂರು ಮಕ್ಕಳ ಹೆಸರಿನಲ್ಲಿ ಒಂದೇ ದಿನ ಖಾತೆ ತೆಗೆದಳು. ಅವಳು ಕೊಟ್ಟ ಫಾರಮ್ ನೋಡಿ ಸ್ವಲ್ಪ ಧೈರ್ಯಮಾಡಿ ನಮ್ಮ ಅಕೌಂಟೆಂಟ್ 'ನಿಮಗೆ ಟ್ರಿಪ್ಲೆಟ್ಸಾ? .....' ಎಂದು ಕೇಳಿಯೇಬಿಟ್ಟರು. ಆಕೆ ಒಂದು ಕ್ಷಣ ತಬ್ಬಿಬ್ಬಾಗಿ ಅನಂತರ ಚೇತರಿಸಿಕೊಂಡು. 'ಅದು ಹೇಗೆ ಹೇಳಿದಿರಿ? ನಾನು ಯಾವತ್ತೂ ಮೂರು ಮಕ್ಕಳನ್ನು ಕರೆದುಕೊಂಡು ಬಂದಿಲ್ಲವಲ್ಲ' ಎಂದರು.

'ನೋಡಿ ಇಲ್ಲಿ ತಿಳಿಯುತ್ತೆ' ಅಂತ ಫಾರಮ್ ತೋರಿಸಿ ದಾಗ ಅವರು ನಾಚಿ ನಕ್ಕರು.

ಮೇಟಿಂಗ್

ರೈತರಿಗೆ ಸಾಲಗಳನ್ನು ವಿತರಣೆ ಮಾಡಲು ನಮ್ಮ ಖಾತೆಯ ಮ್ಯಾನೇಜರ್ ಹಾಗೂ ಅಗ್ರಿಕಲ್ಚರ್ ಆಫೀಸರ್ ಹೋಗಿದ್ದರು. ಈ ವಿಷಯ ತಿಳಿಯದೆ ಒಬ್ಬಳು ಹಳ್ಳಿ ಹೆಂಗಸು ಕೌಂಟರ್‌ನಲ್ಲಿ ನಿಂತು ಮ್ಯಾನೇಜರ್ ಬಗ್ಗೆ ಕೇಳಿದಳು. ಹೊಸದಾಗಿ ಬಂದ ನೌಕರ 'ಅವರಿಲ್ಲ' ಎಂದನಷ್ಟೆ. ಅದಕ್ಕೆ 'ಅವರು ಮೇಟಿಂಗ್ ಹೋಗವ್ರಾ?' ಎಂದಳು. ಬಹಳ ಕಷ್ಟಪಟ್ಟು ನೌಕರ ತನ್ನ ನಗುವನ್ನು ತಡೆದ. ಆದರೆ ಅವಳು 'ಆ ಸ್ವಾಮಿಯೋರೋ?' ಎಂದು ಖಾಲಿ ಕುರ್ಚಿ ಯನ್ನು ತೋರಿಸಿದಾಗ ನನ್ನ ಪಕ್ಕದಲ್ಲಿದ್ದವ 'ಇಬ್ಬರೂ ಒಟ್ಟಿಗೆ ಮೇಟಿಂಗ್ ಹೋಗವ್ರೆ' ಎಂದುಬಿಟ್ಟ. ಖಾತೆಯಲ್ಲಿ ದ್ದವರೆಲ್ಲಾ ಜೋರಾಗಿ ನಕ್ಕುಬಿಟ್ಟರು. ಹಿಂದೆ ಎರಡು ಬಾರಿ ಬಂದಾಗಲೂ ಆ ಹೆಂಗಸಿಗೆ ಮ್ಯಾನೇಜರ್ ಮೀಟಿಂಗ್‌ಗೆ ಹೋಗಿದ್ದಾರೆ ಎಂದು ತಿಳಿಸಲಾಗಿತ್ತು. ಆದರೆ ಅವಳ 'ಇಂಗ್ಲಿಷ್'ನಲ್ಲಿ ಇದು ಮೇಟಿಂಗ್ ಆಗುತ್ತದೆ ಎಂದು ಯಾರೂ ಕಲ್ಪಿಸಿರಲಿಲ್ಲ.

ಬಡ್ಡಿ ಮಕ್ಕಳು

ಬ್ಯಾಂಕಿನಲ್ಲಿ ಕೆಲಸ ಮಾಡುವವರನ್ನೆಲ್ಲಾ ನನ್ನ ಗೆಳೆಯ ಬಡ್ಡಿ ಮಕ್ಕಳೆಂದೇ ಕರೆಯುತ್ತಾನೆ. ಏಕೆಂದರೆ ನಾವು ಬಡ್ಡಿ ಕೊಡುತ್ತೇವೆ ಇಲ್ಲ ಬಡ್ಡಿ ತೆಗೆದುಕೊಳ್ಳುತ್ತೇವೆ. ಬಡ್ಡಿಯೇ ಬಂಡವಾಳವಾಗಿರುವ ನಮ್ಮ ಕೆಲಸದಲ್ಲಿ, ಸಂಖ್ಯೆಗಳ ರಾಶಿ ಯಲ್ಲಿ ತಲೆಕೆಡಿಸಿಕೊಂಡಿರುವಾಗ, ದಿನಕ್ಕೊಮ್ಮೆ ನಗು ತರುವ ಪ್ರಸಂಗಗಳು ಎಷ್ಟು ಹಿತಕರ! ಅದಕ್ಕೂ ನಾವು ಗ್ರಾಹಕರನ್ನೇ ಎದುರು ನೋಡುತ್ತಿರುತ್ತೇವೆ.

ಸುದ್ದಿ ಸಾರ

ಸಾ. ಅ. ಮಂಜುನಾಥ

ಬ್ಯಾಂಕಿಂಗ್ ಸೇವೆಗಳಲ್ಲಿ ಮುಷ್ಕರ ನಿಷೇಧ

27ನೆಯ ಜುಲೈ 1981ರಂದು ರಾಷ್ಟ್ರಾಧ್ಯಕ್ಷರು ಹೊರಡಿಸಿರುವ ಸುಗ್ರೀವಾಜ್ಞೆಯಲ್ಲಿ ಹೆಸರಿಸಲಾದ ಅಗತ್ಯ ಸೇವೆಗಳು ಮತ್ತು ಕೈಗಾರಿಕೆಗಳಲ್ಲಿ ಮುಷ್ಕರವನ್ನು ನಿಷೇಧಿಸಲಾಗಿದೆ. ಅಗತ್ಯ ಸೇವಾ ಸಂರಕ್ಷಣಾ ಸುಗ್ರೀವಾಜ್ಞೆ, 1981 ಎಂದು ಹೆಸರಿಸಲಾದ ಈ ಆಜ್ಞೆಯ ವ್ಯಾಪ್ತಿಯಲ್ಲಿ ಬ್ಯಾಂಕಿಂಗ್ ಕ್ಷೇತ್ರವೂ ಸೇರಿದೆ.

ರಫ್ತು-ಆಮದು ಬ್ಯಾಂಕ್ ಸ್ಥಾಪನೆ

ದೇಶದ ರಫ್ತು ಮತ್ತು ಆಮದು ವಹಿವಾಟುಗಳನ್ನು ನಡೆಸಲು ರಫ್ತು-ಆಮದು ಬ್ಯಾಂಕ್ ಒಂದನ್ನು ಶಿಘ್ರದಲ್ಲೇ ಸ್ಥಾಪಿಸಲಾಗುವುದು. ಈ ಬಗ್ಗೆ ವಿಧೇಯಕವೊಂದನ್ನು ಲೋಕ ಸಭೆ ಅಂಗೀಕರಿಸಿದೆ.

ವಿಶ್ವದಲ್ಲಿ ತೈಲ ಬಳಕೆಯ ಇಳಿತ

ಅಂತರರಾಷ್ಟ್ರೀಯ ಹಣ ನಿಧಿಯ ಅಂದಾಜಿನ ಪ್ರಕಾರ ವಿಶ್ವದಲ್ಲಿ ತೈಲ ಬಳಕೆ 1980ರಲ್ಲಿ ಸೇ. 6ರಷ್ಟು ಇಳಿದಿದೆ. 1981ರಲ್ಲಿ ಈ ಇಳಿತ ಸೇ.2 ಆಗಬಹುದೆಂದು ಅಂದಾಜು ಮಾಡಲಾಗಿದೆ. ತೈಲದ ಬೆಲೆಯ ನಿರಂತರ ಏರಿಕೆ, ಅಭಿವೃದ್ಧಿಶೀಲ ರಾಷ್ಟ್ರಗಳ ಒಟ್ಟಾರೆ ರಾಷ್ಟ್ರೀಯ ಉತ್ಪನ್ನಗಳ ಮಂದಗತಿಯ ಬೆಳವಣಿಗೆ, ಕೈಗಾರಿಕಾ ರಾಷ್ಟ್ರಗಳ ತೈಲ ಬಳಕೆಯಲ್ಲಿ ಉಳಿತಾಯ ಇವು ಈ ಇಳಿತಕ್ಕೆ ಕಾರಣ. 1982ರಲ್ಲಿ ಕೈಗಾರಿಕಾ ರಾಷ್ಟ್ರಗಳಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಿ ಆ ಮೂಲಕ ತೈಲ ಬಳಕೆ ಸ್ವಲ್ಪ ಏರಬಹುದೆಂದೂ ಅಂತರರಾಷ್ಟ್ರೀಯ ಹಣ ನಿಧಿ ಅಂದಾಜಿಸಿದೆ.

ತೀರುವೆಗಾಗಿ ಗಣಕಯಂತ್ರದ ಬಳಕೆ

ಲಂಡನ್ ನಗರ ಮತ್ತು ಅದರ ಹೊರಗಿರುವ ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಇತರ ತೀರುವೆ ಬ್ಯಾಂಕುಗಳ ವಹಿವಾಟು ಅಂದಂದೇ ತೀರ್ವೆಯಾಗಲು ಗಣಕ ಯಂತ್ರಗಳನ್ನು ಬಳಸಲಾಗುವುದು. CHAPS (ಕ್ಲಿಯರಿಂಗ್ ಹೌಸ್ ಆಟೊಮೇಟೆಡ್ ಪೇಮೆಂಟ್ಸ್ ಸಿಸ್ಟಂ) ಎಂದು ಕರೆಯಲಾಗುವ ಈ ವ್ಯವಸ್ಥೆ 1982ರಲ್ಲಿ ಜಾರಿಗೆ ಬರಲಿದೆ.

ಕುರುಡರು ಮತ್ತು ಬ್ಯಾಂಕಿಂಗ್

ಲಾಯ್ಡ್ಸ್ ಬ್ಯಾಂಕ್ ಪ್ರತಿ ವರ್ಷ 3000 ತಃಖ್ತೆಗಳನ್ನು ಬ್ರೇಲ್ ಲಿಪಿಯಲ್ಲಿ ಒದಗಿಸುತ್ತಿದೆ. ದೃಷ್ಟಿದೋಷವುಳ್ಳವರಿಗಾಗಿ ದೊಡ್ಡಕ್ಷರದ ತಃಖ್ತೆಗಳನ್ನು ಅದು ಒದಗಿಸುತ್ತಿದೆ. ಕುರುಡರಿಗಾಗಿ ಸಂಶೋಧನೆ ನಡೆಸುವ ಒಂದು ದತ್ತಿಗೆ ಆ ಬ್ಯಾಂಕು ಮುಂದಿನ ಏಳು ವರ್ಷಗಳಲ್ಲಿ 1 ಲಕ್ಷ ಪೌಂಡ್ ದೇಣಿಗೆ ನೀಡಲಿದೆ.

ಬಡ್ಡಿ ಪಾವತಿ—ಚಿನ್ನದ ರೂಪದಲ್ಲಿ

ಇಂಗ್ಲೆಂಡಿನ ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ತಾನು ನೀಡುವ ಬಡ್ಡಿಯನ್ನು ಚಿನ್ನದ ಲೆಕ್ಕದಲ್ಲಿ ಜಮೆ ಮಾಡುವ ಹೊಸ ಹಾದಿಯನ್ನು ತುಳಿದಿದೆ. ಈ ಬಡ್ಡಿ ವರಮಾನ ತೆರಿಗೆಗೆ ಒಳಪಡುತ್ತದೆ.

ಬ್ಯಾಂಕಿಂಗ್‌ನಲ್ಲಿ ಗ್ರಾಹಕನ ಧ್ವನಿ ಬಳಕೆ

ಅಮೆರಿಕದ ಸಂಸ್ಥೆಯೊಂದು ದೂರವಾಣಿಯಲ್ಲಿ ಬರುವ ಧ್ವನಿಗಳನ್ನು ಗುರುತಿಸುವ ತಂತ್ರವೊಂದನ್ನು ರೂಪಿಸಿದೆ. ಇದರಿಂದಾಗಿ ಗ್ರಾಹಕರು ಬ್ಯಾಂಕಿಗೆ ದೂರವಾಣಿಯ ಮೂಲಕ ನೀಡುವ ಸೂಚನೆಗಳನ್ನು ಮಾನ್ಯ ಮಾಡಲು ಅನುಕೂಲ. ಗಣಕಯಂತ್ರದ ನೆನಪು ನಿಧಿಯಲಿಟ್ಟ ಗ್ರಾಹಕನ ಮಾದರಿ ಧ್ವನಿಯನ್ನು ದೂರವಾಣಿಯ ಮೂಲಕ ಬರುವ ಗ್ರಾಹಕನ ಧ್ವನಿಯೊಂದಿಗೆ ಹೋಲಿಸಿ. ಬ್ಯಾಂಕು ಆತನ ಸೂಚನೆಗಗಳನ್ನು ಮಾನ್ಯ ಮಾಡಲು ಸಾಧ್ಯ. ಈ ವಿಧಾನವನ್ನು ಚಿಕಾಗೋದಲ್ಲಿಯ ಫಸ್ಟ್ ನ್ಯಾಷನಲ್ ಸಿಟಿ ಬ್ಯಾಂಕ್ ಪ್ರಾಯೋಗಿಕವಾಗಿ ಬಳಸುತ್ತಿದೆ.

ಇಸ್ಲಾಂ ತತ್ವಾಧಾರಿತ ಬ್ಯಾಂಕಿಂಗ್

ನಿಷ್ಠಾವಂತ ಇಸ್ಲಾಮೀ ಕಟ್ಟಳೆಯ ಆಚರಣೆಯಂತೆ ಬಡ್ಡಿ ರಹಿತ ಬ್ಯಾಂಕಿಂಗ್ ಪದ್ಧತಿಯನ್ನು ಜಾರಿಗೆ ತಂದಿರುವ ಈಜಿಪ್ಟ್, ಜಾರ್ಡನ್, ಸೌದಿ ಅರೇಬಿಯ, ದುಬಾಯ್ ಬಹರೀನ್ ಮತ್ತು ಸೂಡಾನ್‌ಗಳ ಸಾಲಿಗೆ ಇತ್ತೀಚೆಗೆ ಪಾಕಿಸ್ತಾನವೂ ಸೇರಿದೆ. ಈ ಬಡ್ಡಿರಹಿತ ಖಾತೆಗಳಲ್ಲಿ ಶೇವು ಮಾಡಲಾದ ಹಣಕ್ಕೆ ಬಡ್ಡಿಯ ಬದಲಾಗಿ ಬ್ಯಾಂಕಿನ ಲಾಭಗಳಿಕೆಯಲ್ಲಿ ಪಾಲು ನೀಡಲಾಗುವುದು. ಹಾಗೆಯೇ ಬ್ಯಾಂಕಿನಿಂದ ಸಾಲ ಪಡೆದ ಹಣಕ್ಕೆ ಸಾಲಗಾರನಿಂದ ಬಡ್ಡಿಯ ಬದಲಾಗಿ ಆ ಸಾಲದ ಬಳಕೆಯಿಂದ ಬರುವ ಲಾಭದಲ್ಲಿ ಪಾಲನ್ನು ಪಡೆಯಲಾಗುವುದು.

ಈ ಮಧ್ಯೆ ದುಬಾಯಿಯ ಸಾಲಗಾರನೊಬ್ಬ ಇಸ್ಲಾಮೀ ಬ್ಯಾಂಕಿಂಗ್ ತತ್ವವನ್ನು ಅಂತರರಾಷ್ಟ್ರೀಯ ಆರ್ಥಿಕ

ರಂಗಕ್ಕೆ ಎಳೆತಂದಿದ್ದಾನೆ. ಬ್ಯಾಂಕೊಂದರಿಂದ ತಾನು ಪಡೆದ 16 ಕೋಟಿ ಡಾಲರುಗಳ ಸಾಲಕ್ಕೆ ಮುಸ್ಲಿಂ ಧಾರ್ಮಿಕ ಕಾನೂನಿನ ಪ್ರಕಾರ ಬಡ್ಡಿ ಕೊಡಬೇಕಾಗಿಲ್ಲವೆಂದು ಹೇಳಿ ಆತ ಆ ಸಂಸ್ಥೆಯನ್ನು ನ್ಯಾಯಾಲಯಕ್ಕೆ ಎಳೆದಿದ್ದಾನೆ.

ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳು ಮತ್ತು ಬ್ಯಾಂಕುಗಳು

ಕೇಂದ್ರ ಸರ್ಕಾರ ಮೇ 1ರಿಂದ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳ ಎರಡು ಹೊಸ ಶ್ರೇಣಿಗಳನ್ನು ಬಿಡುಗಡೆ ಮಾಡಿದೆ. 6 ವರ್ಷಗಳಲ್ಲಿ ಫಲಿತವಾಗುವ ಈ ಸರ್ಟಿಫಿಕೇಟುಗಳ ಮೇಲೆ ಸೇ.12 ರ ಬಡ್ಡಿ ನೀಡಲಾಗುತ್ತದೆ. ಬ್ಯಾಂಕುಗಳು ಈ ಸರ್ಟಿಫಿಕೇಟುಗಳನ್ನು ತಮ್ಮ ಗ್ರಾಹಕರು, ಸದಸ್ಯರು, ಉದ್ಯೋಗಿಗಳು ಅಥವಾ ಗುತ್ತಿಗೆದಾರರ ಪರವಾಗಿ ಕೊಳ್ಳಬಹುದು. ಈ ಸರ್ಟಿಫಿಕೇಟುಗಳ ಆಧಾರದ ಮೇಲೆ ಉದರಿ ನೀಡಬಹುದು. ಬ್ಯಾಂಕುಗಳು ಇಚ್ಛಿಸಿದಲ್ಲಿ ಈ ಸರ್ಟಿಫಿಕೇಟುಗಳ ಮಾರಾಟ ಪ್ರತಿನಿಧಿಯಾಗಿಯೂ ಕಾರ್ಯ ನಿರ್ವಹಿಸಿ ಸೇ. 2ರ ಕಮಿಷನ್ ಅನ್ನು ಪಡೆಯಬಹುದು.

ಕುಶಲಕರ್ಮಿಗಳಿಗೆ ಹಾಗೂ ಗ್ರಾಮ/ಗೃಹ ಕೈಗಾರಿಕೆಗಳಿಗೆ ಬ್ಯಾಂಕ್ ನೆರವು

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಸ್ಥಾಪಿತವಾದ ಅಥವಾ ಮನ್ನಣೆ ಪಡೆದ ಅಭಿವೃದ್ಧಿ ಹಾಗೂ ಮಾರಾಟ ಸಂಸ್ಥೆಗಳ ಕುಶಲಕರ್ಮಿಗಳು, ಗ್ರಾಮ ಮತ್ತು ಗೃಹ ಕೈಗಾರಿಕೆಗಳು ಇವುಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ಒದಗಿಸುವ ಮತ್ತು ಉತ್ಪಾದಿತ ಸರಕುಗಳ ಮಾರಾಟಕ್ಕೆ ನೆರವಾಗುವ ಉದ್ದೇಶಗಳಿಗೆ ಮಾತ್ರ ನೀಡಲಾಗುವ ಉದರಿಗೆ ಜುಲೈ 1ರಿಂದ ಸೇ. 13.5 ರ ರಿಯಾಯಿತಿಯ ಬಡ್ಡಿ ದರವನ್ನು ವಿಧಿಸಲಾಗುತ್ತದೆ.

ವಾಣಿಜ್ಯ ಬ್ಯಾಂಕುಗಳ ಶಾಖಾ ವಿಸ್ತರಣೆಯ ಪ್ರಗತಿ

ಏಪ್ರಿಲ್ 81ಕ್ಕೆ ಕೊನೆಗೊಂಡ ಹತ್ತು ತಿಂಗಳ ಅವಧಿಯಲ್ಲಿ 2,773 ಹೊಸ ಬ್ಯಾಂಕ್ ಶಾಖೆಗಳನ್ನು ಈ ದೇಶದಲ್ಲಿ ತೆರೆಯಲಾಗಿದೆ. ಇವುಗಳಲ್ಲಿ 2,062 ಶಾಖೆಗಳನ್ನು ಬ್ಯಾಂಕ್‌ಗಳಿಲ್ಲದ ಎಡೆಗಳಲ್ಲಿ ತೆರೆಯಲಾಗಿದೆ. ಈಗ ನಮ್ಮ ದೇಶದಲ್ಲಿ ಪ್ರತಿ 19,000 ಜನರಿಗೆ ಒಂದು ಬ್ಯಾಂಕ್ ಶಾಖೆ ಇದೆ.

ಪೌಂಡ್-ರೂಪಾಯಿ ವಿನಿಮಯ ದರ ಪುನರ್ವಿಮರ್ಶಾ ಶತಕ

25ನೆಯ ಸೆಪ್ಟೆಂಬರ್ 1975ರಂದು ನಮ್ಮ ದೇಶದ ರೂಪಾಯಿಯ ಮೌಲ್ಯನಿರ್ಧಾರಣೆಯಲ್ಲಿ ಹೆಡಿಗೆ (ಬ್ಯಾಸ್ಕೆಟ್) ಪದ್ಧತಿ ಜಾರಿಗೆ ಬಂದಾಗಿನಿಂದ ಪೌಂಡ್ ಸ್ಟರ್ಲಿಂಗ್ ಹಾಗೂ ರೂಪಾಯಿಯ ವಿನಿಮಯ ದರಗಳ ವಿಮರ್ಶೆ ಒಂದು ನೂರು ಬಾರಿಗೂ ಹೆಚ್ಚಾಗಿ ಆಗಿದೆ. ನೂರನೆಯ ವಿಮರ್ಶೆ ಆಗಸ್ಟ್ 5ನೆಯ ದಿನಾಂಕದಂದು ಆಯಿತು. ಅಂದು ನಿಗದಿಗೊಳಿಸಿದ ದರ ಒಂದು ಪೌಂಡ್‌ಗೆ ರೂ. ರೂ. 16.50.

ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿ ದರವನ್ನು ಸೇ. 10.6 ರಿಂದ 11.6ಕ್ಕೆ ವಿಶ್ವಬ್ಯಾಂಕು ಏರಿಸಿದೆ. ಇದು 1–10–1981 ರಿಂದ ಜಾರಿಗೆ ಬರುತ್ತದೆ. ಇದೇ ವರ್ಷದಲ್ಲಿ ಜುಲೈ ಒಂದರಿಂದ ಬಡ್ಡಿಯ ದರ ಸೇ. 9.6 ರಿಂದ 10.6ಕ್ಕೆ ವಿಮರ್ಶಿತವಾಗಿತ್ತು.

* * *

'ದಕ್ಷಿಣ ಭಾರತದಲ್ಲಿ ಬ್ಯಾಂಕಿಂಗ್' ಎಂಬ ವಿಷಯುಕವಾದ ಒಂದು ಸ್ಮರಣ ಸಂಚಿಕೆಯನ್ನು ಇಂಡಿಯನ್ ಬ್ಯಾಂಕ್ ತನ್ನ ಅಮೃತ (ಪ್ಲಾಟಿನಂ) ಮಹೋತ್ಸವದ ಸ್ಮಾರಕವಾಗಿ ಪ್ರಕಟಿಸಲಿದೆ.

ಬ್ಯಾಂಕರನ ಬದುಕು—ಕಾನೂನಿನ ತೊಡಕು*

ಮೂಲ: **ಎಸ್. ವೈ. ಷಾ**
ಅನು: **ಕೆ. ಎಸ್. ಮಹಾಬಲ**

ಹೆಚ್ಚು ಜನ ಪ್ರಾಮಾಣಿಕರಾಗಿರುವುದು ಬ್ಯಾಂಕರನ ಅದೃಷ್ಟ. ಆದರೆ......

ಬ್ಯಾಂಕಿಂಗ್ ಕಾನೂನು ಹಾಗೂ ಆಚರಣೆ ಬಹಳ ಆಕರ್ಷಕವಾದ ವಿಷಯ. ಆದರೆ ಸಾಧಾರಣವಾಗಿ ಬ್ಯಾಂಕರರು ಈ ವಿಷಯದ ಪರಿಭಾಷೆಯ ಆಡಂಬರಕ್ಕೆ ಸಿಲುಕಿ ಇದೊಂದು ಅರ್ಥವಾಗದ ತೊಡಕೆಂದು ಭಾವಿಸಿದ್ದಾರೆ. ಆದರೆ ಈ ಕ್ಲಿಷ್ಟವಾದ ವಿಷಯವನ್ನು ಕೌತುಕಭರಿತವಾದ, ರಹಸ್ಯದ, ಅಪರಾಧ ಹಾಗೂ ಮೋಸದ ಹಿನ್ನೆಲೆಯ ಕಥಾನಕಗಳ ಸಹಾಯದಿಂದ ಓದಬಹುದು. ಕಾನೂನಿನ ಸೂಕ್ಷ್ಮತೆ ಹಾಗೂ ಜಟಿಲತೆಗಳ ಅಂಶವನ್ನು ಕಳೆದುಕೊಳ್ಳದೆಯೂ ನಿಯಮಗಳನ್ನು ಸಹಜ ಹಾಗೂ ಸರಳ ಭಾಷೆಯಲ್ಲಿ ಪುನರ್ರೂಪಿಸಲು ಸಾಧ್ಯವಿದೆ.

ಬ್ಯಾಂಕರನಿಗೆ ಕಾನೂನಿನ ಪ್ರಾಯೋಗಿಕ ಅರಿವು, ಮತ್ತು ಅವುಗಳನ್ನು ಸಂದರ್ಭದ ಔಚಿತ್ಯವರಿತು ಜಾಣ್ಮೆಯಿಂದ ಅನ್ವಯಿಸುವ ಸಾಮರ್ಥ್ಯ ಬಹಳ ಅಗತ್ಯ. ಈ ಸಾಮರ್ಥ್ಯ ಬೆಳೆಸಿಕೊಳ್ಳಲು ಅವನಿಗಿರುವ ಉತ್ತಮ ಉಪಾಯವೆಂದರೆ ಅವನ ದೈನಂದಿನ ವಾತಾವರಣವನ್ನು ವ್ಯಕ್ತಿಗಳಿಂದ—ಅನುಭವೀ ವ್ಯಕ್ತಿಗಳಿಂದ—ಹಾಗೂ ಪೂರ್ವ ಚರಿತ್ರೆಯ ವ್ಯಕ್ತಿಗಳಿಂದ ಒಳಗೊಳ್ಳುವಂತೆ ಮಾಡುವುದು. ಕಾನೂನಿನ ಗ್ರಂಥಗಳು ವಂಚನೆ ಹಾಗೂ ಖೋಟಾ ಸಹಿಯ ಪ್ರಸಂಗಗಳಿಂದ ತುಂಬಿವೆ. ಇದರ ಪ್ರಮಾಣ ಎಷ್ಟು ಹೆಚ್ಚೆಂದರೆ, ವಂಚನೆಗೆ ದಾರಿ ಮಾಡಿಕೊಡುವ ಚೆಕ್ಕುಗಳನ್ನು ಬಹಿಷ್ಕರಿಸಲು ಒತ್ತಾಯ ಮಾಡಿದರೂ ಆಶ್ಚರ್ಯವಿಲ್ಲ. (ಆದರೆ ಅದು ಸಾಧ್ಯವಿಲ್ಲ.) ವಂಚನೆಯ ಆರೋಪದ ಮೊಕದ್ದಮೆಗಳು ವಸ್ತುಸ್ಥಿತಿಗೆ ವಿರುದ್ಧವಾದ ತಪ್ಪು ಮಾರ್ಗದರ್ಶಿಗಳು. ಲಕ್ಷಾಂತರ ಚೆಕ್ಕುಗಳು ದಿನನಿತ್ಯ ಸುಲಲಿತವಾಗಿ ಪಾವತಿಯಾಗುತ್ತಿರುವಾಗ ಎಲ್ಲೋ ಕೆಲವು ವಂಚನೆಯ ಪ್ರಕರಣಗಳು ಬೆಳಕಿಗೆ ಬರುತ್ತವೆ.

ಹೆಚ್ಚು ಜನ ಪ್ರಾಮಾಣಿಕರಾಗಿರುವುದು ಬ್ಯಾಂಕರರ ಅದೃಷ್ಟ. ಪ್ರಮಾದಗಳು ಯಾವಾಗಲೂ ಸಂಭವಿಸುವುದಿಲ್ಲ. ಎಲ್ಲೋ ಅಪರೂಪವಾಗಿ ಉಂಟಾಗುತ್ತವೆ ಹಾಗೂ ಅಂಥ ಕಡಿಮೆ ಸಂಖ್ಯೆಯ ಸೀಮಾಂತ ಹಾಗೂ ಕನಿಷ್ಠ ಸಂಖ್ಯೆಯ ಪ್ರಸಂಗಗಳಿಂದ ರೂಪಿತವಾದ ಕಾನೂನು ದಿನನಿತ್ಯದ ವ್ಯವಹಾರಕ್ಕೆ ಅನ್ವಯಿಸುತ್ತವೆ.

ಬ್ಯಾಂಕರನ ಭಾಷೆ

ಬ್ಯಾಂಕಿಂಗ್ ಪ್ರಪಂಚದಲ್ಲಿ ಪದಗಳು ವಿಶೇಷ ಅರ್ಥಗಳನ್ನು ಒಳಗೊಂಡಿವೆ. ಬ್ಯಾಂಕಿಂಗ್ ಪ್ರಪಂಚದ ಹೊರಗಡೆ ಅವುಗಳ ಅರ್ಥವ್ಯಾಪ್ತಿ ಬೇರೆಯೇ ಆಗಿರುತ್ತದೆ. ಇದರಿಂದ ಒಬ್ಬ ಪಾವತಿದಾರ ಬ್ಯಾಂಕರ್ ಖೋಟಾ ಸಹಿಯ ಚೆಕ್ಕು ಪಾವತಿಯಾದರೆ, ತನಗೆ ರಕ್ಷಣೆಯಿಲ್ಲ [ಖೋಟಾ ಹಿಂಬರಹದ (ಎಂಡಾರ್ಸ್‌ಮೆಂಟ್) ಚೆಕ್ಕು ಪಾವತಿಯಾದರೆ ರಕ್ಷಣೆಯುಂಟು] ಎಂಬುದನ್ನೂ, ವಸೂಲಿದಾರ ಬ್ಯಾಂಕರ್ (ಕಲೆಕ್ಟಿಂಗ್ ಬ್ಯಾಂಕ್) ಖೋಟಾ ಸಹಿಗೆ ರಕ್ಷಣೆಯುಂಟು, ಖೋಟಾ ಹಿಂಬರಹವನ್ನು ಗಮನಿಸದಿದ್ದರೆ ರಕ್ಷಣೆಯಿಲ್ಲ ಎಂಬುದನ್ನೂ ಅರಿಯುವುದು ಅಗತ್ಯ. 'ನಾನು ಕೊಡುವುದಿಲ್ಲವೆಂದು ಪ್ರಮಾಣ ಮಾಡುವೆ' ಎಂದು ಪ್ರೋನೋಟು ನೀಡಿದರೂ 'ನಾನು ಕೊಡುತ್ತೇನೆ'ಎಂದೇ ಅರ್ಥ. ಏಕೆಂದರೆ ಕೊಡುವುದಿಲ್ಲವೆಂದು ಹೇಳಲು ಯಾರೂ ಪ್ರೋನೋಟಿನ ಮೇಲೆ ಸಹಿ ಮಾಡಬೇಕಾಗಿಲ್ಲ. ಪೂರ್ವೇತಿಹಾಸವುಳ್ಳ ಒಬ್ಬನನ್ನು ಉದ್ಯೋಗದಲ್ಲಿಟ್ಟುಕೊಳ್ಳುವುದು ನಿಜಜೀವನದಲ್ಲಿ ಪ್ರಮಾದವೆನಿಸಿದರೂ, ಒಂದು ಕಂಪನಿ ಅಂಥ ಒಬ್ಬನನ್ನು ಕಂಪನಿ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡ ಮಾತ್ರಕ್ಕೆ ಬ್ಯಾಂಕರ್ ಕಂಪನಿಯನ್ನು ದೂಷಿಸುವಂತಿಲ್ಲ. (ಹೀಗೆ) ಬ್ಯಾಂಕಿಂಗ್ ಪ್ರಪಂಚದಲ್ಲಿ ಕೆಲವು ಪದ್ಧತಿಗಳು ವಿಚಿತ್ರ ಹಾಗೂ ಅಸ್ವಾಭಾವಿಕವಾಗಿವೆ. ಈ ಪದ್ಧತಿಗಳನ್ನು ಬ್ಯಾಂಕರ್ ಅರ್ಥಮಾಡಿಕೊಂಡರೆ, ಅವನು ಚೆಕ್ ವ್ಯವಹಾರವನ್ನು ಸುಗಮವಾಗಿ ಸಾಗಿಸಲು ಸಾಧ್ಯವಿದೆ. ಎಷ್ಟೆಂದರೂ ನಾವು ವಂಚನೆಯನ್ನು ತಡೆಗಟ್ಟಿ ಚೆಕ್‌ಗಳನ್ನು ಉತ್ತೇಜಿಸಬೇಕೇ ಹೊರತು ತದ್ವಿರುದ್ಧವಲ್ಲ.

---

* *Banker Beware! The Law is so hard* ಎಂಬ ಲೇಖನದ ಅನುವಾದ.

ಹಣ ಯಾರಿಗೆ ಸೇರಿದ್ದು ?

ಬ್ಯಾಂಕಿನಲ್ಲಿರುವ ಹಣ ಗ್ರಾಹಕನಿಗೆ ಸೇರಿದ್ದು, ಬ್ಯಾಂಕರ್ ಹಣದ ರಕ್ಷಕ ಎಂದು ಜನ ಒಮ್ಮೆ ತಿಳಿದಿದ್ದರು. ಈ ವಾಖ್ಯಾನ ಕಾನೂನಿನ ನೆಲೆಗಟ್ಟು ಹಾಗೂ ಮಸ್ತಸ್ಥಿತಿಯೆಂದು ನಿರ್ಣಯ ವಾಗಿತ್ತು. ಆದರೆ ಕೆಲವೊಮ್ಮೆ ವಾಡಿಕೆಯೇ ಕಾನೂನನ್ನು ಬದಲಿಸುತ್ತದೆ. ಹಣ ಬ್ಯಾಂಕರನಿಗೆ ಸೇರಿದ್ದು, ಅದನ್ನು ಬ್ಯಾಂಕರ್ ತನಗಿಷ್ಟ ಬಂದಂತೆ ಹೆಚ್ಚು ಲಾಭ ಬರುವಂತೆ ಉಪಯೋಗಿಸಬಹುದು, ಗಿರಾಕಿ ಒಬ್ಬ ಸಾಲಿಗ ಮಾತ್ರ ಎಂಬ ಬಳಕೆಯನ್ನು ಉದ್ಯಮಶೀಲ ಅಕ್ಕಸಾಲಿಗರು 1848 ರಿಂದ ನಿರಂತರವಾಗಿ ಪೋಷಿಸಿಕೊಂಡು ಬಂದರು. ಬದಲಾದ ಪರಿಸ್ಥಿತಿಗೆ ಕಾನೂನು ಹೊಂದಿಕೊಳ್ಳಬೇಕಾಗಿ ಬಂದು, ಬ್ಯಾಂಕರು ಸಾಲಿಗನಿಗೆ ಹಣ ಯಾವ ರೀತಿಯಲ್ಲಿ ವಿನಿಯೋಜ ನವಾಯಿತು ಎಂಬುದಕ್ಕೆ ಹೊಣೆಗಾರನಾಗಬೇಕಿಲ್ಲ ಎಂಬು ದನ್ನು ಸಿದ್ಧಪಡಿಸಿತು. ಬ್ಯಾಂಕರನ ಏಕೈಕ ಕರ್ತವ್ಯವೆಂದರೆ ಚೆಕ್‌ಗೆ ನಗದು ನೀಡುವುದು ಅಥವಾ ಒಪ್ಪಂದದಂತೆ ಹಣ ಹಿಂತೆಗೆಯುವುದಕ್ಕೆ ಅವಕಾಶ ನೀಡುವುದು.

1933ರಲ್ಲಿ ಮುಂಬಯಿಯ ತೃತೀಯ ನ್ಯಾಯಾಲ ಯದ ನ್ಯಾಯಾಧೀಶರು ಲಾಯ್ಡ್ ಬ್ಯಾಂಕಿನ ತೀರ್ಪನ್ನು ಎತ್ತಿ ಹಿಡಿಯುತ್ತ, ಕಾನೂನಿನ ಪರಿಸ್ಥಿತಿಯನ್ನು ವಿಶದೀ ಕರಿಸಿದರು. ಅವರ ಪ್ರಕಾರ ಠೇವಣಿದಾರರ ಹಣವೆನ್ನಿಸಿ ಕೊಳ್ಳುವಂಥ ಆಸ್ತಿ ಬ್ಯಾಂಕ್‌ನಲ್ಲಿ ಯಾವುದೂ ಇಲ್ಲ. ಠೇವಣಿಯಾದ ಹಣಕ್ಕೆ ಬ್ಯಾಂಕರನೇ ವಾರಸುದಾರ. ಬ್ಯಾಂಕರ್ ಹಾಗೂ ಗ್ರಾಹಕರದು ಧನಿ–ಋಣಿ ಸಂಬಂಧ. ಒಮ್ಮೆ ಕಂಪನಿಯ ಕಾರ್ಯದರ್ಶಿಯೊಬ್ಬ ಕಂಪನಿಯ ಚೆಕ್ಕು ಗಳನ್ನು ತನ್ನ ಸ್ವಂತ ಸಾಲಗಾರನಿಗೆ ನೀಡಲು ಉಪಯೋಗಿ ಸಿದ. ವಂಚನೆ ಬೆಳಕಿಗೆ ಬಂದಾಗ ಕೆಳ ನ್ಯಾಯಾಲಯ ತಪ್ಪಾಗಿ ಅವನನ್ನು ಕಳ್ಳತನದ ಆರೋಪದ ಮೇಲೆ ಶಿಕ್ಷಿಸಿತು. ಅಪೀಲು ನ್ಯಾಯಾಲಯ ಶಿಕ್ಷೆಯನ್ನು ವಜಾ ಮಾಡಿತು. ಏಕೆಂದರೆ ಕಂಪನಿಗೇ ಸೇರಿಲ್ಲದ ಹಣವನ್ನು ಕದಿಯಲು ಹೇಗೆ ಸಾಧ್ಯ? ಹಣ ಕಂಪನಿಯ ಸೊತ್ತಾಗಿರದೆ ಬ್ಯಾಂಕ್‌ನದಾಗಿತ್ತು. ಬಳಕೆಯಲ್ಲಿ ನಾವು 'ಆ ವ್ಯಕ್ತಿಗೆ ಬ್ಯಾಂಕಿನಲ್ಲಿ ಹಣವಿದೆ' ಎಂದೆಲ್ಲಾ ಹೇಳಿದರೂ ಬ್ಯಾಂಕ್‌ನಲ್ಲಿ ಹಣ ಹೊಂದಿರುವ ಏಕಮಾತ್ರ ವ್ಯಕ್ತಿಯೆಂದರೆ ಬ್ಯಾಂಕರ್ ಮಾತ್ರ. ಬ್ಯಾಂಕರ್ ಕೌಂಟರಿನಾಚೆ ಅಥವಾ ವಿನಿಮಯದ (ಕ್ಲಿಯರಿಂಗ್) ಚೆಕ್ ಪಾವತಿ ಮಾಡಿದಾಗ ತನ್ನ ಸ್ವಂತ ಹಣದಿಂದ ನೀಡು ತ್ತಾನೆಯೇ ಹೊರತು ಗಿರಾಕಿಯದಲ್ಲ. ಒಂದು ವೇಳೆ ಕಾರ್ಯ ದರ್ಶಿಯ ಮೇಲೆ ಹಣ ದುರುಪಯೋಗದ ಆಪಾದನೆ ಸಲ್ಲಿಸಿದ್ದರೆ ಕಂಪನಿಗೆ ಜಯ ಸಿಗುತ್ತಿತ್ತು. ಆದರೆ ಸದ್ಯದ ಆಪಾದನೆ ಕಳ್ಳತನವಾದುದರಿಂದ ಮತ್ತು ಒಬ್ಬನೇ ವ್ಯಕ್ತಿ ಯಮೇಲೆ ಒಂದೇ ಆಪಾದನೆಯ ಮೇಲೆ ಎರಡು ಬಾರಿ ದಾವ ಹೂಡಲು ಸಾಧ್ಯವಿಲ್ಲದ್ದರಿಂದ ಮೊಕದ್ದಮೆ ವಿಫಲ ವಾಯಿತು.

ದೂರವಾಣಿಯ ತಕರಾರು

ಈ ದಿನಗಳಲ್ಲಿ ದೂರವಾಣಿಯ ವ್ಯವಸ್ಥೆ ಅಸಮರ್ಪಕ ವಾಗಿರುವುದು ಒಂದು ಸುದೈವವೆನ್ನಬೇಕು. ಕಳೆದ ಹದಿ ನಾಲ್ಕು ವರ್ಷಗಳಲ್ಲಿ ಬ್ಯಾಂಕುಗಳು ಎರಡು ಬಾರಿ ದೂರ ವಾಣಿಯಲ್ಲಿ ಹೇಳಿದ್ದುದರ ಆಧಾರದ ಮೇಲೆ ನಷ್ಟ ಪರಿ ಹಾರದ ಮೊಖದ್ದಮೆ ಎದುರಿಸಿದವು. 1924 ರಲ್ಲಿ ಬ್ಯಾಂಕ್ ಮ್ಯಾನೇಜರನೊಬ್ಬ, ಗ್ರಾಹಕನೊಬ್ಬನ ಸಟ್ಟಾ ವ್ಯವಹಾರವನ್ನು ಆತನ ಮಾಲೀಕನಿಗೆ ತಿಳಿಸಿದುದರಿಂದಾಗಿ ನೌಕರನಾದ ಗ್ರಾಹಕ ಕೆಲಸ ಕಳೆದುಕೊಂಡ. ದೂರವಾಣಿ ಯಲ್ಲಿ ಮ್ಯಾನೇಜರನ ಲೇವಡಿಯ ಉತ್ತರ ತನ್ನ ಹೆಸರು ಕೆಡಿಸುವಂಥದ್ದೆಂದು ವಾದಿಸಿ ಗ್ರಾಹಕ ಬ್ಯಾಂಕಿನಿಂದ ನಷ್ಟ ವಸೂಲು ಮಾಡಿದ. ಮಿಥ್ಯಾಪವಾದ ಹಾಗೂ ಕರ್ತವ್ಯ ಲೋಪಕ್ಕಾಗಿ ಬ್ಯಾಂಕಿನಿಂದ ಗ್ರಾಹಕನಿಗೆ ಪರಿಹಾರ ದೊರೆ ಯಿತು. ಟೂರ್ನಿಯರ್ ಪ್ರಸಂಗದಲ್ಲಿ, ಬ್ಯಾಂಕರ್ ಹೊರ ಗೆಡವಿದ ವಿಷಯಗಳು ರಹಸ್ಯಪಾಲನೆಯ ಕರ್ತವ್ಯದ ಯಾವ ಮಾನ್ಯಮಾಡಿದ ವಿನಾಯಿತಿಗಳಿಗೂ ಸೇರಿರಲಿಲ್ಲ. ಟೂರ್ನಿ ಯರ್ ಬ್ಯಾಂಕ್‌ಗೆ 9 ಪೌಂಡ್ ಎಂಟು ಷಿಲಿಂಗ್ ಹಾಗೂ ಆರು ಪೆನ್ನಿಗಳ ಸಾಲ ಬಾಕಿ ಉಳಿಸಿಕೊಂಡಿರಬಹುದು, ಸಾಲ ವಾಪಸಾತಿಯನ್ನು ನಿಖರವಾಗಿ ಪಾಲಿಸದಿರಬಹುದು. ಆ ಕಾರಣಕ್ಕಾಗಿ ಆತನ ಉದ್ಯೋಗದಾತನಿಗೆ ಮ್ಯಾನೇಜರ್, ಟೂರ್ನಿಯರ್ ಬ್ಯಾಂಕ್ ಸಾಲದಿಂದ ಬಾಜೀ ವ್ಯಾಪಾರ ಮಾಡುತ್ತಿದ್ದಾನೆಂದು ತಿಳಿಸುವ ಪ್ರಮೇಯವಿರಲಿಲ್ಲ. ವಾಸ್ತವವಾಗಿ ಮುಂದೆ ತಿಳಿದು ಬಂದಂತೆ ಟೂರ್ನಿಯರ್ ಬಾಜೀದಾರನಿಗೆ ಕೊಟ್ಟ ಹಣ ಅವನಿಂದ ಕೊಂಡ ಸರಕಿ ಗಾಗಿಯೇ ಹೊರತು ಸಟ್ಟಾ ವ್ಯಾಪಾರಕ್ಕಾಗಿರಲಿಲ್ಲ.

ಇನ್ನೊಂದು ಇಂಥ ಪ್ರಸಂಗದಲ್ಲಿ ಬ್ಯಾಂಕು ನಷ್ಟ ಪರಿಹಾರವನ್ನು ಬಹಳ ಹತ್ತಿರದಿಂದ ತಪ್ಪಿಸಿಕೊಂಡಿತು. ಮೇರಿ ಸಂದರ್‌ಲ್ಯಾಂಡಳ ದೂರು ತನ್ನ ಸಟ್ಟಾ ವ್ಯವಹಾರ ವನ್ನು ಮ್ಯಾನೇಜರ್ ಅವಳ ಡಾಕ್ಟರ್ ಪತಿಗೆ ತಿಳಿಸಿದುದು ತನ್ನ ಖ್ಯಾತಿಗೆ ಮಸಿ ಬಳಿಯುವಂಥಾದ್ದು ಎಂಬುದು. ಮ್ಯಾನೇಜರನ ದೂರವಾಣಿ ಕರೆಯನ್ನು ಮೇರಿ ಸುಂದರ್ ಲ್ಯಾಂಡಳೇ ತನ್ನ ಪತಿಗೆ ಕೊಟ್ಟಳೋ, ಅಥವಾ ಮೇರಿಯ ಎರಡು ಪೌಂಡ್ ಹದಿನೈದು ಷಿಲಿಂಗ್ ಚೆಕ್ಕನ್ನು ಪಾವತಿ ಮಾಡದೆ ವಾಪಸು ಮಾಡಿದುದಕ್ಕಾಗಿ ಅವಳ ಪತಿಯೇ ಕೋಪದಿಂದ ರಿಸೀವರ್ ಕಸಿದುಕೊಂಡನೋ ತಿಳಿಯು ವಂತಿಲ್ಲ. ರಹಸ್ಯ ಹೊರಗೆಡವಿದ್ದು ಮೇರಿ ಹಾಗೂ ಬ್ಯಾಂಕಿನ ಪರಸ್ಪರ ಹಿತಾಸಕ್ತಿಯ ದೃಷ್ಟಿಯಿಂದ ಹಾಗೂ ಡಾ॥ ಸಂದರ್‌ಲ್ಯಾಂಡನೊಡನೆ ನಡೆದ ಸಂವಾದ ಮೇರಿಯೊಡನೆ ನಡೆಸಿದ ದೂರವಾಣಿ ಸಂವಾದದ ಮುಂದುವರಿದ ಭಾಗ ಎಂಬ ವಾದಗಳಿಂದ ಮ್ಯಾನೇಜರ್ ತನ್ನ ರಹಸ್ಯ ಬಹಿರಂಗ ಗೊಳಿಸಿದ ಕೃತ್ಯವನ್ನು ಸಮರ್ಥಿಸಿಕೊಂಡ.

ಇಂದಿನ ಸಂಪರ್ಕಯುಗದಲ್ಲಿ ಮಾತು ಹಾಗೂ ಧಾಟಿ ಕೆಲವೊಮ್ಮೆ ಕೈಕೊಡುತ್ತದೆ. ಧ್ವನಿಮುದ್ರಿತವಾದ ಟೇಪುಗಳು ಸಂವಾದಗಳನ್ನು ಸಮರ್ಥಿಸುವ ಪುರಾವೆಗಳೆಂದು ನ್ಯಾಯಾಲಯಗಳು ಮಾನ್ಯ ಮಾಡುವವರೆಗೂ. ಬಹುಶಃ ದೂರವಾಣಿಯ ಒಂದು ತುದಿಯಲ್ಲಿ ಹೇಳಿದುದು ಮತ್ತೊಂದು ತುದಿಯಲ್ಲಿ ಬೇರೊಂದು ರೂಪ ಪಡೆಯುವುದು ಅನಿವಾರ್ಯವೇನೋ.

ಬ್ಯಾಂಕ್ ಗ್ರಾಹಕ—ಒಬ್ಬ ವಿಶೇಷ ವ್ಯಕ್ತಿ

ಸಾಮಾನ್ಯವಾಗಿ ಗ್ರಾಹಕನೆಂದರೆ ಸತತವಾಗಿ ವ್ಯವಹಾರದ ಅಭ್ಯಾಸವನ್ನಿಟ್ಟುಕೊಂಡವನು. ನಗದು ವ್ಯವಹಾರವೇ ಅಥವಾ ಉದರಿಯೇ ಎಂಬುದು ಮುಖ್ಯವಲ್ಲ ಮತ್ತು ಸ್ವಾಭಾವಿಕವಾಗಿ ಅಪರಿಚಿತರು ಹಾಗೂ ಖದೀಮರು ಗ್ರಾಹಕರೆನ್ನಿಸಿಕೊಳ್ಳುವುದಿಲ್ಲ. ಆದರೆ ಬ್ಯಾಂಕ್ ಗ್ರಾಹಕನೆನ್ನಿಸಬೇಕಾದರೆ ಠೇವಣಿ ಅಥವಾ ಚಾಲ್ತಿ ಖಾತೆ ಹೊಂದಿರುವುದು ಅನಿವಾರ್ಯ. ನಿತ್ಯ ವ್ಯವಹಾರದ ಅಗತ್ಯವಿಲ್ಲ: ಹಣ ಅಥವಾ ಚೆಕ್ ನೀಡುವ ಯಾವ ವ್ಯಕ್ತಿಯೇ ಆಗಲಿ ಬ್ಯಾಂಕ್ ಅದನ್ನು ಅಂಗೀಕರಿಸಿದ ಕೂಡಲೇ ಗ್ರಾಹಕನಾಗಿ ಬಿಡುತ್ತಾನೆ. ಖಾತೆ ತೆರೆದ ಕೂಡಲೇ ಗ್ರಾಹಕನಾಗಲು ಮತ್ತಾವ ಅವಧಿಗೂ ಕಾಯಬೇಕಾಗಿಲ್ಲ. ಅಪರಿಚಿತ ಅಥವಾ ಕಳ್ಳನೂ ಮೇಲಿನ ನಿಬಂಧನೆಗಳನ್ನು ಪೂರೈಸಬಲ್ಲವನಾದರೆ ಗ್ರಾಹಕನಾಗಬಹುದು ಮತ್ತು ಎಂಥ ಗೌರವಾನ್ವಿತ ವ್ಯಕ್ತಿಯೇ ಆಗಲಿ, ಬೇರೆಯವರು ನೀಡಿದ ಚೆಕ್ ಮುರಿಸಿಕೊಳ್ಳಲು ಎಷ್ಟೇ ಸತತವಾಗಿ ಬ್ಯಾಂಕಿಗೆ ಬರುತ್ತಿದ್ದರೂ ಅವನಿಗೆ ಸ್ವಂತದೊಂದು ಖಾತೆಯಿರದಿದ್ದರೆ ಅವನು ಗ್ರಾಹಕನೆನ್ನಿಸಿಕೊಳ್ಳುವುದಿಲ್ಲ.

ಆದರೆ ಇದಕ್ಕೂ ಅಪವಾದಗಳೂ ಇವೆ. ಬ್ಯಾಂಕ್ ಮ್ಯಾನೇಜರನೊಬ್ಬ ಗ್ರಾಹಕನೊಬ್ಬನಿಗೆ, ಅವನ ಹಣ ವಿನಿಯೋಜನೆ (ಇನ್‌ವೆಸ್ಟ್‌ಮೆಂಟ್) ಬಗ್ಗೆ ಮೂರು ವಾರಕಾಲದ ತಿಳಿವಳಿಕೆ ನೀಡಿದುದೇ, ಹೆಚ್ಚಿನ ಹಣ ರಹಸ್ಯ ಖಾತೆಗೆ ವರ್ಗಾಯಿಸಿದ್ದ. ಜಾಹೀರಾತಿನಂತೆ ವಿನಿಯೋಜನೆಯ ತಿಳಿವಳಿಕೆಗೆ (ಇನ್‌ವೆಸ್ಟ್‌ಮೆಂಟ್ ಅಡ್ವೈಸ್) ಅವಕಾಶವಿದ್ದರೂ, ಬ್ಯಾಂಕಿನ ನಿಯಮಾವಳಿಗಳ ಪ್ರಕಾರ ಅನುಮತಿಯಿರಲಿಲ್ಲ. ಹೀಗೆ ಖಾತೆಯೊಂದನ್ನು ತೆರೆಯದೆಯೂ ಗ್ರಾಹಕನಾಗಿ ಉಳಿದ ಆ ವಿನಿಯೋಜಕ (ಇನ್ವೆಸ್ಟರ್), ಇದಕ್ಕೆ ಪ್ರತಿಯಾಗಿ, ಮತ್ತೊಂದು ಪ್ರಸಂಗದಲ್ಲಿ, ಖದೀಮನೊಬ್ಬ ಮೋಸದಿಂದ ಕಂಪನಿಯ ಹೆಸರಿನಲ್ಲಿ ಖಾತೆ ತೆಗೆದು, ತನ್ನ ಹಣವೆಲ್ಲ ಅದಕ್ಕೆ ವರ್ಗಾಯಿಸಿದ. ಆದರೆ ಮುಂದೆ ಕಂಪನಿಯ ಹೆಸರಿನಲ್ಲಿ ಖಾತೆಯಿದ್ದರೂ ಅದು ಗ್ರಾಹಕನದಲ್ಲ ಎಂದು ಸ್ಥಾಪಿತವಾಯಿತು.

ಯಾರು ಯಾರು?

ಗ್ರಾಹಕನಾರು? ಬ್ಯಾಂಕರನಾರು? ಎಂಬುದು ಇದುವರೆಗೂ ಯಾರಿಗೂ ಖಚಿತವಾಗಿ ತಿಳಿದಿಲ್ಲ. ಕೆಲವೊಮ್ಮೆ ಬ್ಯಾಂಕರನೂ ಮತ್ತೊಂದು ಬ್ಯಾಂಕಿನ ಗ್ರಾಹಕನಾಗಿರುತ್ತಾನೆ. ಮತ್ತು ಕೆಲವೊಮ್ಮೆ ಗ್ರಾಹಕನೂ ಗ್ರಾಹಕನೆನ್ನಿಸಿಕೊಳ್ಳುವುದಿಲ್ಲ. ಗ್ರಾಹಕ ಹಾಗೂ ಬ್ಯಾಂಕರನ ಸ್ಪಷ್ಟರೂಪ ಪಡೆಯಬೇಕಾದರೆ ಮೋಸ ಹಾಗೂ ಖೋಟಾ ಸಹಿಯು, ಶತಮಾನಗಳಿಂದ ರೂಪಿತವಾಗಿರುವ ಶಾಸನಗಳ ಹಾಗೂ ವ್ಯಾಜ್ಯಗಳ ಮೊರೆ ಹೋಗಬೇಕು. ಇಲ್ಲಿನ ಪ್ರಸಂಗಗಳಲ್ಲಿ ಬರುವ ಪಾತ್ರಗಳು ವಿಭಿನ್ನ ರೂಪಗಳನ್ನು ಪ್ರದರ್ಶಿಸುವುದೇ ಅಲ್ಲದೆ ಆಗೊಮ್ಮೆ ಈಗೊಮ್ಮೆ ತಮ್ಮ ನಿಜವಾದ ಬಣ್ಣವನ್ನು ತೋರುತ್ತವೆ.

ಚೆಕ್ ಪದ್ಧತಿ, ಸಾಧ್ಯವಿದ್ದಲ್ಲೆಲ್ಲ, ಸರಳ, ಸುಭದ್ರ, ಸಮಂಜಸ ಹಾಗೂ ಸಮ್ಮತವಾದ ವಿಧಾನವೆಂದು ಖ್ಯಾತವಾಗಿದೆ. ಸೂಕ್ತರಕ್ಷಣೆ ಹಾಗೂ ಉದ್ದೇಶವನ್ನು ಸರಿಯಾಗಿ ಅರ್ಥ ಮಾಡಿಕೊಡಲು ಸಾಧ್ಯವಿರುವುದರಿಂದ ಕಳೆದ ಇನ್ನೂರು ವರ್ಷಗಳಿಂದ ಬ್ಯಾಂಕರರು ಚೆಕ್‌ನ ಪರಕ್ರಾಮಣ ಗುಣವನ್ನು (ನೆಗೋಷಿಯಬಲ್ ಕ್ಯಾರೆಕ್ಟರ್) ಉಳಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಆದರೆ ವ್ಯಾಪಾರಿಗಳು ಚೆಕ್ ಅನ್ನು 'ಆದೇಶಿತ' ಎಂದಷ್ಟೇ ಪರಿಗಣಿಸಲು ಒತ್ತಾಯ ಮಾಡುತ್ತಿದ್ದಾರೆ. ಆದರಂತೆ ಕಾಲಕಾಲಕ್ಕೆ ಅವರು ಪರಕ್ರಾಮ್ಯವಲ್ಲ (ನಾಟ್ ನೆಗೋಷಿಯಬಲ್), ಪ್ರಾಪ್ತಿಕರ್ತನ ಖಾತೆಗೇ (ಅಕೌಂಟ್ ಪೇಯೀ) ಮುಂತಾದ ರೇಖಣಗಳನ್ನು (ಕ್ರಾಸಿಂಗ್) ಜಾರಿಗೆ ತಂದಿದ್ದಾರೆ. ಪರಕ್ರಾಮ್ಯ ಚೆಕ್ಕುಗಳ ಬಳಕೆ ಇಂದು ಕ್ಷೀಣಿಸುತ್ತಿದೆ. ಹೀಗೆ ಚೆಕ್‌ನ ಹಾದಿ ಅದರ ರಚಕ, ಪ್ರಾಪ್ತಿಕರ್ತ, ಅವನ ವಸೂಲಿದಾರ ಬ್ಯಾಂಕರ್, ಮತ್ತು ಪಾವತಿದಾರ ಬ್ಯಾಂಕರ್‌ಗೆ ಸೀಮಿತವಾಗಿದೆ. ಹೆಚ್ಚಿನ ಪ್ರಸಂಗದಲ್ಲಿ ಇದೇ ರೀತಿ ನಡೆಯುತ್ತಿದೆ. ಆದರೆ ಅಪರೂಪದ ಪ್ರಸಂಗಗಳಲ್ಲಿ ಪ್ರಮಾದಗಳು ಸಂಭವಿಸುತ್ತವೆ. ಅಂಥ ಸಂದರ್ಭದಲ್ಲಿ ಚೆಕ್‌ಗೆ ಸಂಬಂಧಪಟ್ಟ ಎಲ್ಲ ವ್ಯಕ್ತಿಗಳೂ ವಿಭಿನ್ನ ಪಾತ್ರಗಳನ್ನು ವಹಿಸುತ್ತಾರೆ. ಚೆಕ್‌ನ ರಚಕ ಸ್ವೀಕರ್ತ ವಸೂಲಿದಾರ ಹಾಗೂ ಪಾವತಿದಾರ ಬ್ಯಾಂಕುಗಳು, ಪ್ರಾಪ್ತಿಕರ್ತ, ಹಿಂಬರಹ ಧಾರಕ, (ಎಂಡಾರ್ಸಿ) ನಿಜವಾದ ಮಾಲೀಕ (ಟ್ರೂ ಓನರ್), ಧಾರಕ (ಹೋಲ್ಡರ್), ಮೌಲ್ಯಕ್ಕಾಗಿ ಧಾರಕ (ಹೋಲ್ಡರ್ ಫಾರ್ ವ್ಯಾಲ್ಯೂ) ಹೀಗೆ ಹಲವಾರು ಮಂದಿ ಇದರಲ್ಲಿ ಸೇರಿರುತ್ತಾರೆ. ಪ್ರತಿಯೊಂದು ಪಾತ್ರಕ್ಕೂ ಸಂದರ್ಭಕ್ಕೆ ತಕ್ಕಂತೆ ವಿವಿಧ ಹಕ್ಕುಗಳು ಹಾಗೂ ಕರ್ತವ್ಯಗಳು ಮತ್ತು ಅಧಿಕಾರ ಹಾಗೂ ಹೊಣೆಗಾರಿಕೆ ಇರುತ್ತವೆ. ಇಂಥವು ಅಪರೂಪದ ಪ್ರಸಂಗಗಳಾದರೂ, ಸಾಚಾ ಚೆಕ್ಕುಗಳ ಪ್ರಾಮಾಣಿಕ ವ್ಯಕ್ತಿಗಳೊಡನೆ ವ್ಯವಹರಿಸುವಾಗ ಪಾಲಿಸಬೇಕಾದ ನಿಯಮಗಳ ರೂಪು ರೇಷೆಯನ್ನು ರೂಪಿಸಲು ನೆರವಾಗುತ್ತದೆ. ಆದ್ದರಿಂದಲೇ ವ್ಯಕ್ತಿಯ ಬಗ್ಗೆ ಅರಿವು ಹಾಗೂ ಬ್ಯಾಂಕಿಂಗ್‌ನಲ್ಲಿ ಅವನ ಪಾತ್ರ ಅರಿತುಕೊಳ್ಳುವುದು ಅನಿವಾರ್ಯ.

ಅಲಕ್ಷ್ಯಕ್ಕೆ ಜವಾಬ್ದಾರಿ

ಖೋಟಾ ಸಹಿ ಹಾಕಿದವ ಹಣ ಎತ್ತಿಹಾಕಿ ಓಡಿ ಹೋಗಿ ಬ್ಯಾಂಕರ್ ಮತ್ತು ನಿಜವಾದ ಮಾಲೀಕನಿಗೆ ವಂಚಿಸಿದಾಗಲೆಲ್ಲ, ಅದರ ಜವಾಬ್ದಾರಿ ಬೀಳುವುದು ಚೆಕ್ಕಿನ ರಚಕ ಅಥವಾ ಬ್ಯಾಂಕರ್ ಇವರಲ್ಲೊಬ್ಬರ ಮೇಲೆ ಎಂಬುದು ಸುಮಾರು ಇನ್ನೂರು ವರ್ಷಗಳ ಹಿಂದೆಯೇ ಸ್ಥಾಪಿತವಾದ ಅಂಶ. ಯಾರ ಅಲಕ್ಷ್ಯದಿಂದ ವಂಚಕನಿಗೆ ಹಣ ಎತ್ತಿಹಾಕಿ ಓಡಿಹೋಗಲು ಸಾಧ್ಯವಾಯಿತೋ ಅವನೇ ನಷ್ಟ ಭರಿಸಬೇಕು ಎಂಬುದೂ ಸ್ಥಿರಪಟ್ಟ ಅಂಶ. ವ್ಯಾಪಾರಿಯೊಬ್ಬನ ಕಾರಕಕೂನ ಹಣದೊಂದಿಗೆ ಓಡಿಹೋದರೆ, ವ್ಯಾಪಾರಿ ನಷ್ಟ ಅನುಭವಿಸಬೇಕಾಗಿ ಬಂದಿತು. ಏಕೆಂದರೆ ಅವನು ಚೆಕ್ಕನ್ನು ತಿದ್ದುವುದಕ್ಕೆ ಅವಕಾಶವಾಗುವಂತೆ ಬರೆದಿದ್ದ. ಬ್ಯಾಂಕಿಗಾದ ನಷ್ಟ ಗ್ರಾಹಕನ ಸ್ಪಷ್ಟ ಹಾಗೂ ಸ್ವಾಭಾವಿಕ ಅಲಕ್ಷ್ಯದ ಪರಿಣಾಮವಾಗಿತ್ತು. ವಂಚನೆ ತಪ್ಪಿಸಲು ಸಾಮಾನ್ಯ ಮತ್ತು ಉಚಿತವಾದ ಮುನ್ನೆಚ್ಚರಿಕೆ ವಹಿಸಲು ಆತ ಅಸಮರ್ಥನಾಗಿದ್ದು, ಅಂಕಿ ಮತ್ತು ಅಕ್ಷರಗಳಲ್ಲಿ ಬರೆದುದು ಎಷ್ಟು ಬೇಜವಾಬ್ದಾರಿಯುತವಾಗಿತ್ತೆಂದರೆ, ಚೆಕ್ಕಿನ ಹಣವನ್ನು ಹೆಚ್ಚಿಸಲು ವಂಚಕನಿಗೆ ಏನೇನೂ ಕಷ್ಟವಾಗಲಿಲ್ಲ. ಮತ್ತೊಂದು ಪ್ರಸಂಗದಲ್ಲಿ ವಕೀಲನ ಆಪ್ತ ಕಾರಕೂನನಿಗೆ ಲಾಭವಾಯಿತು. ಏಕೆಂದರೆ ವಕೀಲ ಸೂಕ್ತ ಹಾಗೂ ಸಾಮಾನ್ಯವಾದ ಮುನ್ನೆಚ್ಚರಿಕೆ ತೆಗೆದುಕೊಂಡಿರಲಿಲ್ಲ. ಎರಡೂ ಪ್ರಸಂಗಗಳಲ್ಲಿ ಗ್ರಾಹಕರ ಅಲಕ್ಷ್ಯದಿಂದಾದ ನಷ್ಟ ಭರಿಸಬೇಕಾಯಿತು.

ಬೇರೊಂದು ಪ್ರಸಂಗದಲ್ಲಿ ಗ್ರಾಹಕ ಚೆಕ್ಕನ್ನು ಅಲಕ್ಷ್ಯದಿಂದ ಬರೆದಿರಲಿಲ್ಲ. ಆದರೂ ವಕೀಲ ವಂಚನೆಯಿಂದ ಹಣ ಪಡೆದುಕೊಂಡ. ಬ್ಯಾಂಕುಗಳು ಪದೇ ಪದೇ ಗ್ರಾಹಕರನ್ನು ಅಲಕ್ಷ್ಯಕ್ಕೆ ಸಹಾಯವಾಗುವ ಅಂಶಗಳ ಮೂಲಕ ಸಿಲುಕಿಸಲು ಪ್ರಯತ್ನಿಸಿವೆ. ಆದರೆ ಅವು ಎಂದೂ ಜಯಶಾಲಿಗಳಾಗಿಲ್ಲ. ಬೇಜವಾಬ್ದಾರಿಯಿಂದ ಚೆಕ್ ಪಾವತಿ ಮಾಡಿರಲಿ ಇಲ್ಲದಿರಲಿ, ತಿದ್ದಿದುದು ಸ್ಪಷ್ಟವಾಗಿ ಕಾಣುವಂತಿರಲಿ ಇಲ್ಲದಿರಲಿ, ಖೋಟಾ ಸಹಿ ಜಾಣ್ಮೆಯಿಂದ ಮಾಡಿದುದಾಗಲಿ, ಒರಟಾಗಿ ಮಾಡಿದುದಾಗಲಿ, ಚೆಕ್ ಪಾವತಿಯಲ್ಲಿ ಬ್ಯಾಂಕುಗಳದು ನೇರ ಜವಾಬ್ದಾರಿಯಿದೆ. ಪೂರ್ವ ಚರಿತ್ರೆಯುಳ್ಳ ಒಬ್ಬ ಕಾರ್ಯದರ್ಶಿಯನ್ನು ನೇಮಿಸಿಕೊಂಡ ಕಂಪನಿಯ ಅಲಕ್ಷ್ಯವೂ ಬ್ಯಾಂಕರನನ್ನು ರಕ್ಷಿಸಲಾಗದು. ಗ್ರಾಹಕ ವಂಚನೆಗೆ ಆಸ್ಪದ ನೀಡುವಂತೆ ವರ್ತಿಸಿರಬಹುದು. ಆದರೆ ಖೋಟಾ ಸಹಿಯ ಚೆಕ್ ಪಾವತಿ ಮಾಡಿದರೆ, ಅದಕ್ಕೆ ಬ್ಯಾಂಕೇ ಜವಾಬ್ದಾರವಾಗುತ್ತದೆ. ಚೆಕ್ ಮತ್ತು ಪಾಸ್ ಬುಕ್ ಭದ್ರವಾಗಿಇಡದಿದ್ದಲ್ಲಿ ಬ್ಯಾಂಕು ಜವಾಬ್ದಾರವಲ್ಲ ಎಂಬ ನಿಯಮನ್ನು ಸ್ಪಷ್ಟವಾಗಿ ಗ್ರಾಹಕ ಪಾಲಿಸದಿರಬಹುದು. ಚೆಕ್ಕನ್ನು ಜೋಪಾನವಾಗಿಡಲು ಗ್ರಾಹಕನ ವಿಫಲತೆ ಗಣನೆಗೆ ಬರುವುದಿಲ್ಲ. ಖೋಟಾ ಸಹಿ ಗುರುತಿಸಲು ಬ್ಯಾಂಕ್ ವಿಫಲತೆಯೇ ಅತಿಮುಖ್ಯವಾದುದು.

ಬ್ಯಾಂಕಿನ ಅಲಕ್ಷ್ಯ ಹಲವಾರು ರೀತಿಯಲ್ಲಿ ಸಂಭವಿಸುತ್ತದೆ. ಅರಿವು ವಿವಿಧ ಶಾಖೆಗಳಲ್ಲಿ ಹಂಚಿಹೋಗಿರುತ್ತದೆ. ಉದಾಹರಣೆಗೆ ಗ್ರಾಹಕನೊಬ್ಬ ಕಛೇರಿಯ ಚೆಕ್ಕುಗಳನ್ನು ತನ್ನ ಸ್ವಂತ ಖಾತೆಗೆ ಜಮಾ ಮಾಡಿಕೊಂಡು ತನ್ನ ಕಛೇರಿಯನ್ನು ವಂಚಿಸುತ್ತಾನೆ. ಚೆಕ್‌ಗಳನ್ನು ಬೇರೊಂದು ಶಾಖೆಯಲ್ಲಿ ಖಾತೆ ತೆರೆದು ಸೇರಿಸುತ್ತಾನೆ. ಚೆಕ್‌ಗಳನ್ನು ಅವನ ಖಾತೆಗೆ ಜಮಾ ಮಾಡುವ ಬ್ಯಾಂಕಿಗೆ ಅವನು ಆ ಕಂಪನಿಯ ನೌಕರನೆಂದು ಗೊತ್ತಿಲ್ಲ ಮತ್ತು ಕಂಪನಿಯ ಖಾತೆ ಆ ಬ್ಯಾಂಕಿನಲ್ಲಿಲ್ಲ. ಮತ್ತೊಂದು ಪ್ರಸಂಗದಲ್ಲಿ ಮಹಿಳೆಯೊಬ್ಬಳು ಖಾತೆ ತೆರೆಯುವಾಗ 'ಗ್ರಾಹಕಿ' ಎಂದು ತಿಳಿಸಿರುತ್ತಾಳೆ. ಆದರೆ ಅವಳು ನಿರ್ದಿಷ್ಟ ಸಮಯದಲ್ಲಿ ವರಮಾನದ ಚೆಕ್‌ಗಳನ್ನು ಜಮಾ ಮಾಡುತ್ತಿರುತ್ತಾಳೆ. ಬ್ಯಾಂಕರ್ ವರಮಾನದ ಮೂಲವನ್ನು ಪ್ರಶ್ನಿಸದಿದ್ದರೆ ಉಪೇಕ್ಷೆ ಮಾಡಿದಂತಾಗುತ್ತದೆ. ಅದೇ ರೀತಿ, ಖಾತೆದಾರ 'ಗುಮಾಸ್ತ' ಎಂದು ವಿವರ ನೀಡಿದರೆ 'ಯಾರ ಬಳಿ ಗುಮಾಸ್ತ' ಎಂದು ವಿಚಾರಿಸದಿದ್ದರೆ ಬ್ಯಾಂಕರ್ ಅಲಕ್ಷ್ಯ ಮಾಡಿದಂತಾಗುತ್ತದೆ.

ಬ್ಯಾಂಕುಗಳು-ಪ್ರತಿಯೊಂದು ವ್ಯವಹಾರದಲ್ಲೂ ಆರಂಭದಿಂದ ಮುನ್ನೆಚ್ಚರಿಕೆ ವಹಿಸಬೇಕು. ಗ್ರಾಹಕನ ಉದ್ಯೋಗದಾತನ, ಗಂಡನ, ಹೆಂಡತಿಯ ಹೆಸರು ಕೇಳುವುದರಿಂದ ಏನು ಲಾಭ? ಗ್ರಾಹಕ, ಖಾತೆ ತೆರೆದ ಅನಂತರ ತನ್ನ ಮಾಲೀಕನನ್ನು ಬದಲಿಸಬಹುದು ಎಂದೆಲ್ಲಾ ಅನಿಸಬಹುದು. ಆದರೂ ನಷ್ಟವಿಲ್ಲ. ಬೇಕಾದ ಮಾಹಿತಿ ದೊರೆಯುವುದಿಲ್ಲ, ನಿಷ್ಪ್ರಯೋಜಕ ಎಂದೆಲ್ಲಾ ಅನಿಸಿದರೂ ಬ್ಯಾಂಕರ್ ವಿಚಾರಿಸುವುದನ್ನು ಮಾತ್ರ ಬಿಡಬಾರದು. ಏಕೆಂದರೆ ಅವನ ಕರ್ತವ್ಯಲೋಪ ಅಲಕ್ಷ್ಯಕ್ಕೆ ಕಾರಣವಾಗುತ್ತದೆ.

ಬ್ಯಾಂಕಿನ ಪರವಾಗಿ ಚೆಕ್ ಸಹಿ ಮಾಡಲು ಅಧಿಕಾರವಿದ್ದ ಬ್ಯಾಂಕ್ ನೌಕರನೊಬ್ಬ, ಮತ್ತೊಂದು ಬ್ಯಾಂಕ್ ಹೆಸರಿನಲ್ಲಿ ಚೆಕ್ ಬರೆದು ಅದನ್ನು ಪ್ರಾಪ್ತಿಕರ್ತನ ಬ್ಯಾಂಕ್‌ನಲ್ಲಿದ್ದ ತನ್ನ ಸ್ವಂತ ಖಾತೆಗೆ ಜಮಾ ಮಾಡಿಕೊಂಡ. ಐದು ಸಾವಿರ ರೂಪಾಯಿ ವರೆಗಿನ ಚೆಕ್‌ಗೆ ತಾನೊಬ್ಬನೇ ಸಹಿ ಮಾಡುತ್ತಿದ್ದ. ಐದು ಸಾವಿರ ಮೀರಿದಚೆಕ್ಕುಗಳಿಗೆ ಮತ್ತೊಬ್ಬ ಅಧಿಕಾರಿ ಜಂಟಿ ಸಹಿ ಮಾಡುತ್ತಿದ್ದ. ಪ್ರಾಪ್ತಿಕರ್ತನ ಹೆಸರು ಯಾವಾಗಲೂ ಬ್ಯಾಂಕ್ ಆದುದರಿಂದ ಅವನು ಯಾವ ಆಕ್ಷೇಪಣೆ ಎತ್ತುತ್ತಿರಲಿಲ್ಲ. ವಸೂಲಿದಾರ ಬ್ಯಾಂಕರ್, ಯಾವ ಸಂಶಯವನ್ನೂ ವ್ಯಕ್ತಪಡಿಸದೆ ಜಮೆ ಮಾಡಿದುದು ಅಲಕ್ಷ್ಯದ ನಡೆಯಾಗಿತ್ತು. ಗ್ರಾಹಕನ ಖಾತೆಯ ಸಿಲ್ಕು ಅತಿ ಕಡಿಮೆಯಿದ್ದಾಗ ಚೆಕ್ಕುಗಳು ಜಮಾ ಆಗಿ, ಹೆಚ್ಚುವರಿ ಹಣವೆಲ್ಲಾ ಬಹುಶಃ ಸಟ್ಟಾ ವ್ಯಾಪಾರಕ್ಕಾಗಿ ಷೇರು ದಲಾಳರುಗಳಿಗೆ ಸಲ್ಲುತ್ತಿತ್ತು. ಮತ್ತು ಜಮೆಯಾದ ಹಣ ಅವನ ಸಂಬಳ ಮತ್ತು ಅಂತಸ್ತಿಗೆ ಮೀರಿದುದಾಗಿತ್ತು. ಈ ಚಹರೆಗಳನ್ನೆಲ್ಲ ಗುರುತಿಸದುದು ಬ್ಯಾಂಕಿನ ಅಲಕ್ಷ್ಯವೆಂದು ಸ್ಥಾಪಿತವಾಯಿತು.

ಗಿರಾಕಿಯ ಅಕೃತ್ಯಗಳೆಲ್ಲ ಸ್ಪಷ್ಟವಾಗಿ ಗೋಚರಿವಂತಿದ್ದು ದರಿಂದ ಬ್ಯಾಂಕ್ ವಿಶ್ವಾಸ ಗಳಿಸಲು ವಿಫಲವಾಯಿತು. ಬ್ಯಾಂಕ್ ಪ್ರಾಪ್ತಿಕರ್ತ (ಪೇಯೀ) ನಿಜವಾದ ಮಾಲೀಕನೇ ಎಂಬುದನ್ನು ಪ್ರಶ್ನಿಸಿತು. ಆದರೆ ಜಯಶಾಲಿ ಯಾಗಲಿಲ್ಲ. ಕೊನೆಯದಾಗಿ ಗ್ರಾಹಕನ ಉದ್ಯೋಗದಾತನ ಧೀರ್ಘಕಾಲದ ಮೌನ ಬ್ಯಾಂಕ್ ನಿಷ್ಕ್ರಿಯವಾಗಲು ಪ್ರೇರೇಪಿಸಿತೆಂದು ವಾದಿಸಿತು, ಆದರೆ ಅಲ್ಲೂ ಜಯ ಸಿಗಲಿಲ್ಲ. ಉದ್ಯೋಗದಾತನ ಮೌನ ನಷ್ಟದ ನೈಜಕಾರಣವಾಗಿರದೆ, ಬ್ಯಾಂಕಿನ ನಿರ್ಲಕ್ಷ್ಯವೇ ನಷ್ಟದ ಕಾರಣವಾಗಿತ್ತು.


ವಸೂಲಿದಾರ ಬ್ಯಾಂಕರುಗಳಿಗೆ ವಂಚನೆಯ ಅಪಾಯ ತಂದೊಡ್ಡುವವರೆಂದರೆ ಕಛೇರಿಯ ನೌಕರರು, ಜವಾನರು, ಡೈರೆಕ್ಟರು ಹಾಗೂ ಪಾಲುದಾರರು. ಇಂಥ ಸಂದರ್ಭದಲ್ಲಿ ಬ್ಯಾಂಕರರು ಮೂಲಭೂತವಾದ ಆದರೆ ಅಗತ್ಯವಾದ ನಿಯಮವನ್ನೊಂದನ್ನು ಪಾಲಿಸಲೇಬೇಕು. ಅಧಿಕಾರ ಪಡೆದ, ಜವಾಬ್ದಾರಿ ಹೊಂದಿರುವ ನೌಕರನೊಬ್ಬ ಸಂಸ್ಥೆಗೆ ಪಾವತಿ ಯಾಗಬೇಕಾದ ಚೆಕ್ಕನ್ನು ಸ್ವಂತ ಖಾತೆಗೆ ಜಮಾ ಮಾಡಿದರೆ, ಅವನ ಬಳಿ ಆ ಚೆಕ್ ಬಂದ ಬಗೆಯನ್ನೂ ಅದಕ್ಕೆ ರುಜು ವಾತಾಗಿ ಸಂಸ್ಥೆಯ ಮಾಲೀಕನ ಲಿಖಿತ ಅನುಮತಿಯನ್ನೂ ಒತ್ತಾಯ ಮಾಡಬೇಕು. ಅಂಥ ಲಿಖಿತ ಅನುಮತಿಯೂ ಖೋಟಾ ಅಲ್ಲವೆಂಬುದನ್ನು ಸಂಸ್ಥೆಯ ಮಾಲೀಕನನ್ನು ನೇರವಾಗಿ ಸಂಪರ್ಕಿಸಿ ತಿಳಿದುಕೊಳ್ಳಬೇಕು. ದೈನಂದಿನ ವ್ಯವಹಾರಗಳ ನಡುವೆ ಇಂಥ ಕ್ರಮವನ್ನು ಪಾಲಿಸುವುದು ಕಷ್ಟದಾಯಕವಾದರೂ, ಬ್ಯಾಂಕರನಿಗೆ ಬೇರೆ ಮಾರ್ಗವೇ ಇಲ್ಲ. ಕಳೆದ ನೂರ ಇಪ್ಪತ್ತೈದು ವರ್ಷಗಳಲ್ಲಿ ನ್ಯಾಯಾಲಯ ದಲ್ಲಿ ಹೂಡಿದ ಬಹುತೇಕ ಮೊಕದ್ದಮೆಗಳು ವಂಚಕ ಬುದ್ಧಿಯ ಗ್ರಾಹಕರಿಂದ ಉಂಟಾಗಿದ್ದವು.

ಸಾಮಾನ್ಯವಾಗಿ ಚೆಕ್ಕಿನ ರಚಕ ಹಾಗೂ ಪ್ರಾಪ್ತಿಕರ್ತ ಮತ್ತು ನಿಜವಾದ ಮಾಲೀಕ ಹಾಗೂ ಖದೀಮ ಇದರ ನಡುವೆ ಒಂದು ವಿದೂರವಾದ ಸಂಪರ್ಕವಿದೆ. ಸಮಸ್ಯೆ ಯೆಂದರೆ ವಸೂಲಿದಾರ ಬ್ಯಾಂಕರನಿಗೆ ಎಲ್ಲ ಪ್ರಸಂಗಗಳಲ್ಲೂ ಇದು ಸ್ಪಷ್ಟ ಹಾಗೂ ಪ್ರತ್ಯಕ್ಷವಾಗಿ ಗೋಚರಿಸುವುದಿಲ್ಲ. ಆದ್ದರಿಂದ ಬ್ಯಾಂಕರರು ತಮ್ಮದೇ ಆದ ನಿಯಮಗಳನ್ನು ರೂಪಿಸಿಕೊಳ್ಳಬೇಕು. ಗ್ರಾಹಕನ ಅಸಾಮಾನ್ಯವಾದ ಯಾವುದೇ ವ್ಯವಹಾರ, ಅವನ ಸಂಪನ್ಮೂಲ ಹಾಗೂ ರೂಢಿಯ ಮಟ್ಟವನ್ನು ಮೀರಿದ ಯಾವುದೇ ವಹಿವಾಟು, ಆರ್ಥಿಕ ವ್ಯವಹಾರದ ನಮೂನೆಯಲ್ಲಿ ಆದ ಮಾರ್ಪಾಟು, ಅಥವಾ ಹೆಚ್ಚು ಮೊತ್ತದ ಜಮಾ ಕಂಡು ಬಂದರೆ ಗ್ರಾಹಕನನ್ನು ವಿಚಾರಿಸಲು ಹಿಂಜರಿಯಬಾರದು ಬಹುತೇಕ ಪ್ರಸಂಗಗಳಲ್ಲಿ ಗ್ರಾಹಕನ ಖಾತೆಯ ಬದಲಾದ ಪ್ರವೃತ್ತಿಗಳು ಬ್ಯಾಂಕರನಿಗೆ ನಿರಾತಂಕವೆನಿಸಬಹುದು. ಆದರೆ ಕೆಲವು ಹದ್ದು ಮೀರಿದ ಪ್ರಸಂಗಗಳಲ್ಲಿ ಇಂಥ ವಿಚಾರಣೆಗಳು ಗ್ರಾಹಕನು ಮಾಲೀಕನ ಹಣವನ್ನು ತನ್ನ ಸ್ವಂತ ಖಾತೆಗೆ ಪರಿವರ್ತನೆ (ಮೋಸ) ಗೊಳಿಸುತ್ತಿದ್ದಾನೆಂಬುದು ಕೇವಲ ಮೊದಲ ಎಚ್ಚರಿಕೆಯಾಗಿರಬಹುದು. ಘಟನೆಗಳೆಲ್ಲ ನಡೆದ ಮೇಲೆಯೇ ನಿಜವಾದ ಬಣ್ಣ ಬಯಲಾಗುವುದು. ಒಂದೋ ಗ್ರಾಹಕನು ಹಣದೊಂದಿಗೆ ಓಡಿಹೋಗಿದ್ದಾನೆ, ಅಥವಾ ಖರ್ಚು ಮಾಡಿರುತ್ತಾನೆ. ನಿಜವಾದ ಮಾಲೀಕ, ನಷ್ಟ ಪರಿಹಾರಕ್ಕಾಗಿ ಬ್ಯಾಂಕರನ ಮೇಲೆ ನೇರ ಜವಾಬ್ದಾರಿ ಹೊರಿಸುತ್ತಾನೆ.

ನಿಯಮ, ಉಪಕರಣ

ಪ್ರತಿಯೊಂದು ವೃತ್ತಿಗೂ ಅದರದೇ ಆದ ಉಪಕರಣ ಮತ್ತು ಸಾಧನಗಳಿವೆ. ಅವುಗಳ ಉಪಯೋಗವನ್ನು ಮತ್ತು ಉಪಯೋಗಿಸುವ ನೌಕರರ ನಡವಳಿಕೆಯನ್ನು ರೂಪಿಸುವ ನಿಯಮಗಳೂ ಇವೆ. ಇಂಜಿನಿಯರನ ಉಪಕರಣ ಸ್ಪ್ಯಾನರ್ ಗಳು ಮತ್ತು ಅಳತೆಮಾಪಕ, ಡಾಕ್ಟರರದು ಸ್ಟೆತೋಸ್ಕೋಪ್, ಮತ್ತು ನೈತಿಕಧರ್ಮ, ಆಡಳಿತಗಾರರ ಮಾತುಗಳು ಹಾಗೂ ಸ್ಫೂರ್ತಿ ಉಪಕರಣ. ಅವುಗಳನ್ನು ಉಪಯೋಗಿಸುವ ರೀತಿ ಸ್ಪಷ್ಟವಾಗಿ ರೂಪಿತವಾಗಿದೆ. ಬ್ಯಾಂಕಿಂಗ್ ಕಾನೂನು ಮತ್ತು ಆಚರಣೆಯಲ್ಲಿ ಕಾನೂನಿನ ಪರಿಕಲ್ಪನೆ ಗಳೇ ಉಪಕರಣಗಳು. ಫೋರ್ಜರಿಯೆಂದರೆ ಮತ್ತೊಬ್ಬರ ಕೈವಾಡ. ಯಥಾಕ್ರಮ ಹಣ ಪಾವತಿಯೆಂದರೆ (ಪೇಮೆಂಟ್ ಇನ್ ಡ್ಯೂ ಕೋರ್ಸ್) ಪ್ರಾಮಾಣಿಕವಾಗಿ, ಅಲಕ್ಷ್ಯ ಮಾಡದೆ, ಮತ್ತು ಸಂಶಯಕ್ಕೆಡೆ ಕೊಡದಂಥ ಸಂದರ್ಭದಲ್ಲಿ ಮಾಡಿದ ಪಾವತಿ. ಹೀಗೆ ಸಾಮಾನ್ಯ ವಿಭಾಗದಲ್ಲಿ ಈ ಪರಿಕಲ್ಪನೆಗಳು ಯಾವ ತೊಂದರೆಯನ್ನೂ ಒಡ್ಡುವುದಿಲ್ಲ.

ಬ್ಯಾಂಕರರಿಗೆ ಎರಡು ಕಾರಣಗಳಿಂದ ತೊಂದರೆಗಳು ಉದ್ಭವಿಸುತ್ತವೆ. ಕೆಲವೊಮ್ಮೆ ಸಾಮಾನ್ಯ ಪರಿಕಲ್ಪನೆಗಳಿಗಿಂತ ಕಾನೂನು ಪರಿಕಲ್ಪನೆಗಳು ಭಿನ್ನವಾಗಿರುತ್ತವೆ. ಬ್ಯಾಂಕಿಂಗ್ ಕಾನೂನು ಮತ್ತು ಆಚರಣೆಯಲ್ಲಿ ಗ್ರಾಹಕನಿಗೂ ವ್ಯಾಪಾರ ಮಳಿಗೆಯ ಗ್ರಾಹಕನಿಗೂ ವ್ಯತ್ಯಾಸವಿದೆ. ಎರಡನೆಯದಾಗಿ, ಅಂತರದ ರೇಖೆ ಎಷ್ಟು ಇಕ್ಕಟ್ಟಾದುದೆಂದರೆ, ಕೆಲವೊಮ್ಮೆ ಪರಕ್ರಾಮಣ ಮತ್ತು ವರ್ಗಾವಣೆಗಳ (ಟ್ರಾನ್ಸ್‌ಫರ್) ವ್ಯತ್ಯಾಸವನ್ನು ಅರಿಯಲು, ಸಾರಭೂತ ಬದಲಾವಣೆ (ಮೆಟೀರಿಯಲ್ ಆಲ್ಟರೇಷನ್) ಎಂದರೇನೆಂದು ತಿಳಿಯಲು ಹಿಂಬರರಹ ಕ್ರಮಬದ್ಧವಾದರೂ ಅನೂರ್ಜಿತ (ಇನ್‌ವ್ಯಾಲಿಡ್) ಏಕಾಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಹೆಣಗಾಡುತ್ತಿದ್ದಾರೆ.



ಸಣ್ಣ ಕೈಗಾರಿಕೆಗೆ ಬ್ಯಾಂಕು ನೆರವು

ಬಿ. ಜೆ. ಶ್ರೀಧರ

ಏರುತ್ತಿರುವ ಜನಸಂಖ್ಯೆ, ಪರಿಹರಿಸಲಾಗದ ಅನಕ್ಷರತೆ, ನೀಗಿಸಲಾಗದ ನಿರುದ್ಯೋಗ, ನಿಸರ್ಗದ ಕಣ್ಣುಮುಚ್ಚಾಲೆ ಯಾಟ, ರಾಜಕೀಯ ದೊಂಬರಾಟ, ಸರ್ಕಾರದ ಅಸ್ಥಿರತೆ, ಬಡತನದ ಪ್ರೇತನೃತ್ಯ, ಈಡೇರದ ಬಯಕೆಗಳ ರುದ್ರ ತಾಂಡವ. ಬೇಕಾದುದನ್ನು ಓದಲು ಅನುಕೂಲವಿಲ್ಲ. ಓದಿದವನಿಗೆ ಉದ್ಯೋಗವಿಲ್ಲ. ಉದ್ಯೋಗಗಳಲ್ಲಿ ಪ್ರಗತಿಯಿಲ್ಲ. ಎಲ್ಲೆಲ್ಲೂ ಯುವಶಕ್ತಿಯ ವಿನಾಶ, ಸಂಪನ್ಮೂಲಗಳ ಸರ್ವನಾಶ. ಇವು ಈ ದೇಶದ ನಿರಂತರ ಸಮಸ್ಯೆಗಳು. ಆದರೆ ಇವುಗಳಿಗೆಲ್ಲ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಮರ್ಪಕ ಉತ್ತರವಾದೀತೆ?—ಎನ್ನುವುದು ಪ್ರಶ್ನೆ. ಸಣ್ಣ ಕೈಗಾರಿಕೆ ಈ ಎಲ್ಲ ಸಮಸ್ಯೆಗಳಿಗೆ ಒಂದು ಉನ್ನತ ಮಟ್ಟದ ಪರಿಹಾರ ಮಾರ್ಗವಾಗಬಲ್ಲುದು : ಸಮಸ್ಯೆಗಳಿಂದ ಅದನ್ನು ಮುಕ್ತಗೊಳಿಸಿ ಮುನ್ನಡೆಸಿದಾಗ ಮಾತ್ರ.

ತಾಂತ್ರಿಕ ಶಿಕ್ಷಣವನ್ನು ಪಡೆದ ಮತ್ತು ಪದವೀಧರನಾದ ಯುವಕನಿಗೆ ಸ್ವಂತ ಉದ್ಯಮವನ್ನು, ಸಣ್ಣ ಕೈಗಾರಿಕೆಯನ್ನು ಪ್ರಾರಂಭಿಸುವಲ್ಲಿ ಉದ್ಯುಕ್ತನಾಗಬೇಕೆಂಬ ಆಸೆ. ಆದರೆ ಆ ಬಡ ಭಾರತೀಯ ಪ್ರತಿಭಾವಂತ ತರುಣ ಆರ್ಥಿಕ ಅಡಚಣೆಯು ಯನ್ನೆದುರಿಸಬೇಕಾಗುತ್ತದೆ.. ಉತ್ಸುಕತೆಯಲ್ಲಿ ಹೊರಟು ಉಸಿರುಕಟ್ಟಿ ನಿಂತ ಇಂಥ ಯುವಕರಿಗೆ ದೇಶದ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾದ ಬ್ಯಾಂಕುಗಳಿಂದ ನೆರವು ಸಾಧ್ಯ. ಸ್ವಂತ ಕಾಲ ಮೇಲೆ ನಿಂತ ಬ್ಯಾಂಕುಗಳು ಇನ್ನೂ ಬಾಲ್ಯಾವಸ್ಥೆ ಯಲ್ಲಿರುವ ಸಣ್ಣ ಕೈಗಾರಿಕೆಗಳನ್ನು ಕೈ ಹಿಡಿದು ಮುನ್ನಡೆಸ ಬಲ್ಲುವು. ದೊಡ್ಡ ಕೈಗಾರಿಕೆಯಲ್ಲಿ ತಲಾ ರೂ. ಐವತ್ತು ಸಾವಿರ ಬಂಡವಾಳಕ್ಕೆ ಒಬ್ಬನಿಗೆ ಕೆಲಸವಾದರೆ, ಸಣ್ಣ ಕೈಗಾರಿಕೆಯಲ್ಲಿ ತಲಾ ರೂ. ಐದು ಸಾವಿರ ಬಂಡವಾಳಕ್ಕೆ ಒಬ್ಬನಿಗೆ ಉದ್ಯೋಗ. ಆದ್ದರಿಂದ ಸಣ್ಣ ಕೈಗಾರಿಕೆಗಳಿಗೆ ಸಹಾಯ ನೀಡಿದರೆ ಉದ್ಯೋಗ ಸಮಸ್ಯೆಗೆ ದೊಡ್ಡ ಪರಿಹಾರ ಒದಗುತ್ತದೆ.

ವರವೋ ಮರೀಚಿಕೆಯೋ ?

ಸದ್ಯ ದೇಶದ ವಿವಿಧ ಬ್ಯಾಂಕುಗಳು ಅಭಿವೃದ್ಧಿ ಯೋಜನೆಗಳನ್ನು ರೂಪಿಸಿರುವುದು ಸ್ವಾಗತಾರ್ಹ. ಇಂಥ ಆದರ್ಶ ಪ್ರಯತ್ನಗಳು ಉದ್ಯಮ ಹಾಗೂ ಸಣ್ಣ ಕೈಗಾರಿಕಾ ರಂಗ ಗಳಿಗೂ ವಿಸ್ತಾರಗೊಂಡಿವೆ. ಇಂದು ಸ್ವಂತ ಕೈಗಾರಿಕೆಗಳನ್ನು ಸ್ಥಾಪಿಸಬೇಕೆನ್ನುವ ಯುವಕನಿಗೆ ಬ್ಯಾಂಕುಗಳ, ಆರ್ಥಿಕ ಸಂಸ್ಥೆಗಳ ಸ್ನೇಹಹಸ್ತವಿದೆ. ಅಲ್ಲದೆ ಸರಕಾರ ಅನೇಕ ರಿಯಾಯಿತಿ ಪ್ರೋತ್ಸಾಹಗಳನ್ನು ನೀಡುವಲ್ಲಿ ಆಸಕ್ತವಾಗಿದೆ. ಜನಸಂಪತ್ತು ಎಲ್ಲೆಡೆ ಲಭ್ಯವಿದೆ. ತಾಂತ್ರಿಕ–ತರಬೇತಿಗಾಗಿ ಅನೇಕ ವಿದ್ಯಾ ಕೇಂದ್ರಗಳು ಆಗಲೇ ಸ್ಥಾಪಿತವಾಗಿವೆ. ಹೀಗಿರುವಲ್ಲಿ ಸಣ್ಣ ಕೈಗಾರಿಕೆಗಳ ಭಾಗ್ಯದ ಬಾಗಿಲು ತೆರೆದಿದೆ ಎಂಬ ಗ್ರಹಿಕೆ ಸರ್ವಸಾಮಾನ್ಯವಾಗಿ ಉಂಟಾಗು ವುದು ಸಹಜ. ಆದರೆ ಬ್ಯಾಂಕುಗಳಿಂದ ನಿರೀಕ್ಷಿತ ಸಹಾಯ ದೊರಕುವುದೆಂಬ ಕೈಗಾರಿಕೆಗಳ ಆಸೆ ಪೂರ್ಣ ಪೂರೈಸಿಲ್ಲ. ಪತ್ರಿಕೆ, ಆಕಾಶವಾಣಿ, ಮಾರ್ಗದರ್ಶಿ ಪುಸ್ತಕಗಳು, ಸರ್ಕಾರದ ಪ್ರಕಟಣೆಗಳು, ರಾಜಕೀಯ ಘೋಷಣೆಗಳು—ಇವುಗಳಿಂದ ಆಶಾದಾಯಕವಾಗಿ ಕಂಡ ಯೋಜನೆಗಳು ಕೇವಲ ಬಿಸಿಲ್ಗುದುರೆಗಳು ಎಂಬ ಸಂಗತಿ ಬ್ಯಾಂಕು ಹಾಗೂ ಆರ್ಥಿಕ ಸಂಸ್ಥೆಗಳಿಗೆ ಸಹಾಯಧನಕ್ಕಾಗಿ ಕಾಲಿಟ್ಟಾಗ ಮನವರಿಕೆ ಯಾಗುತ್ತದೆ. ಹಣ ಮಂಜೂರಾತಿಗಾಗಿ ನೀಡಬೇಕಾದ ಜಾಮೀನು, ಜವಾಬ್ದಾರಿ, ಸಾಕ್ಷ್ಯಗಳು ಒಂದಕ್ಕಿಂತ ಒಂದು ಕ್ಲಿಷ್ಟ. ಹಣ ಕೈಗೆ ದೊರಕುವವರೆಗೆ ಕೈಗಾರಿಕೆಯ ಬವಣೆ ವರ್ಣನಾತೀತ. ನೀತಿನಿರೂಪಣೆಯ ಮಟ್ಟದಲ್ಲಿ ಸಣ್ಣ ಕೈಗಾರಿಕೆ ಗಳಿಗೆ ಒದಗಿಸುವ ಆರ್ಥಿಕ ನೆರವು 'ಅಭಿವೃದ್ಧಿ' ವೆಚ್ಚವಾಗಿ ಪರಿಗಣಿತವಾಗಿದ್ದರೂ ಶಾಖಾ ಮ್ಯಾನೇಜರ್ ಮಟ್ಟದಲ್ಲಿ ಅದು ಸೆಕ್ಯೂರಿಟಿ ಓರಿಯೆಂಟೆಡ್—ಎಂದರೆ ಆಧಾರವೇ, ಭದ್ರತೆಯೇ ಪ್ರಧಾನವಾದ್ದು—ಆಗಿರುತ್ತದೆ. ಬ್ಯಾಂಕುಗಳ ಸ್ಥಾನಿಕ ಅಧಿಕಾರಿ ಗಳು ಸಾಲದ ಹಣವನ್ನು ಮರುಪಾವತಿ ಮಾಡಿಸುವಲ್ಲಿ ಸಂಪೂರ್ಣ ಜವಾಬ್ದಾರರು. ಆದ್ದರಿಂದ ಅವರು ಸಾಲ ನೀಡಿಕೆ ಯಲ್ಲಿ ನಿರೀಕ್ಷೆ ಮೀರಿ ಕಠಿಣರಾಗಬೇಕಾದ ಪ್ರಸಂಗಗಳೇ ಹೆಚ್ಚು. ಹಣ ಪಡೆದಾತನ ಪರದಾಟವನ್ನು ಪರೀಕ್ಷಿಸುವ ತಾಳ್ಮೆ ಅವರಿಗೆ ಇಲ್ಲ. ನಿಗದಿಯಾದ ಅವಧಿಯಲ್ಲಿ ಹಣ ಪಾವತಿಗೆ ಅವರ ಅಮಿತ ಒತ್ತಡ. ಇದನ್ನೆಲ್ಲಾ ಪರಾಂಬರಿಸಿ ದಾಗ ಸರಕಾರ, ಬ್ಯಾಂಕು ಮತ್ತು ಅಭಿವೃದ್ಧಿ ಸಂಘ ಸಂಸ್ಥೆ ಗಳು ಧ್ವನಿಯೇರಿಸಿ ಘೋಷಿಸುವ ಕೈಗಾರಿಕೆಯ ಯೋಜನೆ ಗಳು ಉನ್ನತಾಧಿಕಾರಿಗಳ ಮಟ್ಟದಲ್ಲಿ ಹೂವಿನ ಹಾಸಿಗೆ, ಅಭ್ಯುದಯದ ಸೋಪಾನ ಎಂದೆಲ್ಲಾ ಕಂಡರೆ, ನಿಜ ಕಾರ್ಯಾ

ಚರಣೆಯ ಸಂದರ್ಭದಲ್ಲಿ ಕಲ್ಲು ಮುಳ್ಳುಗಳಿಂದ ಕೂಡಿದ ಕಠಿಣ ಮಾರ್ಗವಾಗಿ ಮಾರ್ಪಡುವುದು ಕಟು ಸತ್ಯ. ಇದು ಉದ್ಯಮಗಳನ್ನೂ ಕೈಗಾರಿಕೆಗಳನ್ನೂ ಕುಂಠಿತಗೊಳಿಸುತ್ತದೆ..

ಆದ್ದರಿಂದ ಉದ್ಯಮಗಳಿಗಾಗಿ ಹಣ ನೀಡುವವರ ಹಾಗೂ ಪಡೆಯುವವರ ನಡುವಿನ ಬಿಗಿ ಮಾರ್ಗ ಸುಲಲಿತವಾದಷ್ಟೂ ಹಿತಕರ. ಹಾವುಗೆ ಮೆಟ್ಟಿದವ ಅದು ಎಲ್ಲಿ ಕಚ್ಚುವುದೆಂಬುದನ್ನು ಬಲ್ಲ. ಅಂತೆಯೇ ಸ್ವಂತ ಉದ್ಯಮಗಳಲ್ಲಿ ತೊಡಗಿದಾತನ ಕಷ್ಟ ಅನ್ಯರಿಗೆ ತಿಳಿಯುವುದು ಅಸಾಧ್ಯ. ಪಡೆದ ಸಾಲದ ಮರುಪಾವತಿಗೆ ಆತನಿಗೆ ಕಾಲಾವಕಾಶದ ಅನುವು ಅತ್ಯವಶ್ಯ. ಮರಳಿಸುವ ಕಂತುಗಳೂ ಭಾರರಹಿತವಾಗಿರುವುದು ಅಪೇಕ್ಷಿತ. ಉದ್ಯಮಗಳಲ್ಲಿ ಉತ್ಪಾದಿತ ಮಾಲುಗಳಿಗೆ ಯೋಗ್ಯ ಮಾರುಕಟ್ಟೆ ನಿರ್ಮಾಣ, ಸಾಗಾಣಿಕೆಯ ಅನುಕೂಲತೆ, ಪಡಿತರಗಳ ಸಾಧ್ಯತೆ ಇವುಗಳಲ್ಲಿ ಸರ್ಕಾರದ ಪಾತ್ರ ಹಿರಿದು. ಹೊರಬಂದ ಸರಕುಗಳಿಗೆ ಯೋಗ್ಯ ಬೆಲೆ ದೊರಕುವಂತಾದಾಗ ಹಣಗಳಿಕೆ ಸುಲಭಸಾಧ್ಯವಾಗುತ್ತದೆ. ಹಾಗಾದಲ್ಲಿ ಯಾವಾತ ತಾನೇ ಕೊಂಡ ಸಾಲವನ್ನು ಕೆಂಡ ಕಾರದೆ ಮರಳಿಸಲಾರ?

ಸ್ವಂತ ಉದ್ಯಮದ, ಕೈಗಾರಿಕೆಯ ಕಲ್ಪನೆಯೂ ಬೋಧನೆಯೂ ಚೆಂದ. ಆದರೆ ಅದರಲ್ಲಿ ಅಡಿಯಿಟ್ಟಾತನ ಸಂಕಟ ವರ್ಣಿಸಲಸದಳ. ಇತ್ತ ಕಾರ್ಮಿಕರ ಕಾಟ, ಅತ್ತ ವಿತರಣೆಗಾಗಿ ಪರದಾಟ, ಮತ್ತೆ ತೆರಿಗೆಯವರೊಡನೆ ಸೆಣಸಾಟ, ಬೆಳಗಿನಿಂದ ಬೈಗಿನ ವರೆಗೆ ಕಣ್ಣಲ್ಲಿ ಕಣ್ಣಿಟ್ಟು ಕಾರ್ಯ ನಿರ್ವಹಿಸಿದರೂ ನಷ್ಟ ಮತ್ತು ಅನ್ಯಾದೃಶ ಅನರ್ಥಗಳು ಅಸಂಭವವಲ್ಲ. ಇಂಥ ಕೈಗಾರಿಕೆಗಳು ವ್ಯಕ್ತಿಯ ಯೋಗ್ಯತೆ ತಾಳ್ಮೆ ಪರಿಶ್ರಮಗಳಿಗೊಂದು ಭಾರೀ ಸವಾಲು. ಆತ ಪಡುವ ಪಾಡಿಗೆ ಮರುಗುವವರಿಲ್ಲ, ಆತನ ಅಭದ್ರ ಜೀವನಕ್ಕೆ ಸಿದ್ಧ ಅಶ್ವಾಸನೆಯಿಲ್ಲ. ಪೂರಕ ಪರಿಸ್ಥಿತಿ ನಿರ್ಮಾಣಗೊಳ್ಳದಿದ್ದರೆ ನಿರುದ್ಯೋಗ, ಬಡತನ, ಆರ್ಥಿಕ ಜಡತೆ ಇವುಗಳೇ ಎರವಾಗಿ ಸಣ್ಣ ಕೈಗಾರಿಕೆ ಹುಟ್ಟಿನಲ್ಲೇ ಸಾಯಬೇಕಾಗಬಹುದು. ಇಂಥ ಪ್ರಸಂಗದಲ್ಲಿ ಸಣ್ಣ ಕೈಗಾರಿಕೆಗಳ ಪ್ರಗತಿಯ ಮಾರ್ಗ ನಿರ್ಮಾಣದಲ್ಲಿ ಬ್ಯಾಂಕುಗಳ ಪಾತ್ರ ಹಿರಿದಾದುದು. ಸರಿಯಾದ ರೀತಿಯಲ್ಲಿ ಅವು ಕಾರ್ಯ ಪ್ರವೃತ್ತವಾದರೆ ಎಡರು ತೊಡರುಗಳು ಹರಿದು ನಾಡು ಮುನ್ನಡೆದೀತು.

ಪ್ರಗತಿಯ ಪಕ್ಷಿನೋಟ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

ಹಾ. ಗು. ಬಾಲಗೋಪಾಲ್

'ಮೈಸೂರು ಬ್ಯಾಂಕು ಸ್ಥಾಪನೆಯಾದಾಗಿನಿಂದ ಸಾಧಿಸಿರುವ ಕಾರ್ಯವನ್ನು ಸಾರ್ವಜನಿಕವಾಗಿ ಹೊಗಳುವ ಯಾವ ಅವಕಾಶವನ್ನೂ ನಾನು ಬಿಡಲಾರೆ. ಬ್ಯಾಂಕು ಸಮಾಜಕ್ಕೆ ಸರ್ವತೋಮುಖ ಸೇವೆ ಸಲ್ಲಿಸುವ ಒಂದು ಸಂಸ್ಥೆ. ಅದರ ಆಡಳಿತ ಮಂಡಳಿಯ ರಚನೆಯಲ್ಲಾಗಲಿ, ಅದನ್ನು ನಿಯಂತ್ರಿಸುವ ನಿಯಮಗಳಲ್ಲಿಯಾಗಲಿ, ಅದು ಯಾವುದೇ ರೀತಿಯ ವರ್ಗ ಅಥವಾ ಜಾತಿ ಭೇದ ತೋರುತ್ತಿಲ್ಲ. ಪ್ರೆಸಿಡೆನ್ಸಿ ಬ್ಯಾಂಕುಗಳ ರೀತ್ಯ ಮೈಸೂರು ಸರ್ಕಾರ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಪ್ರತಿನಿಧಿಸುವುದಿಲ್ಲ.'

ಈ ಮಾತುಗಳನ್ನು ಹೇಳಿದವರು ಆಗ ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಮೈಸೂರು ಬ್ಯಾಂಕ್ ಲಿಮಿಟೆಡ್‌ನ ರಜತ ಮಹೋತ್ಸವದ ಸಂದರ್ಭದಲ್ಲಿ: 1938ರ ಡಿಸೆಂಬರ್ 2ರಂದು ಹೊರತಂದ ಸ್ಮರಣ ಸಂಚಿಕೆಯ ಮುನ್ನುಡಿಯಲ್ಲಿ.

ಮೈಸೂರು ಬ್ಯಾಂಕಿನ ಬಗ್ಗೆ ಮೈಸೂರಿನ ದಿವಾನರೇ ಆಗಿದ್ದವರು ಈ ಮಾತು ಹೇಳುವುದೇನೂ ಅತಿಶಯವಲ್ಲವೆನ್ನಬಹುದು. ಆದರೆ ಹೊರಗಿನವರೂ ಆ ಕಾಲದಲ್ಲಿ ಬ್ಯಾಂಕನ್ನು ಪ್ರಶಂಸಿಸಿದ್ದರು. ಆಗ ದೇಶದ ಪ್ರಮುಖ ಬ್ಯಾಂಕಾಗಿದ್ದ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯ ಅಥವಾ ರಿಜರ್ವ್ ಬ್ಯಾಂಕಿನಷ್ಟೇ ಜನತೆಯ ವಿಶ್ವಾಸವನ್ನು ಮೈಸೂರು ಬ್ಯಾಂಕ್ ಪಡೆದಿದೆಯೆಂಬುದು ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿಯಾಗಿದ್ದ ಸಿ. ಆರ್. ರೆಡ್ಡಿಯವರ ಅಭಿಪ್ರಾಯವಾಗಿತ್ತು. ಬ್ಯಾಂಕಿನ ಸ್ಥಿರ ಬೆಳವಣಿಗೆಯನ್ನು ಅವರು ಮೆಚ್ಚಿ ನುಡಿದಿದ್ದರು. 'ಒಂದು ಬ್ಯಾಂಕು ಸಮಾಜದ ವಾಣಿಜ್ಯರಂಗದ ಪ್ರಗತಿಯೊಡನೆ ಹೇಗೆ ನಿಕಟ ಸಂಪರ್ಕ ಹೊಂದಬಹುದು ಎಂಬುದಕ್ಕೆ ಮೈಸೂರು ಬ್ಯಾಂಕಿನ ಇತಿಹಾಸವೇ ಸಾಕ್ಷಿಯಾಗಿದೆ' ಎಂದು ರಾಷ್ಟ್ರದ ಪ್ರಮುಖ ವಾಣಿಜ್ಯ ಪತ್ರಿಕೆಯಾದ 'ಕಾಮರ್ಸ್' ಆಗ ಬರೆದಿತ್ತು.

ಮೈಸೂರು ಬ್ಯಾಂಕು ತನ್ನ ಪ್ರಾರಂಭದ 25 ವರ್ಷಗಳ ಸಾರ್ಥಕ ಸೇವೆಯಲ್ಲಿ ಗಳಿಸಿದ ಜನರ ಮನ್ನಣೆಗೆ ಈ ಮಾತುಗಳು ಸಾಕ್ಷಿ. ಈ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಎಂ. ವಿಶ್ವೇಶ್ವರಯ್ಯನವರ ಕನಸಾದರೂ ಇದೇ ಆಗಿತ್ತು. ಅವರು ಮೈಸೂರಿನ ದಿವಾನರಾಗಿದ್ದ ಸ್ಮರಣಾರ್ಹ ಅವಧಿಯಲ್ಲಿ ನಾಡಿನ ಸರ್ವತೋಮುಖ ಏಳಿಗೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ನಾಡಿಗೆ ಒಂದು ಸಮಗ್ರ ಕೈಗಾರಿಕೀಕರಣ ಯೋಜನೆಯನ್ನು ರೂಪಿಸಿ ಆ ಯೋಜನೆಗೆ ರೂಪರೇಷೆಗಳನು ನೀಡಿದ್ದು ಈ ಕಾರ್ಯಕ್ರಮಗಳ ಪೈಕಿ ಮುಖ್ಯವಾದ್ದು. ಇಂಥ ಒಂದು ಬೃಹತ್ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಸಾಕಷ್ಟು ಬಂಡವಾಳ ಬೇಕೆಂಬುದನ್ನೂ, ಈ ಬಂಡವಾಳವನ್ನು ಸ್ಥಳೀಯವಾಗಿ ಪೂರೈಸಬಲ್ಲ ಒಂದು ಸಮರ್ಥ ಸಾರ್ವಜನಿಕ ಆರ್ಥಿಕ ಸಂಸ್ಥೆ ಅವಶ್ಯವೆಂಬುದನ್ನೂ ಅವರು ಮನಗಂಡಿದ್ದರು. ಈ ಮನವರಿಕೆಯೇ ಮೈಸೂರು ಬ್ಯಾಂಕಿನ ಜನನಕ್ಕೆ ನಾಂದಿಯಾಯಿತು.

ಆರಂಭ

ಅಂದಿನ ಮಹಾರಾಜರಾಗಿದ್ದ ಕೃಷ್ಣರಾಜ ಒಡೆಯರ ಅಧ್ಯಕ್ಷತೆಯಲ್ಲಿ, ಜೂನ್ 1912 ರಲ್ಲಿ ನಡೆದ ಮೈಸೂರು ಆರ್ಥಿಕ ಸಮ್ಮೇಳನದ ಎರಡನೆಯ ಗೋಷ್ಠಿಯಲ್ಲಿ ಈ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

ಆಗಿನ ಕಾಲದಲ್ಲಿ ರಾಷ್ಟ್ರದಲ್ಲಿ ಬ್ಯಾಂಕಿಂಗ್ ಸಂಸ್ಥೆಗಳ ಪರಿಸ್ಥಿತಿಯನ್ನು ಒಂದೆರಡು ಮಾತುಗಳಲ್ಲಿ ಇಲ್ಲಿ ಹೇಳುವುದು ಉಚಿತವೆನಿಸುತ್ತದೆ. ಆಗ್ಗೆ ಕೇವಲ ಎರಡು ವರ್ಷಗಳ ಹಿಂದೆ ಬರ್ಮದಲ್ಲಿ ಒಳ್ಳೆಯ ಸ್ಥಿತಿಯಲ್ಲಿದ್ದ ಬ್ಯಾಂಕೊಂದು ವಿಫಲವಾಗಿತ್ತು. ಅದರಿಂದಾಗಿ ಸ್ಥಳೀಯ ಜನತೆಯ ಮೇಲೆ ಪ್ರತಿಕೂಲ ಪರಿಣಾಮವಾಗದಿದ್ದರೂ ಅದರಿಂದ ಮುಂಬೈ ಮದರಾಸುಗಳಲ್ಲಿ ಅನೇಕರು ಆರ್ಥಿಕ ನಷ್ಟವನ್ನು ಅನುಭವಿಸಬೇಕಾಯಿತು. 1913ರಿಂದ 1917ರ

ವರೆಗೆ ದೇಶದಲ್ಲಿ 87 ಬ್ಯಾಂಕುಗಳು ನಾನಾ ಕಾರಣಗಳಿಂದಾಗಿ ವಿಫಲವಾಗಿದ್ದುವು. ಮುಖ್ಯವಾಗಿ ಈ ಎಲ್ಲ ಬ್ಯಾಂಕುಗಳ ಆಡಳಿತ ಅಸಮರ್ಪಕವಾಗಿದ್ದು ಜನತೆಯ ವಿಶ್ವಾಸವನ್ನು ಕಳೆದುಕೊಂಡಿದ್ದುವು.

ದೂರದೃಷ್ಟಿಯುಳ್ಳ ಶ್ರೀ ವಿಶ್ವೇಶ್ವರಯ್ಯನವರು ಇಂಥ ಸನ್ನಿವೇಶದಲ್ಲಿ ಮೈಸೂರು ಸಂಸ್ಥಾನದ ಹಿತಕ್ಕಾಗಿ ಕೂಡು ಬಂಡವಾಳ ತತ್ವದ ಮೇಲೆ ಒಂದು ಬ್ಯಾಂಕನ್ನು ಸ್ಥಾಪಿಸುವ ನಿರ್ಧಾರ ಮಾಡಿದರು. ಜೂನ್ 1912ರ ಆರ್ಥಿಕ ಸಮ್ಮೇಳನದಲ್ಲಿ ಬ್ಯಾಂಕನ್ನು ಆರಂಭಿಸುವ ನಿರ್ಣಯವನ್ನು ಕೈಗೊಳ್ಳುತ್ತಿದ್ದಂತೆಯೇ ಮಹಾರಾಜರ ಸರ್ಕಾರ ಅದನ್ನು ಸಂತೋಷದಿಂದ ಅನುಮೋದಿಸಿತು. ಮೈಸೂರಿನ ನಾಗರಿಕರ ಒಂದು ಸಭೆ ಸೇರಿಸಿ, ರಾಜಧಾನಿಯಾದ ಬೆಂಗಳೂರಿನಲ್ಲಿ ಯುಕ್ತ ಬಂಡವಾಳದೊಂದಿಗೆ ಬ್ಯಾಂಕನ್ನು ಆರಂಭಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಯಿತು.

ಮೈಸೂರಿನ ಗಣ್ಯ ವ್ಯಕ್ತಿಗಳು ಬ್ಯಾಂಕಿಗೆ ಸಲ್ಲಿಸಿದ ಸೇವೆಯ ಫಲವಾಗಿ ಬ್ಯಾಂಕು ಆರಂಭದಲ್ಲೇ ಯಶಸ್ಸು ಗಳಿಸಿತು. ಸಂಸ್ಥಾನದ ಪ್ರಥಮ ಮಂಡಳಿಯ ಸದಸ್ಯ ರಾಗಿದ್ದು ಅದೇ ತಾನೇ ನಿವೃತ್ತರಾಗಿದ್ದ, ಅಪಾರ ಆಡಳಿತಾನು ಭವವನ್ನೂ ಸ್ಥಳೀಯ ವಾಣಿಜ್ಯ ಕ್ಷೇತ್ರದ ಬಗೆಗೆ ಅಪರಿಮಿತ ಜ್ಞಾನವನ್ನೂ ಹೊಂದಿದ್ದ ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ ಅವರು ಬ್ಯಾಂಕಿನ ಪ್ರಪ್ರಥಮ ಅಧ್ಯಕ್ಷರಾಗಿ ಆಯ್ಕೆಯಾದರು. ಆಗ ಮೇಲೆ ಹೇಳಿದ ಕಾರಣಗಳಿಗಾಗಿ ಬ್ಯಾಂಕುಗಳನ್ನು ಆರಂಭಿ ಸಲು ಪರಿಸ್ಥಿತಿ ಪ್ರತಿಕೂಲವಾಗಿದ್ದರೂ ಮೈಸೂರು ಬ್ಯಾಂಕು ಜನತೆಯ ವಿಶ್ವಾಸ ಗಳಿಸಲು ಮೂರು ಮುಖ್ಯ ಅಂಶಗಳು ಸಹಕಾರಿಯಾದುವು. ಎಂ. ವಿಶ್ವೇಶ್ವರಯ್ಯನವರ ಅಸಾ ಧಾರಣ ಪ್ರತಿಭೆ, ಕೆ.ಪಿ. ಪುಟ್ಟಣ್ಣಚೆಟ್ಟಿ ಮತ್ತು ಡೈರೆಕ್ಟರುಗಳ ಮಂಡಳಿಯಲ್ಲಿನ ಇತರ ಪ್ರಮುಖರ ದುಡಿಮೆ, ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಮಹಾರಾಜರ ಆಶ್ರಯ ಹಾಗೂ ಬೆಂಬಲ.

ಹೊಸ ಬ್ಯಾಂಕಿಗೆ ಸಂಸ್ಥಾನ ಸರ್ಕಾರ ಕೆಲವು ರಿಯಾಯಿತಿ ಗಳನ್ನು ಮಂಜೂರು ಮಾಡಿತು:

1 ಬ್ಯಾಂಕಿನ ಪೂರೈಕೆಯಾದ ಬಂಡವಾಳದ (ಪೇಯ್ಡ್ ಅಪ್ ಕ್ಯಾಪಿಟಲ್) ಅರ್ಧದಷ್ಟು, ಆದರೆ ರೂ. 5 ಲಕ್ಷಕ್ಕೆ ಮೀರದಷ್ಟು, ಶಿಲ್ಕನ್ನು ಸರ್ಕಾರ ಬ್ಯಾಂಕಿನಲ್ಲಿ ಹತ್ತು ವರ್ಷಗಳ ಕಾಲ ಬಡ್ಡಿ ಇಲ್ಲದೆ ಇಡುವುದು;

2 ಬ್ಯಾಂಕಿಗೆ ಅಗತ್ಯವೆಂದು ಕಂಡುಬಂದರೆ ಸರ್ಕಾರ ಮತ್ತೆ ರೂ. 5 ಲಕ್ಷವನ್ನು ಸಾಲಿಯಾನ ಸೇ. 3ಕ್ಕಿಂತ ಕಡಿಮೆ ಇಲ್ಲದ ಬಡ್ಡಿಯ ಮೇಲೆ ಠೇವಣಿಯಾಗಿಡುವುದು;

3 ಬ್ಯಾಂಕಿನ ನಿರ್ವಹಣೆ ವೆಚ್ಚದಲ್ಲಿ ಅರ್ಧ ಭಾಗವನ್ನು, ಆದರೆ ವರ್ಷಕ್ಕೆ ರೂ.10,000 ಮೀರದಂತೆ, ಮೊದಲ ಐದು ವರ್ಷಗಳಲ್ಲಿ ಸರ್ಕಾರವೇ ವಹಿಸಿಕೊಳ್ಳುವುದು;

4 ಸರ್ಕಾರದ ನಿರ್ಧಾರಕ್ಕೆ ಅನುಗುಣವಾಗಿ ಸರ್ಕಾರಿ ಖಜಾನೆಯ ವಹಿವಾಟುಗಳನ್ನು ಜಿಲ್ಲಾ ಕೇಂದ್ರಗಳು ಮತ್ತು ಇತರ ಸ್ಥಳಗಳಲ್ಲಿ ಸರ್ಕಾರದ ಪರವಾಗಿ ನಡೆಸಲು ಬ್ಯಾಂಕಿಗೆ ಅವಕಾಶ ಕೊಡುವುದು;

5 ಸಂಸ್ಥಾನದ ಎಲ್ಲೆಯೊಳಗೆ ರೈಲು ಸಂಪರ್ಕವಿಲ್ಲದ ಸ್ಥಳಗಳಿಗೆ ಹಣ ಸಾಗಿಸಲು 5 ವರ್ಷಗಳ ವರೆಗೆ ಸರ್ಕಾರದ ರಕ್ಷಣೆ.

1895ರ ಮೈಸೂರು ಕಂಪನಿಗಳ ನಿಯಂತ್ರಣ ಅಧಿ ನಿಯಮಕ್ಕೆ ಅನುಸಾರವಾಗಿ ದಿ ಬ್ಯಾಂಕ್ ಆಫ್ ಮೈಸೂರ್ ಲಿಮಿಟೆಡ್, ಬೆಂಗಳೂರು ಎಂಬ ಹೆಸರಿನಲ್ಲಿ ಒಂದು ಕೂಡುಬಂಡವಾಳ ಬ್ಯಾಂಕು 1913ರ ಮೇ 19ರಂದು ನೊಂದಾವಣೆಗೊಂಡಿತು. ನಿಗದಿಗೊಳಿಸಲಾದ ರೂ. 20ಲಕ್ಷ ಶೀಘ್ರವಾಗಿ ಸಂಗ್ರಹವಾಯಿತು. ಹೊಸ ಬ್ಯಾಂಕಿನ ಪ್ರಧಾನ ಕಛೇರಿಗಾಗಿ ಅವಿನ್ಯೂ ರಸ್ತೆಯಲ್ಲಿ, ಆರು ಪ್ರಮುಖ ರಸ್ತೆಗಳು ಕೂಡುವ ಜಾಗದಲ್ಲಿ, ವಿಶಾಲವಾದ ನಿವೇಶನ ವೊಂದನ್ನು ಸಂಸ್ಥಾನ ಸರ್ಕಾರ ಮಂಜೂರು ಮಾಡಿತು. ದೆಹಲಿಯ ಮತ್ತು ಲಂಡನ್ನಿನ ಮತ್ತು ಇತರ ಸ್ಥಳಗಳ ಬ್ಯಾಂಕುಗಳೊಂದಿಗಿನ ಸಂಪರ್ಕದಿಂದ ಬ್ಯಾಂಕಿಂಗ್ ವಲಯ ದಲ್ಲಿ ಪ್ರಖ್ಯಾತರಾಗಿದ್ದ ಡಬ್ಲ್ಯು.ಸಿ. ರೋಸ್ ಹಾಗೂ ಇತರ ಸಮರ್ಥ ಸಿಬ್ಬಂದಿಯವರ ಸೇವೆ ದೊರಕಿದ್ದು ಬ್ಯಾಂಕಿನ ಹೆಗ್ಗಳಿಕೆಯಾಗಿತ್ತು. ಈ ಎಲ್ಲ ಸಿದ್ಧತೆಗಳ ತರುವಾಯ ಬ್ಯಾಂಕು ತಾರೀಖು 1913ರ ಅಕ್ಟೋಬರ್ 2ರಂದು ತನ್ನ ವಹಿವಾಟನ್ನು ಆರಂಭಿಸಿತು. ಡಬ್ಲ್ಯು.ಸಿ. ರೋಸ್ ಅವರು ಬ್ಯಾಂಕಿನ ಪ್ರಥಮ ಮ್ಯಾನೇಜರಾಗಿದ್ದರು.

ಹೊಸದಾಗಿ ಸ್ಥಾಪಿತವಾದ ಈ ಸಂಸ್ಥೆಯ ಕಾರ್ಯೋ ದ್ದೇಶದ ಬಗೆಗೆ ವಿಶ್ವೇಶ್ವರಯ್ಯನವರು ತಮ್ಮದೇ ಆದ ಕೆಲವು ನಿರೀಕ್ಷಣೆಗಳನ್ನಿರಿಸಿಕೊಂಡಿದ್ದರು. ಈ ಬ್ಯಾಂಕು ಮೈಸೂರು ಸಂಸ್ಥಾನಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಹೊಣೆಯಿಂದ ನಡೆದುಕೊಂಡು ಜೊತೆಜೊತೆಗೆ ಸಂಸ್ಥಾನದ ಹೊರಗೂ ಶಾಖೆಗಳನ್ನು ತೆರೆದು ರಾಷ್ಟ್ರಮಟ್ಟದಲ್ಲಿ ಕಾರ್ಯ ನಿರ್ವಹಿ ಸಬೇಕೆಂಬುದು ಅವರ ಆಶಯವಾಗಿತ್ತು. ಸಂಸ್ಥಾನದ ವಾಣಿಜ್ಯ ರಂಗದ ಅಧ್ಯಯನ ನಡೆಸಲು ಹಾಗೂ ಸಂಸ್ಥಾನದ ಮತ್ತು ಬ್ಯಾಂಕಿನ ನೀತಿಗಳನ್ನು ಕಾರ್ಯಗತಗೊಳಿಸಲು ಸಹಾಯಕವಾಗುವಂತೆ ಬ್ಯಾಂಕು ಒಂದು 'ಸಂಶೋಧನ ವಿಭಾಗ' ತೆರೆಯಬೇಕೆಂದೂ ಅವರು ಬಯಸಿದ್ದರು. ರಾಜ್ಯದ ವಿದ್ಯಾವಂತ ತರುಣರನ್ನು ಆರಿಸಿ ಅವರಿಗೆ ಬ್ಯಾಂಕಿಂಗ್ ಮತ್ತು ಆರ್ಥಿಕ ರಂಗದಲ್ಲಿ ತರಬೇತಿ ನೀಡಬೇಕೆಂಬುದೂ ಅವರ ಇಚ್ಛೆಯಾಗಿತ್ತು. ಇವೆಲ್ಲಕ್ಕಿಂತ ಮೂಲಭೂತವಾಗಿ ಮೈಸೂರು

ಸಂಸ್ಥಾನದ ಕೈಗಾರಿಕೀಕರಣ ಯೋಜನೆಯನ್ನು ಕಾರ್ಯಗತ ಗೊಳಿಸಲು ಸ್ಥಳೀಯರಿಂದ ಠೇವಣಿ ಸ್ವೀಕರಿಸಿ ಸಾಕಷ್ಟು ಹಣ ಪೂರೈಸಬೇಕೆಂಬುದು ಮೈಸೂರು ಬ್ಯಾಂಕಿನ ಹುಟ್ಟಿನ ಹಿನ್ನೆಲೆ. ಈ ಘನ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಬ್ಯಾಂಕು ತನ್ನ ಮೊದಲ 25 ವರ್ಷಗಳಲ್ಲೇ ಸಂಸ್ಥಾನದ ಪ್ರಮುಖ ಕೈಗಾರಿಕಾ ಹಾಗೂ ವ್ಯಾಪಾರೀ ಕೇಂದ್ರಗಳಲ್ಲಿ 19 ಶಾಖೆಗಳನ್ನು ತೆರೆದು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿತ್ತು. ಬೆಂಗಳೂರು, ಮೈಸೂರುಗಳಲ್ಲದೆ ರೇಷ್ಮೆ ಕೇಂದ್ರವಾದ ಚನ್ನಪಟ್ಟಣ, ಅಡಿಕೆ ವ್ಯಾಪಾರ ಕೇಂದ್ರವಾದ ಶಿವಮೊಗ್ಗ, ತೆಂಗಿನಕಾಯಿಯ ವ್ಯಾಪಾರ ಕೇಂದ್ರವಾದ ತಿಪಟೂರು, ಹತ್ತಿಯ ಕೇಂದ್ರವಾದ ದಾವಣಗೆರೆ, ಕಾಫಿಯ ಕೇಂದ್ರವಾದ ಚಿಕ್ಕಮಗಳೂರು ಇವು ಅಂಥ ಕೇಂದ್ರಗಳಲ್ಲಿ ಪ್ರಮುಖವಾದವು.

ಪ್ರಗತಿ

ಬ್ಯಾಂಕಿನ ಪ್ರಗತಿಯ ಅವಲೋಕನೆಗೆ ಅದರ ಇದುವರೆಗಿನ ಇತಿಹಾಸವನ್ನು ಮೂರು ಅವಧಿಗಳಾಗಿ ವಿಂಗಡಿಸುವುದು ಉಚಿತವೆನಿಸುತ್ತದೆ :

1 ಮೊದಲ 25 ವರ್ಷಗಳು: 1913–1938

2 1938–1960: (ಬ್ಯಾಂಕು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಸಹಾಯಕ ಸಂಸ್ಥೆಯಾದ್ದು 1960ರಲ್ಲಿ)

3 1960–1980

ಮೊದಲ 25 ವರ್ಷಗಳ ಅವಧಿಯಲ್ಲಿ ಯಶಸ್ವಿ ಆಡಳಿತದ ನೆರವಿನಿಂದ ಬ್ಯಾಂಕು ಜನತೆಯ ನಂಬಿಕೆ ಗಳಿಸಲು ಸಾಧ್ಯವಾಯಿತು. ಬ್ಯಾಂಕು ಎಲ್ಲರ ತುಂಬು ಹೃದಯದ ಪ್ರಶಂಸೆಗೆ ಪಾತ್ರವಾಯಿತು. ಬ್ಯಾಂಕಿನ ಕಾರ್ಯನಿರ್ವಹಣೆ ಸ್ಥಿರ ಹಾಗೂ ಪ್ರಗತಿಪರವಾಗಿತ್ತು. ಬ್ಯಾಂಕು ಸರ್ಕಾರದ ಪರವಾಗಿ ವಹಿವಾಟು ನಿರ್ವಹಿಸಿದ್ದೇ ಅಲ್ಲದೆ ಜನತೆಯ ಬ್ಯಾಂಕಿಂಗ್ ಅಗತ್ಯಗಳನ್ನು ತೃಪ್ತಿಕರವಾಗಿ ಪೂರೈಸಿತು.

ಮೊದಲೇ ಹೇಳಿದಂತೆ ರಾಜ್ಯದ ಪ್ರಮುಖ ಕೇಂದ್ರಗಳಲ್ಲಿ ಬ್ಯಾಂಕಿನ 19 ಶಾಖೆಗಳಿದ್ದವು. 1938ರ ಅಂತ್ಯದ ವೇಳೆಗೆ ಬ್ಯಾಂಕಿನ ಮೀಸಲು ನಿಧಿ ರೂ. 27.75 ಲಕ್ಷ ಇದ್ದು, ಠೇವಣಿಗಳ ಮೊತ್ತ ರೂ. 250.88 ಲಕ್ಷ ಆಗಿತ್ತು. 1938ರ ಜೂನ್ ವರೆಗೆ ನೀಡಿದ್ದ ಸಾಲ ರೂ. 191.07 ಲಕ್ಷ. 1937ರಲ್ಲಿ ಬ್ಯಾಂಕು ರೂ. 4.54 ಲಕ್ಷ ನಿವ್ವಳ ಲಾಭ ಗಳಿಸಿ, ಸೇ.12ರಷ್ಟು ಡಿವಿಡೆಂಡಿನ ಜೊತೆಗೆ ಸೇ.2ರಷ್ಟು ಬೋನಸ್ಸನ್ನೂ ನೀಡಿತು.

ಭಾರತ ಸರ್ಕಾರ ಹೆಚ್ಚಿನ ಹೊಣೆಗಾರಿಕೆ ವಹಿಸಿದ ಮೇಲೆ 1953ರಿಂದ ಬ್ಯಾಂಕಿನ ಕಾರ್ಯನಿರ್ವಹಣೆಯಲ್ಲಿ ಮತ್ತೊಂದು ಮಹತ್ವಪೂರ್ಣ ಬದಲಾವಣೆ ಉಂಟಾಯಿತು. 'ಸಂಯುಕ್ತ ಹಣಕಾಸು ಸಮಗ್ರೀಕರಣ' ಯೋಜನೆಯ ಅನ್ವಯ 'ದಿ ಬ್ಯಾಂಕ್ ಆಫ್ ಮೈಸೂರು ಲಿಮಿಟೆಡ್' ಮೈಸೂರು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸರ್ಕಾರಿ ವ್ಯವಹಾರ ನಡೆಸಲು ರಿಜರ್ವ್ ಬ್ಯಾಂಕ್ ಆಫ್ ಇಂಡಿಯದ ಪ್ರತಿನಿಧಿಯಾಗಿ ನೇಮಕಗೊಂಡಿತು. ಇಂದು ಬ್ಯಾಂಕಿನ 100 ಶಾಖೆಗಳು ಭಾರತೀಯ ರಿಜರ್ವ್ ಬ್ಯಾಂಕಿನ ಪರವಾಗಿ ಸರ್ಕಾರಿ ವ್ಯವಹಾರ ನಡೆಸುತ್ತಿವೆ.

ಬ್ಯಾಂಕಿನ ಇತಿಹಾಸದಲ್ಲಿ 1960 ಮತ್ತೊಂದು ಮೈಲಿಗಲ್ಲು. ಸಂಸತ್ತು ಅಂಗೀಕರಿಸಿದ ದಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ (ಸಹಾಯಕ ಬ್ಯಾಂಕುಗಳ) ಅಧಿನಿಯಮ (1959) ಕ್ಕೆ ಅನುಗುಣವಾಗಿ ದಿ ಬ್ಯಾಂಕ್ ಆಫ್ ಮೈಸೂರು 1960ರ ಮಾರ್ಚ್ 1ರಿಂದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಎಂದು ಕರೆಯಲ್ಪಟ್ಟಿತು. ದೀರ್ಘ ಅವಧಿಯ ವ್ಯವಹಾರ ಹಾಗೂ ವಿಶಾಲ ಕಾರ್ಯಕ್ಷೇತ್ರದಿಂದಾಗಿ ವಿಶೇಷ ಅನುಭವ ಗಳಿಸಿದ್ದ ಬ್ಯಾಂಕಿಗೆ ರಾಷ್ಟ್ರಮಟ್ಟದ ವ್ಯಾಪ್ತಿಯುಳ್ಳ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಸಹಯೋಗ ಹೆಚ್ಚು ಸಹಾಯಕಾರಿಯಾಗಿ ಪರಿಣಮಿಸಿತು. 1960ರ ಅಂತ್ಯದ ವೇಳೆಗೆ ಬ್ಯಾಂಕಿಗೆ 51 ಶಾಖೆಗಳಿದ್ದುವು. ಅದು ರೂ. 1,994 ಲಕ್ಷ ಠೇವಣಿ ಹೊಂದಿತ್ತು. ಅದು ನೀಡಿದ್ದ ಸಾಲ ರೂ. 1,275 ಲಕ್ಷ.

ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣ

ಇಡೀ ರಾಷ್ಟ್ರದ ಬ್ಯಾಂಕಿಗ್ ಇತಿಹಾಸದಲ್ಲಿ 1969 ಒಂದು ಮಹತ್ವದ ವರ್ಷ. ಆ ವರ್ಷ ದೇಶದ 14 ಪ್ರಮುಖ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಲಾಯಿತು. ರಾಷ್ಟ್ರೀಕರಣದ ಅನಂತರ ಬ್ಯಾಂಕುಗಳ ಶಾಖಾ ವಿಸ್ತರಣೆ ತೀವ್ರ ವೇಗದಲ್ಲಿ ವೃದ್ಧಿಹೊಂದಿತು. ಸರಕಾರಿ ನೀತಿಗೆ ಅನುಗುಣವಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕರ್ನಾಟಕವನ್ನು ತನ್ನ ಪ್ರಮುಖ ಕಾರ್ಯಕ್ಷೇತ್ರವಾಗಿಟ್ಟುಕೊಂಡು ಹೊಸ ಶಾಖೆಗಳನ್ನು ತೆರೆಯಿತು. 1970–80ರ ಅವಧಿಯಲ್ಲಿ ಬ್ಯಾಂಕು ರಾಜ್ಯದ ಹೊರಗಡೆ ಆಂಧ್ರ ಪ್ರದೇಶ, ಮಹಾರಾಷ್ಟ್ರ, ತಮಿಳು ನಾಡು, ಕೇರಳ, ಪಶ್ಚಿಮ ಬಂಗಾಳ ರಾಜ್ಯಗಳಲ್ಲೇ ಅಲ್ಲದೆ ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ, ಗೋವಾಗಳಲ್ಲಿ ಕೂಡ ಶಾಖೆಗಳನ್ನು ಆರಂಭಿಸಿತು. 1980ರ ಅಂತ್ಯದ ವೇಳೆಗೆ ಬ್ಯಾಂಕಿನ ಶಾಖೆಗಳ ಸಂಖ್ಯೆ ಒಟ್ಟು 366 ಇದ್ದು, ಅವುಗಳ ಪೈಕಿ 321 ಶಾಖೆಗಳು ಕರ್ನಾಟಕದಲ್ಲಿದ್ದುವು. 366 ಶಾಖೆಗಳ ಪೈಕಿ 156 ಶಾಖೆಗಳು ಗ್ರಾಮೀಣ ಪ್ರದೇಶಗಳಲ್ಲೂ, 90 ಶಾಖೆಗಳು ತಾಲ್ಲೂಕು ಪ್ರದೇಶಗಳಲ್ಲೂ, ಉಳಿದವು ನಗರ ಮತ್ತು ಮಹಾನಗರ ಪ್ರದೇಶಗಳಲ್ಲೂ ಇದ್ದುವು.

ರಾಷ್ಟ್ರೀಕರಣದ ಪ್ರಭಾವ ಹಲವು ರೀತಿಗಳಲ್ಲಾಗಿದೆ. ಬ್ಯಾಂಕುಗಳು ದೇಶದ ಉದ್ದಗಲಕ್ಕೂ ತಮ್ಮ ಶಾಖೆಗಳನ್ನು

ತೆರೆದಿವೆ. ಕೃಷಿ ಮತ್ತು ಸಣ್ಣ ಕೈಗಾರಿಕೆಗಳಿಗೆ ಪ್ರಥಮ ಪ್ರಾಶಸ್ತ್ಯ ಕೊಡಲಾಗಿದೆ. 20 ಅಂಶಗಳ ಆರ್ಥಿಕ ಕಾರ್ಯಕ್ರಮದ ಅನ್ವಯ ಸಮಾಜದ ದುರ್ಬಲ ವರ್ಗದವರಿಗೆ ಸುಲಭವಾಗಿ ಬ್ಯಾಂಕ್ ನೆರವು ದೊರಕುತ್ತಿದೆ. ದಲಿತರ ಜೀವನ ಮಟ್ಟವನ್ನು ಏರಿಸುವುದರ ಮೂಲಕ ಸಾಮಾಜಿಕ ಪರಿವರ್ತನೆಯನ್ನುಂಟುಮಾಡುವ ಹೊಣೆಯನ್ನು ಬ್ಯಾಂಕುಗಳಿಗೆ ವಹಿಸಿಕೊಡಲಾಗಿದೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಈ ಹೊಣೆಯ ಮಹತ್ವವನ್ನು ಅರಿತು ಕರ್ನಾಟಕದಲ್ಲಿ, ಅದರಲ್ಲೂ ,ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ, ಸಾಮಾಜಿಕ–ಆರ್ಥಿಕ ಬದಲಾವಣೆಯನ್ನು ತರುವುದರಲ್ಲಿ ಪರಿಣಾಮಕಾರಿ ಸಾಧನವಾಗಿ ಕಾರ್ಯ ನಿರ್ವಹಿಸುತ್ತಿದೆ. ಸರ್ಕಾರ ಮತ್ತು ರಿಜರ್ವ್ ಬ್ಯಾಂಕಿನ ಅಪೇಕ್ಷೆಯಂತೆ 20 ಅಂಶಗಳ ಆರ್ಥಿಕ ಕಾರ್ಯಕ್ರಮದ ಅನ್ವಯ ನೀಡಿದ ಸಾಲ ಹಾಗೂ ಉದ್ಯೋಗಾಭಿಮುಖಿ ಸಾಲಗಳೂ ಸೇರಿದಂತೆ ಆದ್ಯತೆಯ ವಲಯಗಳಿಗೆ ನೀಡಿದ ಸಾಲದಲ್ಲಿ ಗಮನಾರ್ಹ ಏರಿಕೆ ಕಂಡುಬಂದಿದೆ.

ಆಧುನಿಕ ಜೀವನದ ರೀತಿ ನೀತಿಗಳು ವೈವಿಧ್ಯಮಯವಾಗಿರುವುದರ ಜೊತೆಗೆ ಸಂಕೀರ್ಣವಾಗಿವೆ. ಇದರೊಂದಿಗೆ ವಾಣಿಜ್ಯ ಮತ್ತು ಕೈಗಾರಿಕೆಗಳ ಜೀವಾಳವಾಗಿರುವ ಬ್ಯಾಂಕಿಂಗ್ ಉದ್ಯಮ ಮಹತ್ತರ ಬದಲಾವಣೆಗಳಿಗೆ ಒಳಗಾಗಿದೆ. 1980ರ ದಶಕದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಜನತೆಗೆ ಅಗತ್ಯವಿರುವ ಎಲ್ಲ ಬ್ಯಾಂಕಿಂಗ್ ಸೌಲಭ್ಯಗಳನ್ನೂ ಒದಗಿಸುವ ಸಾಮರ್ಥ್ಯ ಪಡೆದಿದೆ. ಅತಿ ಸಣ್ಣ ಗಾತ್ರದ ಕೈಗಾರಿಕೆಯಿಂದ ಹಿಡಿದು ಅಂತರರಾಷ್ಟ್ರೀಯ ವ್ಯವಹಾರ ನಡೆಸುವಂಥ ಅತ್ಯಂತ ಜಟಿಲವಾದ ಕೈಗಾರಿಕಾ ಘಟಕಗಳಿಗೂ ನೆರವು ನೀಡುವ ಸಾಮರ್ಥ್ಯ ಬ್ಯಾಂಕಿಗಿದೆ

1980ರ ಅಂತ್ಯದಲ್ಲಿ ಬ್ಯಾಂಕಿನ ಹಣಕಾಸು

ಶಾಖೆಗಳು	366
ಕರ್ನಾಟಕದಲ್ಲಿ	321
ಮೀಸಲು ನಿಧಿ	ರೂ. 195.16 ಲಕ್ಷ
ಠೇವಣಿ	ರೂ. 34,357.41 ಲಕ್ಷ
ಮುಂಗಡಗಳು	ರೂ. 19,585.82 ಲಕ್ಷ

ಆದ್ಯತೆಯ ವಲಯಗಳಿಗೆ ನೀಡಲಾದ ಮುಂಗಡಗಳು

		(ಲಕ್ಷ ರೂ.)	
	ಖಾತೆಗಳ ಸಂಖ್ಯೆ	ಮಂಜೂರಾದ ಮಿತಿ	ಬಾಕಿ
ಸಣ್ಣ ಕೈಗಾರಿಕೆಗಳಿಗೆ			
1 ರಫ್ತು ಸಾಲ	91	418.00	257.00
2 ಇತರ	11,817	3,566.00	2,661.00
ಕೃಷಿಗೆ	81,581	5,329.00	4,011.00
ಸಣ್ಣ ವ್ಯಾಪಾರಗಳಿಗೆ	32,428	807.00	659.00
ಇತರ ವಲಯಗಳಿಗೆ			
ರಫ್ತು ಸಾಲ	72	599.00	346.00
	1,25,989	10,719.00	7,934.00

ರೈತರಿಗೆ ನೆರವು

ಕೃಷಿರಂಗದಲ್ಲಿ ನೆರವು ಪಡೆದ ರೈತರಸಂಖ್ಯೆ, ನೆರವಿನ ಮೊತ್ತ ಎರಡರಲ್ಲೂ ಅಸಾಧಾರಣ ಪ್ರಗತಿ ಸಾಧಿಸಿದೆ. 81,581 ಕೃಷಿ ಸಾಲ ಖಾತೆಗಳ ಮೂಲಕ ನೇರ ಹಾಗೂ ಪರೋಕ್ಷ ಸಾಲಗಳನ್ನು ನೀಡಲಾಗಿದೆ. ಕರ್ನಾಟಕದಲ್ಲಿ 200ಕ್ಕೂ ಹೆಚ್ಚು ರೈತ ಸಹಕಾರಿ ಸಂಘಗಳಿಗೆ ಹಣ ಸಹಾಯ ಒದಗಿಸಲಾಗಿದೆ. ನೇರವಾಗಿ ಮತ್ತು ಸಹಕಾರಿ ಸಂಘಗಳ ಮೂಲಕ ನೆರವು ಪಡೆದ ಸಣ್ಣ ಮತ್ತು ಮಧ್ಯಮ ರೈತರ ಸಂಖ್ಯೆ ಒಟ್ಟು 1,39,862. 1980ರ ಅಂತ್ಯದ ವೇಳೆಗೆ ಬ್ಯಾಂಕು ರಾಜ್ಯದಲ್ಲಿ ಕೃಷಿ ಅಗತ್ಯಗಳಿಗಾಗಿಯೇ ಮೀಸಲಾದ ಒಟ್ಟು 10 ಕೃಷಿ ಅಭಿವೃದ್ಧಿ ಶಾಖೆಗಳನ್ನೂ 13 ಕೃಷಿ ಬ್ಯಾಂಕಿಂಗ್ ವಿಭಾಗಗಳನ್ನೂ ತೆರೆದಿದೆ. ಮುಂದೆಯೂ ಇಂಥ ಶಾಖೆಗಳನ್ನೂ ವಿಭಾಗಗಳನ್ನೂ ತೆರೆಯಲಾಗುವುದು. ದುರ್ಬಲ ವರ್ಗಗಳವರ ಅಭ್ಯುದಯಕ್ಕಾಗಿ ರಾಜ್ಯ ಸರ್ಕಾರ ಕೈಗೊಂಡಿರುವ ಅನೇಕ ಯೋಜನೆಗಳಲ್ಲಿ ಬ್ಯಾಂಕು ಸಕ್ರಿಯವಾಗಿ ಪಾಲ್ಗೊಂಡಿದೆ.

ಹೆಚ್ಚು ಸಂಖ್ಯೆಯಲ್ಲಿ ಸಣ್ಣ ಮತ್ತು ಮಧ್ಯಮ ರೈತರಿಗೆ ನೆರವು ನೀಡಲು ಬ್ಯಾಂಕು ಪ್ರಾಮಾಣಿಕ ಪ್ರಯತ್ನಗಳನ್ನು ಕೈಗೊಂಡಿದೆ. ಬ್ಯಾಂಕಿನ ಹೊಣೆಗಾರಿಕೆಯಲ್ಲಿ ಆರಂಭ ವಾಗಿರುವ ಕಾವೇರಿ ಗ್ರಾಮೀಣ ಬ್ಯಾಂಕು ಹಾಸನ ಮತ್ತು ಮೈಸೂರು ಜಿಲ್ಲೆಗಳ ರೈತರಿಗೆ ನೆರವು ಒದಗಿಸುತ್ತ, ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತದೆ. ತುಮಕೂರು ಜಿಲ್ಲೆಯಲ್ಲಿ ಬ್ಯಾಂಕಿನ ಹೊಣೆಗಾರಿಕೆಯಲ್ಲಿ ಮತ್ತೊಂದು ಗ್ರಾಮೀಣ ಬ್ಯಾಂಕನ್ನು ತೆರೆಯಲು ಉದ್ದೇಶಿಸ ಲಾಗಿದೆ.

ಸಣ್ಣ ಕೈಗಾರಿಕೆಗಳಿಗೆ ನೆರವು

ಸಣ್ಣ ಕೈಗಾರಿಕೆಗಳಿಗೆ ನೆರವು ನೀಡುವ ಸಂದರ್ಭದಲ್ಲಿ ರೂ.25,000ಕ್ಕೂ ಕಡಿಮೆ ಬಂಡವಾಳದ ಅತಿ ಸಣ್ಣ ಕೈಗಾರಿಕೆ ಗಳತ್ತ ಬ್ಯಾಂಕು ಹೆಚ್ಚು ಗಮನ ಹರಿಸಿದೆ. ಆದ್ಯತೆಯ ವಲಯಗಳಿಗೆ ನೀಡುವ ಸಾಲ ಹಾಗೂ 20 ಅಂಶಗಳ ಆರ್ಥಿಕ ಕಾರ್ಯಕ್ರಮದ ಬಗೆಗಿನ ಅಧ್ಯಯನ ತಂಡದ ಶಿಫಾರಸಿನಂತೆ ದುರ್ಬಲ ವರ್ಗಗಳವರಿಗೆ ನೀಡಬೇಕಾದ ಸಾಲ ಸೇ. 12½ ಯಷ್ಟಿರಬೇಕು. ಬ್ಯಾಂಕಿನ, ಮೂಲಕ ಈ ವರ್ಗಗಳವರಿಗೆ ನೀಡಲಾದ ಸಾಲ ಈ ಪ್ರಮಾಣಕ್ಕಿಂತ ಹೆಚ್ಚಿನದಾಗಿದೆ. ರಾಜ್ಯದಲ್ಲಿ ರೇಷ್ಮೆ ಹತ್ತಿ ಬಟ್ಟೆಯ ನೇಕಾರರು, ಕರಕುಶಲಗಾರರು, ಚರ್ಮ ಕೈಗಾರಿಕೆಗಾರರು ಮುಂತಾದ, ಪರಂಪರಾಗತ ಚಟುವಟಿಕೆಗಳಲ್ಲಿ ನಿರತರಾದ ವರಿಗೆ ನೆರವು ನೀಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ ಸಹಯೋಗದ ಹೊಂದಾಣಿಕೆ ಮಾಡಿ ಕೊಳ್ಳಲಾಗಿದೆ. ಅಲ್ಲದೆ ಅರ್ಹರಾದ ತಂತ್ರಜ್ಞರಿಗೆ ಧನ ಸಹಾಯ ನೀಡಲು ಬ್ಯಾಂಕಿನಲ್ಲಿ ಉದಾರ ಸಾಲ ಯೋಜನೆ, ಉದ್ಯಮಿಗಳ ಯೋಜನೆ ಮುಂತಾದ ಆಕರ್ಷಕ ಯೋಜನೆ ಗಳು ಲಭ್ಯವಿವೆ. ಸಣ್ಣ ಕೈಗಾರಿಕೆಗಳಿಗೆ ಯಾವುದೇ ಶುಲ್ಕ ವಿಲ್ಲದೆ ಶ್ರೇಷ್ಠ ಸಲಹೆ, ಮಾರ್ಗದರ್ಶನ ನೀಡಲು ಬ್ಯಾಂಕಿನಲ್ಲಿ ಒಂದು 'ತಾಂತ್ರಿಕ ಸಲಹಾ ವಿಭಾಗ' ವನ್ನು ತೆರೆಯಲಾಗಿದೆ. ಸಣ್ಣ ಕೈಗಾರಿಕಾ ಘಟಕಗಳಿಂದ ತಯಾರಾದ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ದೊರಕಿಸುವ ಉದ್ದೇಶದಿಂದ ಬ್ಯಾಂಕು ಪ್ರತಿ ವರ್ಷ ಬೇರೆ ಬೇರೆ ಸ್ಥಳಗಳಲ್ಲಿ 'ಪ್ರದರ್ಶನ ಹಾಗೂ ಮಾರಾಟ ಏರ್ಪಡಿಸುತ್ತಿದೆ.

ಇಪ್ಪತ್ತು ಅಂಶಗಳ ಕಾರ್ಯಕ್ರಮ

20 ಅಂಶಗಳ ಆರ್ಥಿಕ ಕಾರ್ಯಕ್ರಮ ರಾಷ್ಟ್ರೀಯ ನೀತಿಯ ಮಹತ್ವಪೂರ್ಣ ಅಂಗವಾಗಿದೆ. ಈ ಕಾರ್ಯ ಕ್ರಮದ ಅನ್ವಯ 44,470 ಜನರಿಗೆ ರೂ.2,072.67 ಲಕ್ಷ ಸಹಾಯ ಒದಗಿಸಲಾಗಿದೆ. ಸುಲಭ ಬಡ್ಡಿ ದರ ಯೋಜನೆಯ ಅನ್ವಯ ಸೇ. 4ರ ಬಡ್ಡಿಯ ಮೇಲೆ 36,297 ಜನರಿಗೆ ರೂ.204.03 ಲಕ್ಷ ನೆರವು ಸಂದಿದೆ. ಈ ಎಲ್ಲ ಸಾಲ ನೀಡಿಕೆಯಲ್ಲೂ ಹರಿಜನ ಗಿರಿಜನರಿಗೆ ಆದ್ಯತೆ ನೀಡಲಾಗಿದೆ.

ನಾನಾ ಬಗೆ ನೆರವು

ಬ್ಯಾಂಕಿನ ನವೋನ್ಮೇಷ ಬ್ಯಾಂಕಿಂಗ್ ಯೋಜನೆಯ ಅನ್ವಯ ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನು—ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ—ಕೈಗೊಳ್ಳಲಾಗಿದೆ. ತಾನು ಕಾರ್ಯ ನಿರ್ವಹಿಸುತ್ತಿರುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಾತಾವರಣದೊಂದಿಗೆ ಅನ್ಯೋನ್ಯ ಸಂಬಂಧ ಬೆಳೆಸಿಕೊಂಡು, ಸ್ಥಳೀಯ ಜನಜೀವನದ ಒಂದು ಅವಿಭಾಜ್ಯ ಅಂಗವಾಗಲು ಬ್ಯಾಂಕಿನ ಎಲ್ಲ ಶಾಖೆಗಳೂ ಶ್ರಮಿಸುತ್ತಿವೆ. ಅಂಗವಿಕಲರು, ಯುದ್ಧದಲ್ಲಿ ಮೃತರಾದ ಸೈನಿಕರ ಪತ್ನಿ ಯರು, ಪ್ರವಾಹ–ಬರಗಾಲಗಳಿಂದ ತೊಂದರೆಗೀಡಾದವರು ಮುಂತಾದವರಿಗೆ ಬ್ಯಾಂಕು ಸಹಾಯ ಹಸ್ತ ನೀಡಲು ಅನೇಕ ಯೋಜನೆಗಳನ್ನು ರೂಪಿಸಿದೆ. ಮಕ್ಕಳಲ್ಲಿ ಉಳಿತಾಯದ ಅಭ್ಯಾಸವನ್ನು ಬೆಳೆಸಲು ಶಾಲೆಗಳನ್ನು ದತ್ತುವಾಗಿ ಸ್ವೀಕರಿ ಸಲಾಗಿದೆ. ಅನೇಕ ಹಳ್ಳಿಗಳನ್ನು ದತ್ತು ಸ್ವೀಕರಿಸಿ, ಅವುಗಳ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆ ಸಾಧಿಸಲು ನೆರವು ನೀಡಲಾಗಿದೆ. ಮಕ್ಕಳಿಗಾಗಿ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ ಏರ್ಪಡಿಸಿ ಬಹುಮಾನಗಳನ್ನು ನೀಡಲಾಗುತ್ತದೆ. ಸ್ವಯಂಪ್ರೇರಿತ ರಕ್ತದಾನ ಶಿಬಿರ, ಗಿಡ ನೆಡುವ ಕಾರ್ಯಕ್ರಮ, ಕಾಲರಾ ಮುಂತಾದ ಸೋಂಕು ಜಾಡ್ಯಗಳ ವಿರುದ್ಧ ಇನಾಕ್ಯುಲೇಷನ್, ಇತ್ಯಾದಿ ಕಾರ್ಯ ಗಳನ್ನೂ ಕೈಗೊಳ್ಳುತ್ತಿದೆ.

ಜನತೆಯ ವಿಶ್ವಾಸ ಬೆಂಬಲಗಳಿಂದ ಬ್ಯಾಂಕು ರಾಜ್ಯಕ್ಕೆ ಇನ್ನೂ ಉತ್ತಮ ಸೇವೆ ಸಲ್ಲಿಸುವುದೆಂಬ ಭರವಸೆ ಇದೆ.

ಮಾನವನಿಗೆ ಆಹಾರ ಎಷ್ಟು ಮುಖ್ಯವೋ ಅಕ್ಷರ ಜ್ಞಾನವೂ ಅಷ್ಟೇ ಮುಖ್ಯ

* ೧೯೮೧ರ ಜನಗಣತಿಯ ಅಂದಾಜಿನಂತೆ ಕರ್ನಾಟಕದಲ್ಲಿ ನೂರಕ್ಕೆ ೩೮.೪೧ ಜನ ಮಾತ್ರ ಅಕ್ಷರಸ್ಥರು. ಅವರಲ್ಲಿ ನೂರಕ್ಕೆ ೪೮.೬೧ ಜನ ಗಂಡಸರು, ೨೭.೮೩ ಜನ ಹೆಂಗಸರು ಇದ್ದಾರೆ.

* ಅನಕ್ಷರತೆಯ ನಿರ್ಮೂಲನಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಈಗ ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಜೊತೆಗೆ ಪ್ರತ್ಯೇಕ ಸರ್ಕಾರಿ ಇಲಾಖೆ ಶ್ರಮಿಸುತ್ತಿದೆ.

* ೧೫ರಿಂದ ೩೫ರ ವಯೋಮಿತಿಯಲ್ಲಿ ಬರುವ ವಯಸ್ಕ ಅನಕ್ಷರಸ್ಥರಿಗೆ ಅಕ್ಷರ ಕಲಿಸುವುದು ಇದರ ಗುರಿಯಾಗಿದೆ.

* ಈ ಕಾರ್ಯಕ್ರಮದಲ್ಲಿ ದುರ್ಬಲ ವರ್ಗದವರು ಮತ್ತು ಮಹಿಳೆಯರಿಗೆ ಆದ್ಯತೆ ನೀಡಲಾಗಿದೆ.

* ವ್ಯಕ್ತಿಯ ಸಾಮಾಜಿಕ ಮತ್ತು ರಾಜಕೀಯ ಅರಿವನ್ನು ಬೆಳೆಸಲು ನೆರವಾಗುವುದು.

* ತನ್ನ ಪರಿಸ್ಥಿತಿಯನ್ನು ಅರಿತು ಅದರ ಬಗ್ಗೆ ಚಿಂತಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಹಾಯಕವಾಗುವುದು.

* ತನ್ನ ಉದ್ಯೋಗ—ವೃತ್ತಿಯಲ್ಲಿ ಹೆಚ್ಚಿನ ಪರಿಣತಿ ಮತ್ತು ಉತ್ಪಾದನೆಯಲ್ಲಿ ಹೆಚ್ಚಿನ ಲಾಭ ಪಡೆಯಲು ಪ್ರೇರಣೆ ನೀಡುವುದು.

* ಪ್ರಸ್ತುತ, ರಾಜ್ಯದಲ್ಲಿ ಒಟ್ಟು ೭,೬೭೮ ವಯಸ್ಕರ ಶಿಕ್ಷಣ ಕೇಂದ್ರಗಳು ಕೆಲಸ ಮಾಡುತ್ತಿವೆ. ಇಲ್ಲಿ ೨.೩೧ ಲಕ್ಷ ಜನ ಶಿಕ್ಷಣ ಪಡೆಯುತ್ತಿದ್ದಾರೆ.

* ಕರ್ನಾಟಕದ ಆಡಳಿತದಲ್ಲಿ ನಿಧಾನಕ್ಕೆ ಎಡೆಯಿಲ್ಲ.

ಪ್ರಕಟಣೆ :

ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ

ಪುಸ್ತಕಾವಲೋಕನ

ಸಣ್ಣ ಕೈಗಾರಿಕೆಗಳು: ಆರ್. ಎಸ್. ಆರಾಧ್ಯ; ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ (ದ್ವಿತೀಯ ಮುದ್ರಣ); ಪುಟಗಳು 68 + viii; ಬೆಲೆ 0.50

ಏರುತ್ತಿರುವ ಜನಸಂಖ್ಯೆ, ಉಲ್ಬಣಗೊಂಡಿರುವ ನಿರುದ್ಯೋಗದ ಬವಣೆಗಳಿಗೆ ಸಣ್ಣ ಕೈಗಾರಿಕೆಗಳು ಭಾರತದಲ್ಲಿ ವರಪ್ರಸಾದವಾಗಬಲ್ಲವು. ಯಾವುದನ್ನು ಸಣ್ಣ ಕೈಗಾರಿಕೆ ಎನ್ನುತ್ತಾರೆ, ಅದಕ್ಕೆ ರಾಜ್ಯ ಕೇಂದ್ರ ಸರ್ಕಾರಗಳೂ ಬ್ಯಾಂಕುಗಳೂ ಯಾವ ಯಾವ ಸೌಲಭ್ಯಗಳನ್ನು ಹಾಗೂ ರಿಯಾಯಿತಿಗಳನ್ನು ನೀಡುತ್ತಿವೆ—ಎಂಬುದನ್ನು ಲೇಖಕರು 68 ಪುಟಗಳ ಮಿತಿಯಲ್ಲಿ ಚೆನ್ನಾಗಿ ವಿವರಿಸಿದ್ದಾರೆ. ಲೇಖಕರು ತಮ್ಮ ಉದ್ದೇಶವನ್ನು ಸಾಧಿಸಿದ್ದಾರೆ ಎನ್ನುವುದಕ್ಕೆ ಈ ಪುಸ್ತಕ ಪುನರ್‌ಮುದ್ರಣಗೊಂಡಿರುವುದೇ ಸಾಕ್ಷಿ.

ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವುದಕ್ಕಾಗಿ ವಿಶ್ವವಿದ್ಯಾಲಯ ಪ್ರಚಾರೋಪನ್ಯಾಸಗಳನ್ನು ಹಲವೆಡೆ ಏರ್ಪಡಿಸಿ ಅನಂತರ ಅವನ್ನು ಸುಲಭ ಬೆಲೆಯ ಕಿರು ಹೊತ್ತಗೆಗಳಲ್ಲಿ ಪ್ರಕಟಿಸುತ್ತ ಬಂದಿದೆ. ಮೇಲಿನ ಪುಸ್ತಕ ಈ ಮಾಲಿಕೆಯದು. ಈ ರೀತಿಯ ಯೋಜನೆ ಹಾಕಿಕೊಂಡಿರುವುದಕ್ಕೆ ವಿಶ್ವವಿದ್ಯಾಲಯ ಅಭಿನಂದನಾರ್ಹ.

ಹ. ಶಿ. ಪ್ರ.

ಉದ್ದಿಮೆಗಾರರಿಗಾಗಿ ಸಲಹೆಗಳು ಮತ್ತು ಸೌಲಭ್ಯಗಳು: ವಿ. ಕೆ. ಮೂರ್ತಿ; ಮಾರ್ಕೆಟಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಸರ್ವಿಸಸ್, ಪ್ರಚುರಣ ವಿಭಾಗ, 76/2 ಸೌತ್ ಎಂಡ್ ರೋಡ್, ಬಸವನಗುಡಿ, ಬೆಂಗಳೂರು 560 004; viii + 104 ಪುಟ; ರೂ. 8

ಕರ್ನಾಟಕದಲ್ಲಿ ಎಷ್ಟೋ ಮಂದಿ ವಿದ್ಯಾವಂತರೂ ಪದವೀಧರರೂ ತಾಂತ್ರಿಕಜ್ಞಾನವುಳ್ಳವರೂ ತಮಗೆ ಸರಿಯಾದ ಕೆಲಸಗಳು ಸಿಗದೆ ತಮ್ಮ ಸ್ವಂತ ವ್ಯಾಪಾರ ಉದ್ದಿಮೆಗಳನ್ನು ಸ್ಥಾಪಿಸಲು ಏನು ಮಾಡಬೇಕು, ಹೇಗೆ ಮಾಡಬೇಕು ಎಂಬುದೇ ತೋಚದೆ ಮಂಕಾಗಿ ಕಾಲಹರಣ ಮಾಡುತ್ತಿದ್ದಾರೆ. ಶ್ರೀ ವಿ.ಕೆ. ಮೂರ್ತಿಯವರ ಈ ಹೊಸ ಹೊತ್ತಗೆ ಇಂಥವರಿಗೆ ದಿಕ್ಸೂಚಿ.

ಪುಸ್ತಕದ ಶೀರ್ಷಿಕೆಯೇ ತಿಳಿಸುವಂತೆ, ಪ್ರತೀಕ್ಷೆಯುಳ್ಳ ಭಾವೀ ಉದ್ದಿಮೆಗಾರರು ತಮ್ಮ ಸ್ವಂತ ಉದ್ದಿಮೆ ಪ್ರಾರಂಭಿಸಲು ಪೂರ್ವಭಾವಿಯಾಗಿ ಏನೇನು ಮಾಡಬೇಕು, ಇದಕ್ಕಾಗಿ ಸರಕಾರದಿಂದ ಹಾಗೂ ಆರ್ಥಿಕ ಸಂಸ್ಥೆಗಳಿಂದ ಉದ್ದಿಮೆಗಾರರಿಗೆ ಲಭಿಸಬಹುದಾದಂಥ ಆರ್ಥಿಕ ಹಾಗೂ ಇನ್ನಿತರ ನೆರವು ಸೌಲಭ್ಯಗಳೇನು ಎಂಬುದನ್ನು ಲೇಖಕರು ವಿವರಿಸಿದ್ದಾರೆ. ಇವರು ಸಣ್ಣ ಕೈಗಾರಿಕೆಗಳನ್ನೇ ಮುಖ್ಯವಾಗಿ ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಬರೆದಿದ್ದಾರೆ. ಈ ಪುಸ್ತಕದಲ್ಲಿ ಹತ್ತು ಅಧ್ಯಾಯಗಳಿವೆ. ಮೊದಲ ಆರು ಅಧ್ಯಾಯಗಳಲ್ಲಿ ಉದ್ಯಮಿಯ, ಅಥವಾ ಉದ್ದಿಮೆಯ ವ್ಯವಸ್ಥಾಪಕನ ಲಕ್ಷಣಗಳು, ಉದ್ದಿಮೆಯ ವಿವಿಧ ನೋಟಗಳ ಯೋಜನೆ ನಿರ್ಮಾಣ, ಮಾರುಕಟ್ಟೆಯ ಬಗ್ಗೆ ಯೋಚನೆ, ಕಚ್ಚಾ ಸಾಮಗ್ರಿಗಳು, ಹಣ, ತಾಂತ್ರಿಕಜ್ಞಾನ ಮತ್ತು ಸೌಲಭ್ಯಗಳು ಇತ್ಯಾದಿಗಳನ್ನು ಪಡೆಯಲು ಸಾಧಾರಣವಾಗಿ ಅನುಸರಿಸಬೇಕಾದ, ಗಮನದಲ್ಲಿಟ್ಟುಕೊಳ್ಳಬೇಕಾದ ಕೆಲವು ಅಂಶಗಳು, ವಿವಿಧ ಮಾದರಿಯ ಸಂಸ್ಥೆಗಳು ಹಾಗೂ ಆಯಾ ಸಂಸ್ಥೆಗಳಲ್ಲಿರುವ ಅನುಕೂಲತೆ, ಅನನುಕೂಲತೆಗಳು ಇತ್ಯಾದಿ ವಿಷಯಗಳನ್ನು ಸರಳ ಶೈಲಿಯಲ್ಲಿ ಲೇಖಕರು ತಿಳಿಸಿದ್ದಾರೆ. ಇಷ್ಟೇ ಅಲ್ಲದೆ ಲೆಕ್ಕ ಪುಸ್ತಕಗಳನ್ನು ಬರೆಯುವ ವಿಧಾನವನ್ನೂ ಕೆಲವೇ ಪುಟಗಳಲ್ಲಿ ಸುಲಭ ರೀತಿಯಲ್ಲಿ ಬರೆದು ತಿಳಿಸುವ ಪ್ರಯತ್ನ ಮಾಡಿದ್ದಾರೆ. ಭಾವೀ ಉದ್ದಿಮೆಗಾರರು ಸರಕಾರದಿಂದ, ಇತರ ಸಂಸ್ಥೆಗಳಿಂದ ವಿವಿಧ ರೀತಿಯ ನೆರವು ಸೌಲಭ್ಯಗಳನ್ನು ಪಡೆಯಲೂ ಬ್ಯಾಂಕುಗಳಿಂದ ಸಾಲ ಪಡೆಯುವ ಮೊದಲು ತಯಾರಿಸಬೇಕಾದ ಪರಿಯೋಜನಾ ವರದಿಯ (Project Report) ಆವಶ್ಯಕತೆಯನ್ನೂ ರೀತಿಯನ್ನೂ ಕೊನೆಯಲ್ಲಿ ತಿಳಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಉದ್ದಿಮೆಗಾರರಿಗೆ ದೊರಕುವ ಸೌಲಭ್ಯಗಳ ಬಗ್ಗೆ ಒಂದೇ ಅಧ್ಯಾಯ ಇರುವುದಾದರೂ ಈ ಅಧ್ಯಾಯ ಅನೇಕ ಒಳ್ಳೆಯ ವಿಷಯಗಳನ್ನು ತಿಳಿಸುತ್ತದೆ. ಆದರೆ ವಾಣಿಜ್ಯ ಬ್ಯಾಂಕುಗಳಿಂದ ಉದ್ದಿಮೆಗಾರರಿಗೆ ಎಂಥ ಸೌಲಭ್ಯಗಳು ದೊರಕುತ್ತವೆ ಹಾಗೂ ಅವನ್ನು ಪಡೆಯುವ ವಿಧಾನಗಳೇನು ಎಂಬುದನ್ನು ಇನ್ನೊಂದು ಅಧ್ಯಾಯದಲ್ಲಿ ವಿಸ್ತರಿಸಿದ್ದರೆ ಈ ಪುಸ್ತಕ

ಪರಿಪೂರ್ಣವೆನಿಸುತ್ತಿತ್ತು. ಆಂತೂ ಭಾವೀ ಉದ್ದಿಮೆಗಾರರಿಗೆ ಈ ಪುಸ್ತಕವೊಂದು ಒಳ್ಳೆಯ ಕೈಪಿಡಿ.

ಎಂ.ವಿ.ಎಂ. ಪ್ರಸಾದ್

ಬ್ಯಾಂಕು: ಎಚ್ಚೆಸ್ಕೆ; ಚೇತನ ಕನ್ನಡ ಸಂಘ, ಮೈಸೂರು; 28 ಪುಟ: ರೂ 1.50

ಮಕ್ಕಳಿಗಾಗಿ ಬರೆದಿರುವ ಪುಸ್ತಕ. ನಾವೆಲ್ಲರೂ ಚಿಕ್ಕವರಿದ್ದಾಗ ನವಿಲುಗರಿಯನ್ನು ಕೂಡಿಹಾಕಿ ಅದು ಮರಿ ಹಾಕುತ್ತದೆಯೇನೋ ಎಂದು ನೋಡಿದ್ದೇವೆ. ಈ ನಿದರ್ಶನದೊಂದಿಗೆ ಆರಂಭ ಮಾಡಿಕೊಂಡು ಬ್ಯಾಂಕಿನ ಬಗ್ಗೆ ಚಿಕ್ಕದಾಗಿ ಚೊಕ್ಕವಾಗಿ ಲೇಖಕರು ಹೇಳಿದ್ದಾರೆ. ಆಕರ್ಷಕ ಹೊದಿಕೆಯೊಡನೆ ಒಳಗೂ ಚಿತ್ರಗಳಿದ್ದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು. ಆದರೂ, ಮಕ್ಕಳು ಮಾತ್ರವೇ ಅಲ್ಲದೆ ಎಲ್ಲರೂ ಓದಲೇಬೇಕಾದ ಪುಸ್ತಕ. ಈ ಬಗೆಯ ಕಿರುಹೊತ್ತಗೆಗಳನ್ನು ಎಚ್ಚೆಸ್ಕೆಯವರು ಇನ್ನೂ ಬರೆಯಲಿ; ಹಾಗೂ ಚೇತನ ಕನ್ನಡ ಸಂಘದವರು ಪ್ರಕಟಿಸಲಿ. ನಾವೆಲ್ಲರೂ ಅವನ್ನು ಕೊಳ್ಳೋಣ.

ಹ.ಶಿ.ಪ್ರ.

ಚಂದಾದಾರರಲ್ಲಿ ಮನವಿ

ಮಾನ್ಯರೆ,

1981ರ ಡಿಸೆಂಬರ್ ಸಂಚಿಕೆ ನಿಮ್ಮ ಕೈಲಿದೆ. ಇಲ್ಲಿಗೆ 1981ರ ಚಂದಾ ಮುಗಿಯಿತು. 1982ರಿಂದ ಬ್ಯಾಂಕಿಂಗ್ ಪ್ರಪಂಚ ಏಪ್ರಿಲ್ ಹಾಗೂ ಅಕ್ಟೋಬರ್ ತಿಂಗಳುಗಳಲ್ಲಿ ಹೊರಬರಲಿದೆ. 1982ಕ್ಕೆ ಚಂದಾವನ್ನು ದಯವಿಟ್ಟು ನವೀಕರಿಸಿ. ನಿಮ್ಮ ಸ್ನೇಹಿತರನ್ನೂ ಬ್ಯಾಂಕಿಂಗ್ ಪ್ರಪಂಚದ ಚಂದಾದಾರರನ್ನಾಗಿ ಮಾಡಿ.

ನಿಮಗೆಲ್ಲ 'ಬ್ಯಾಂಕಿಂಗ್ ಪ್ರಪಂಚ' ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತದೆ.

ವಾರ್ಷಿಕ ಚಂದಾ ರೂ. 5.00 **ಆಜೀವ ಚಂದಾ ರೂ. 100.00**

ಲೇಖಕರಲ್ಲಿ ಮನವಿ

ಬ್ಯಾಂಕಿಂಗ್ ಪ್ರಪಂಚಕ್ಕೆ ಯಾರು ಬೇಕಾದರೂ ಹಣ ಮತ್ತು ಬ್ಯಾಂಕಿಂಗ್ ವಿಷಯಗಳನ್ನು ಕುರಿತ ಲೇಖನ ಕಳುಹಿಸಬಹುದು. ಲೇಖನವನ್ನು ಹಾಳೆಯ ಒಂದೇ ಮಗ್ಗುಲಲ್ಲಿ ಬರೆದು ಸಮಿತಿಯ ವಿಳಾಸಕ್ಕೆ ಕಳುಹಿಸಬೇಕು.

ಪ್ರಧಾನ ಕಾರ್ಯದರ್ಶಿ
ಸಮನ್ವಯ ಸಮಿತಿ (ರಿ.)
ಆಶ್ರಯ, ಭಾರತೀಯ ಸ್ಟೇಟ್ ಬ್ಯಾಂಕ್
22, ಜಯಚಾಮರಾಜ ರಸ್ತೆ, ಬೆಂಗಳೂರು ನಗರ ಶಾಖೆ
ಬೆಂಗಳೂರು-560 002

ಎಲ್ಲ ಕಾಲೇಜುಗಳೂ ತಂತಮ್ಮ ವಾಚನಾಲಯ ನಿಧಿಯಿಂದ ಬ್ಯಾಂಕಿಂಗ್ ಪ್ರಪಂಚವನ್ನು ತರಿಸಿಕೊಳ್ಳಬಹುದೆಂದು ಕಾಲೇಜು ಶಿಕ್ಷಣ ನಿರ್ದೇಶಕರು ತಮ್ಮ ಸಂಖ್ಯೆ ಡಿಸಿಇ-14-ಎಮ್ಎಮ್ಎಸ್-81 ದಿನಾಂಕ 28ನೇ ಜುಲೈ 1981ರ ಪತ್ರದಲ್ಲಿ ಶಿಫಾರಸ್ಸು ಮಾಡಿದ್ದಾರೆ. ಆದುದರಿಂದ ಎಲ್ಲ ಕಾಲೇಜುಗಳೂ ಚಂದಾದಾರರಾಗಬೇಕೆಂದು ಪ್ರಾರ್ಥಿಸುತ್ತೇವೆ.

ವಾರ್ಷಿಕ ಚಂದಾ ರೂ. 5.00
ಆಜೀವ ಚಂದಾ ರೂ. 100.00

ಚಂದಾವನ್ನು 'ಸಮನ್ವಯ ಸಮಿತಿ'ಯ ಹೆಸರಿಗೆ ಬರೆದು ಈ ಮುಂದಿನ ವಿಳಾಸಕ್ಕೆ ಕಳುಹಿಸಿಕೊಡಿ.

ಸಮನ್ವಯ ಸಮಿತಿ (ರಿ.)
ದ್ವಾರಾ: ಭಾರತೀಯ ಸ್ಟೇಟ್ ಬ್ಯಾಂಕ್
ಬೆಂಗಳೂರು ನಗರ ಶಾಖೆ
22, ಜಯಚಾಮರಾಜ ಒಡೆಯರ್ ರಸ್ತೆ, ಬೆಂಗಳೂರು-560 002